ಸೋಮವಾರ, ಜನವರಿ 12, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಕ್ಷಣೆಗಾಗಿ ಕೈಗವಸು

ಶೀತಗಾಳಿಯಿಂದ ರಕ್ಷಣೆಗಾಗಿ ಮಹಿಳೆಯೊಬ್ಬರು ಮಗುವಿಗೆ ಕೈಗವಸು ತೊಡಿಸಿದ ದೃಶ್ಯ ಮುಳ್ಳಯ್ಯನಗಿರಿಯಲ್ಲಿ ಭಾನುವಾರ ಕಂಡುಬಂತು



ಗೋಶಾಲೆಗೆ ದೇಣಿಗೆ

ಸುಮಾರು 7,000 ಗೋವುಗಳಿಗೆ ಆಶ್ರಯ ನೀಡಿರುವ ಗುಜರಾತ್‌ನ ವರಾಹಿಯಲ್ಲಿರುವ ಗೋಶಾಲೆಗೆ ನಟ ಸೋನು ಸೂದ್ ₹22 ಲಕ್ಷ ದೇಣಿಗೆ ನೀಡಿದ್ದಾರೆ





ಸುಡಾನ್‌ನ 5,000ಕ್ಕೂ ಹೆಚ್ಚು ಮಹಿಳೆಯರಿಗೆ ಸುರಕ್ಷಿತ ವಾತಾವರಣ ನಿರ್ಮಿಸಿದ ಹೆಗ್ಗಳಿಕೆ

ಬೆಂಗಳೂರಿನ ಸ್ವಾತಿಗೆ ವಿಶ್ವಸಂಸ್ಥೆ ಪ್ರಶಸ್ತಿಯ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನವರಾದ ಭಾರತೀಯ ಸೇನಾಧಿಕಾರಿ ಮೇಜರ್ ಸ್ವಾತಿ ಶಾಂತಕುಮಾರ್ ಅವರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನೀಡುವ 'ಲಿಂಗ ಸಮಾನತೆ ಪ್ರತಿಪಾದಕ ಪ್ರಶಸ್ತಿ–2025'ಕ್ಕೆ ಭಾಜನರಾಗಿದ್ದಾರೆ.

ವಿವಿಧ ಕಾರ್ಯಾಚರಣೆಗಳಲ್ಲಿನ ಶ್ರೇಷ್ಠ ಸೇವೆಯನ್ನು ಗುರುತಿಸಿ ನೀಡುವ ಪ್ರಶಸ್ತಿಗಳನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಘೋಷಿಸಿದ್ದಾರೆ. ಸಂಘರ್ಷ ಪೀಡಿತ ದಕ್ಷಿಣ ಸುಡಾನ್‌ನಲ್ಲಿ ಮಹಿಳೆಯರ ರಕ್ಷಣೆ, ಸಮುದಾಯದ ನೆಮ್ಮದಿಗೆ ಕೈಗೊಂಡ ಸಂವೇದನಾಶೀಲ ಕ್ರಮಗಳಿಗಾಗಿ ಸ್ವಾತಿ ಅವರಿಗೆ ಪ್ರಶಸ್ತಿ ಒಲಿದಿದೆ. 'ಸಮಾನ ಪಾಲುದಾರಿಕೆ–ಶಾಶ್ವತ ಶಾಂತಿ' ಎನ್ನುವುದು ಅವರ ಧ್ಯೇಯವಾಗಿದ್ದು, ಶಾಂತಿ ರಕ್ಷಣಾ ಕಾರ್ಯಾಚರಣೆಗಳ ಮುಂದಾಳತ್ವದಲ್ಲಿ ಲಿಂಗ ಸಮಾನತೆಗೆ ಒತ್ತು ನೀಡಿದ್ದಾರೆ.



ದಕ್ಷಿಣ ಸುಡಾನ್ ಮಹಿಳೆಯರ ಜತೆ ಮೇಜರ್ ಸ್ವಾತಿ ಶಾಂತಕುಮಾರ್

> **ಎಂಜಿನಿಯರಿಂಗ್ ಪದವೀಧರೆಯಾದರೂ ಪರೀಕ್ಷೆ ಬರೆದು ದೇಶ ಸೇವೆಗೆ ಸೇರಿದಳು. ಭಾರತದ ಪರವಾಗಿ ವಿಶ್ವಸಂಸ್ಥೆಯ ಪಡೆಯಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಅವಳ ಬದ್ಧತೆಗೆ ಪ್ರಶಸ್ತಿಯ ಗರಿ ಸಿಕ್ಕಿದೆ**
> **ರಾಜಮಣಿ,** ಸ್ವಾತಿ ಶಾಂತಕುಮಾರ್ ತಾಯಿ

ವಿಶ್ವದಾದ್ಯಂತ ಇರುವ ಎಲ್ಲ ಶಾಂತಿ ರಕ್ಷಣಾ ಕಾರ್ಯಚರಣೆ ಹಾಗೂ ವಿಶ್ವ ಸಂಸ್ಥೆಗಳಿಂದ ಬಂದ ನಾಮನಿರ್ದೇಶನಗಳಲ್ಲಿ ಸ್ವಾತಿ ಆಯ್ಕೆಯಾಗಿದ್ದಾರೆ. ನಾಲ್ಕು ಅಂತಿಮ ಸ್ಪರ್ಧಿಗಳ ನಡುವೆ ನಡೆದ ಮತದಾನದಲ್ಲಿ ಅತ್ಯಧಿಕ ಮತಗಳನ್ನು ಪಡೆದು ಈ ಗೌರವಕ್ಕೆ ಪಾತ್ರವಾಗಿದ್ದಾರೆ.

'ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ತಂಡವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸೇನೆಯಲ್ಲೂ ಲಿಂಗಸಮಾನತೆಯನ್ನು ಬಲಗೊಳಿಸಿದ್ದಾರೆ. ಕಾರ್ಯಾಚರಣೆ ವೇಳೆ ತಳಮಟ್ಟದ ಸಂವಹನ ಮತ್ತು ಸೇನೆಯ ನಂಟನ್ನು ಮತ್ತಷ್ಟು ಗಟ್ಟಿ ಮಾಡಿದ್ದಾರೆ. ಚುರುಕಾದ ವಾಯುಗಸ್ತುಗಳ ಮೂಲಕ ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದಾರೆ. ಇದರಿಂದ ಸುಡಾನ್‌ನ 5,000ಕ್ಕೂ ಹೆಚ್ಚು ಮಹಿಳೆಯರಿಗೆ ಸುರಕ್ಷಿತ ವಾತಾವರಣ ನಿರ್ಮಾಣವಾಗಿದೆ. ಅವರು ಗಳಿಸಿದ ಸಮುದಾಯದ ವಿಶ್ವಾಸ ವಿಶ್ವಸಂಸ್ಥೆಯ ಮುಂದಿನ ಕೆಲಸಗಳಿಗೂ ಪ್ರೇರಣೆಯಾಗಿದೆ' ಎಂದು ಗುಟೆರೆಸ್ ಶ್ಲಾಘಿಸಿದ್ದಾರೆ.


ಎಂಜಿನಿಯರಿಂಗ್ ಪದವೀಧರೆ ಸ್ವಾತಿ ಅವರು ಬೆಂಗಳೂರಿನ ಲಿಂಗರಾಜಪುರದ ನಿವಾಸಿ ಖಾಸಗಿ ಕಂಪನಿ ಉದ್ಯೋಗಿ ಆರ್. ಶಾಂತಕುಮಾರ್, ಸರ್ಕಾರಿ ಶಾಲಾ ಶಿಕ್ಷಕಿ ರಾಜಮಣಿ ದಂಪತಿ ಪುತ್ರಿ. ಎಂಟು ವರ್ಷಗಳಿಂದ ಭಾರತೀಯ ಸೇನೆಯಲ್ಲಿದ್ದು, ಒಂದೂವರೆ ವರ್ಷದಿಂದ ದಕ್ಷಿಣ ಸುಡಾನ್‌ನಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ಸೇವಾನಿರತರಾಗಿದ್ದಾರೆ.

ಸುದ್ದಿ 2 ನಿಮಿಷ

'ಜೆಡಿಎಸ್ ನಿವೇಶನದಲ್ಲಿ ಬಿಜೆಪಿ ಬಹುಮಹಡಿ ಕಟ್ಟಡ'

ಕಲಬುರಗಿ: 'ಯಾವ ಪಕ್ಷದಿಂದ ಎಚ್‌.ಡಿ.ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಬರ್ತಾರೆ? ಅವರ ನಿವೇಶನದಲ್ಲಿ ಬಿಜೆಪಿ ಈಗಾಗಲೇ ಬಹುಮಹಡಿ ಕಟ್ಟಡ ಕಟ್ಟಿಕೊಂಡಿದೆ. ಜೆಡಿಎಸ್ ಇನ್ನೂ ಎಲ್ಲಿಯಾದರೂ ಉಳಿದಿದೆಯಾ?' ಎಂದು ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದರು.

ಎಚ್‌.ಡಿ.ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಮರಳುವ ಕುರಿತ ಸುದ್ದಿಗಾರರ ಪ್ರಶ್ನೆಗೆ ಅವರು ಭಾನುವಾರ ಹೀಗೆ ಪ್ರತಿಕ್ರಿಯಿಸಿದರು.



'ಅವರ ಸಂಬಂಧಿಕರೇ ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸಿದ್ದಾರೆ ಅಂದರೆ ಆ ಪಕ್ಷ ಎಷ್ಟು ಪ್ರಬಲವಾಗಿದೆ? ಈ ಮೊದಲು ಸಹ ಕುಮಾರಸ್ವಾಮಿ ರಾಜ್ಯ ರಾಜಕಾರಣದಲ್ಲಿದ್ದರು. ಏನಾಯ್ತು? ಎಂದು ಪ್ರಶ್ನಿಸಿದರು.

'ಬಿಜೆಪಿ, ಜೆಡಿಎಸ್ ಪಕ್ಷಗಳು ಎಂದಾದರೂ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿವೆಯಾ? ಬಿಜೆಪಿಯೇ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿಲ್ಲ, ಅಂದ ಮೇಲೆ ಜೆಡಿಎಸ್ ಬರುತ್ತಾ?' ಎಂದು ಕೇಳಿದರು.

ಕಾಂಗ್ರೆಸ್ ಜನ್ಮ ಜಾಲಾಡಲು ದಾಖಲೆಗಳಿವೆ –ಅಶೋಕ

ಮೈಸೂರು: 'ಕಾಂಗ್ರೆಸ್‌ನವರ ಜನ್ಮ ಜಾಲಾಡಲು ನಮ್ಮ ಬಳಿ ಸಾಕಷ್ಟು ದಾಖಲೆಗಳಿವೆ. ನರೇಗಾ ಕುರಿತು ಅಧಿವೇಶನ ಕರೆದರೆ ಅವರೇ ಸಿಕ್ಕಿಕೊಳ್ಳುತ್ತಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಇಲ್ಲಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಕ್ಷದ ನಾಯಕರ ಜೊತೆ ಚರ್ಚಿಸಿ ಪಾಲ್ಗೊಳ್ಳುವ ಬಗ್ಗೆ ನಿರ್ಧರಿಸುತ್ತೇವೆ' ಎಂದು ತಿಳಿಸಿದರು.

'ಅಭಿವೃದ್ಧಿ ಕುರಿತು ಕಾಂಗ್ರೆಸ್ ಜೊತೆ ಬಹಿರಂಗ ಚರ್ಚೆಗೆ ಎನ್‌ಡಿಎ ಒಕ್ಕೂಟ ಸಿದ್ಧವಾಗಿದೆ. ಸವಾಲು ಹಾಕಿರುವ ಶಿವಕುಮಾರ್ ಅವರೇ ಅಖಾಡ ನಿರ್ಧರಿಸಲಿ, ನಾವು ಯಾವ ಕುಸ್ತಿಗೂ ಸಿದ್ಧರಿದ್ದೇವೆ' ಎಂದು ಪ್ರತಿಕ್ರಿಯಿಸಿದರು.

ನರೇಗಾ ಹೆಸರು ಬದಲಾವಣೆ ಖಂಡಿಸಿ ವಿಶೇಷ ಅಧಿವೇಶನ ಕರೆಯುವ ತೀರ್ಮಾನ ಉಲ್ಲೇಖಿಸಿ, 'ಯಾವ ಪುರುಷಾರ್ಥಕ್ಕೆ ವಿಶೇಷ ಅಧಿವೇಶನ? ಮನಸ್ಸಿಗೆ ಬಂದ ಹಾಗೆ ಕರೆದರೆ ಪ್ರಜಾಪ್ರಭುತ್ವಕ್ಕೆ ಬೆಲೆ ಏನು?.'ಗಾಂಧಿ ಹೆಸರು ಬದಲಿಸಿ ಭಾರತ ಎಂದು ಹೆಸರಿಟ್ಟರೆ ತೊಂದರೆ ಏನು? ರಾಜೀವ್, ಇಂದಿರಾ ಹೆಸರಿಟ್ಟಾಗ ನಾವು ವಿರೋಧಿಸಿದ್ದೇವಾ' ಎಂದು ಅವರು ಪ್ರಶ್ನಿಸಿದರು.

ಪಶ್ಚಿಮ ಘಟ್ಟದಲ್ಲಿ ಅಭಿವೃದ್ಧಿ ಕಾಮಗಾರಿ ನೀವು ಬೆಂಬಲಿಸುವಿರಾ?

ಸರಿ | ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಚಿಟಿಕೆ ಸುದ್ದಿ

14ರಿಂದ ಸಿದ್ದರಾಮಯ್ಯ ಬಜೆಟ್ ತಯಾರಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 14ರಿಂದ ಬಜೆಟ್ ಮಂಡನೆಯ ಪೂರ್ವಭಾವಿ ಸಿದ್ಧತಾ ಸಭೆಗಳನ್ನು ಆರಂಭಿಸಲಿದ್ದಾರೆ.

ಆರ್ಥಿಕ ಇಲಾಖೆ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳ ಜೊತೆ ಇದೇ 14 ರಂದು ಮೊದಲ ಸಭೆ ನಡೆಸಲಿದ್ದಾರೆ. ಬಳಿಕ ಇಲಾಖಾವಾರು ಸಭೆ, ರೈತರು, ಉದ್ಯಮಿಗಳು, ಕಾರ್ಮಿಕ ಸಂಘಟನೆಗಳು ಸೇರಿದಂತೆ ಕ್ಷೇತ್ರವಾರು ತಜ್ಞರ ಜತೆ ಸಭೆ ನಡೆಸಲಿದ್ದಾರೆ.


ಮಾರ್ಚ್ ಎರಡನೇ ವಾರದಲ್ಲಿ ಸಿದ್ದರಾಮಯ್ಯ ಅವರು ಬಜೆಟ್ ಮಂಡನೆ ಮಾಡುವ ಸಾಧ್ಯತೆಯಿದೆ. ಅದಕ್ಕೆ ಒಂದು ವಾರ ಮೊದಲು ಜಂಟಿ ಅಧಿವೇಶನ ನಡೆಯಲಿದೆ.

ಸಿದ್ದರಾಮಯ್ಯ ಅವರು ಈಗಾಗಲೇ ದಾಖಲೆಯ 16 ಬಜೆಟ್ ಮಂಡಿಸಿದ್ದು, ಮಾರ್ಚ್‌ನಲ್ಲಿ ಮಂಡಿಸುವ ಬಜೆಟ್ 17ನೇ ಬಜೆಟ್ ಆಗಲಿದೆ.

2026-27ನೇ ಸಾಲಿನ ಕೇಂದ್ರ ಬಜೆಟ್ ಅನ್ನು ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಫೆ. 1ರಂದು ಸಂಸತ್ತಿನಲ್ಲಿ ಮಂಡಿಸಲಿದ್ದಾರೆ.

'ರಾಮ ಮಂದಿರ ನಿರ್ಮಾಣ ಜವಾಬ್ದಾರಿ ಹೆಚ್ಚಿಸಿದೆ'

ಹುಬ್ಬಳ್ಳಿ: 'ಹಿಂದೂ ಸಮಾಜದ ಒಗ್ಗಟ್ಟಿನಿಂದ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಿದೆ. ಅಲ್ಲಿಗೆ ಜವಾಬ್ದಾರಿ ಮುಗಿದಿಲ್ಲ, ಮತ್ತಷ್ಟು ಹೆಚ್ಚಿದೆ' ಎಂದು ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.



ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಇಲ್ಲಿನ ರಾಘವೇಂದ್ರ ಸ್ವಾಮಿ ಮಠದಲ್ಲಿ ಭಾನುವಾರ ಹಿಂದೂ ಸಮ್ಮೇಳನದಲ್ಲಿ ಅವರು, 'ಮಂದಿರವನ್ನು ಮಂದಿರವಾಗಿಯೇ ಉಳಿಸುವ ಜವಾಬ್ದಾರಿ ಹಿಂದೂ ಸಮುದಾಯದ ಮೇಲಿದೆ' ಎಂದು ಅಭಿಪ್ರಾಯಪಟ್ಟರು.

'ನಮ್ಮ ಸಂತತಿ ಹಿಂದೂ ಸಂಸ್ಕೃತಿ ಪಾಲಿಸಿ, ಬಹುಸಂಖ್ಯಾತರಾಗಿ ಉಳಿದರೆ ಮಾತ್ರ ಇದು ಸಾಧ್ಯ. ಅದಕ್ಕಾಗಿ ಪ್ರತಿಯೊಬ್ಬರ ಹೃದಯದಲ್ಲಿ ರಾಮನ ಪ್ರತಿಷ್ಠಾಪನೆ ಆಗಬೇಕು, ಮಕ್ಕಳಿಗೆ ಸಂಸ್ಕಾರ ಬೋಧಿಸಬೇಕು' ಎಂದರು.

ಬಳ್ಳಾರಿ: 17ರಂದು ಬಿಜೆಪಿ ಸಮಾವೇಶ

ಮೈಸೂರು: 'ಬಳ್ಳಾರಿ ಘಟನೆ ಖಂಡಿಸಿ ಜ. 17ರಂದು ಬಳ್ಳಾರಿಯಲ್ಲಿ ಬಿಜೆಪಿ ಬೃಹತ್ ಪ್ರತಿಭಟನಾ ಸಮಾವೇಶ ನಡೆಸಲಿದೆ' ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿದರು.

'ಶಾಸಕ ಜನಾರ್ದನ ರೆಡ್ಡಿ ಬಿಜೆಪಿಗೆ ವಾಪಸ್ ಆಗಿರುವುದನ್ನು ಸಹಿಸದೇ ನಡೆಸಿದ ವ್ಯವಸ್ಥಿತ ಸಂಚು ಬಳ್ಳಾರಿ ಗಲಾಟೆ. ಈ ಸಂಚಿನ ವಿರುದ್ಧ ಸಮಾವೇಶ ನಡೆಯಲಿದೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ರಾಜ್ಯದಲ್ಲಿ ಡ್ರಗ್ಸ್ ಜಾಲ ನಿಯಂತ್ರಿಸುವಲ್ಲಿ ಸರ್ಕಾರದ ವೈಫಲ್ಯ ಖಂಡಿಸಿ ಮೈಸೂರಿನಲ್ಲಿ ಜ.31ರಂದು ಸಮಾವೇಶ ನಡೆಯಲಿದೆ. ಗೃಹಲಕ್ಷ್ಮಿ ಯೋಜನೆ ಅವ್ಯವಹಾರದ ವಿರುದ್ಧ ಹುಬ್ಬಳ್ಳಿಯಲ್ಲಿ ಸಮಾವೇಶವನ್ನು ನಡೆಸಲಾಗುವುದು' ಎಂದರು.

ಡಿಕೆಶಿಗೆ ನೋ ಎಂಟ್ರಿ: 'ಕಾಂಗ್ರೆಸ್ ಪಕ್ಷದ ಬೆಳವಣಿಗೆಗಳ ಬಗ್ಗೆ ಬೇಸತ್ತು ಡಿ.ಕೆ. ಶಿವಕುಮಾರ್ ಬಿಜೆಪಿಗೆ ಬರುತ್ತೇನೆ ಎಂದರೂ ಅವರನ್ನು ಸೇರಿಸಿಕೊಳ್ಳುವುದಿಲ್ಲ. ಅವರಿಗೆ ನೋ ಎಂಟ್ರಿ' ಎಂದರು.

'ನರೇಗಾ' ಚರ್ಚೆಗೆ ಬನ್ನಿ: 'ಕೈ' ಸವಾಲು

ಯಾವುದೇ ವೇದಿಕೆಯಲ್ಲಿ ಚರ್ಚೆಗೆ ಸಿದ್ಧ: ಡಿಸಿಎಂ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಗಾ ವಿಚಾರವಾಗಿ ವಿರೋಧ ಪಕ್ಷಗಳ ಜತೆ ಯಾವ ವೇದಿಕೆಯಲ್ಲಾದರೂ ಚರ್ಚೆಗೆ ಸಿದ್ಧ. ಯಾವಾಗ ಕರೆದರೂ ಹೋಗುತ್ತೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಬಹಿರಂಗ ಚರ್ಚೆಗೆ ಬರಲಿ ಎಂದು ಶಿವಕುಮಾರ್ ಅವರು ಪಂಥಾಹ್ವಾನ ನೀಡಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ್ದ ಮತ್ತೋರ್ವ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, 'ಚರ್ಚೆ ನಾವೂ ಸಿದ್ಧ' ಎಂದಿದ್ದರು.

ಈ ಬಗ್ಗೆ ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಶಿವಕುಮಾರ್, 'ಕುಮಾರಸ್ವಾಮಿ ಅವರೇ ಚರ್ಚೆಗೆ ಬಂದರೆ ಒಳ್ಳೆಯದು. ಅವರನ್ನು ವೇದಿಕೆಗೆ ಸ್ವಾಗತಿಸುತ್ತೇನೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕರ ಜತೆಗೂ ಚರ್ಚಿಸಲು ಪಂಥಾಹ್ವಾನ ಸ್ವೀಕರಿಸಿದ್ದೇನೆ. ಚರ್ಚೆಗೆ ಅಗತ್ಯವಾದ ಎಲ್ಲ ಮಾಹಿತಿಗಳು ನನ್ನ ಬೆರಳ ತುದಿಯಲ್ಲೇ ಇವೆ' ಎಂದರು.

'ಸಾರ್ವಜನಿಕ ವೇದಿಕೆ, ಅಧಿವೇಶನ ಅಥವಾ ಮಾಧ್ಯಮ ವೇದಿಕೆಯಾದರೂ ಸರಿ. ಚರ್ಚೆಗೆ ನಾನು ಸಿದ್ಧ' ಎಂದು ಸವಾಲು ಒಡ್ಡಿದರು.

> **ನರೇಗಾದಿಂದ ಗಾಂಧೀಜಿ ಹೆಸರು ತೆಗೆದಿರುವ ಬಿಜೆಪಿಯವರು ಮುಂದೆ ಸರ್ಕಾರಿ ಕಚೇರಿಗಳಿಂದ ಗಾಂಧೀಜಿ, ಅಂಬೇಡ್ಕರ್ ಭಾವಚಿತ್ರವನ್ನೂ ತೆಗೆದು ಸಂಘ ಪರಿವಾರದ ಭಾವಚಿತ್ರ ಹಾಕಬಹುದು**
> **ಎನ್‌. ಚಲುವರಾಯಸ್ವಾಮಿ,** ಕೃಷಿ ಸಚಿವ

'ನರೇಗಾ ಯೋಜನೆ ಜಾರಿಯಲ್ಲಿ ಕನಕಪುರ ಮೊದಲ ಸ್ಥಾನದಲ್ಲಿದೆ. ಕೇಂದ್ರ ಸರ್ಕಾರ ಪ್ರಶಸ್ತಿಯನ್ನೂ ನೀಡಿದೆ. ಈ ವಿಚಾರ ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ವಿಜಯೇಂದ್ರ ಅವರಿಗೆ ಗೊತ್ತಿಲ್ಲವೇ' ಎಂದು ಪ್ರಶ್ನಿಸಿದರು.

'ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ಬರಲಿದ್ದಾರಂತೆ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ರಾಜ್ಯ ರಾಜಕಾರಣ ಮಾತ್ರ ಏಕೆ? ಹಳ್ಳಿಯಿಂದಲೇ ರಾಜಕಾರಣವನ್ನೂ ಮಾಡಲಿ' ಎಂದು ಹೇಳಿದರು.

'ಎಚ್‌ಡಿಕೆ ಡೈಲಾಗ್ ಅಷ್ಟೆ': 'ಸಿದ್ದರಾಮಯ್ಯ ಅವರನ್ನು ಲೀಸ್‌ನಲ್ಲಿರುವ ಮುಖ್ಯಮಂತ್ರಿ ಎಂಬ ಕುಮಾರಸ್ವಾಮಿ ಅವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ' ಎಂದು ಶಿವಕುಮಾರ್ ಹೇಳಿದರು.

'ಮಾಧ್ಯಮಗಳ ಮುಂದೆ ಮೊದಲಿನಿಂದಲೂ ಅವರು ಇಂತಹ ಡೈಲಾಗ್‌ಗಳನ್ನು ಹೊಡೆಯುತ್ತಲೇ ಬಂದಿದ್ದಾರೆ. ಇಂತಹ ಟೀಕೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿರುಗೇಟು ನೀಡುತ್ತಾರೆ. ಆ ಸಾಮರ್ಥ್ಯ ಅವರಿಗಿದೆ' ಎಂದರು.

13ರಂದು 'ಕೈ' ಸಭೆ

ಬೆಂಗಳೂರು: 'ನರೇಗಾ ಬಚಾವ್ ಸಂಗ್ರಾಮ್' ಕಾರ್ಯಕ್ರಮದ ಆಯೋಜನೆ, ಬೂತ್ ಮಟ್ಟದ ಏಜೆಂಟರ ಪಟ್ಟಿ ತಯಾರಿ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಡೆಯಲಿರುವ ಚುನಾವಣೆಯ ಕುರಿತು ಚರ್ಚಿಸಲು ಇದೇ 13ರಂದು ಅರಮನೆ ಮೈದಾನದಲ್ಲಿ ಕಾಂಗ್ರೆಸ್ ಮುಖಂಡರ ಸಭೆ ನಡೆಯಲಿದೆ.

'ಅಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಕಾರ್ಯದರ್ಶಿಗಳು, ಪಕ್ಷದ ಸಂಸದರು, ಶಾಸಕರು, ಪರಿಷತ್ ಸದಸ್ಯರು, ನಿಗಮ ಮಂಡಳಿಗಳ ಅಧ್ಯಕ್ಷರು, ಪರಾಜಿತ ಅಭ್ಯರ್ಥಿಗಳು, ಮುಂಚೂಣಿ ಘಟಕಗಳ ಅಧ್ಯಕ್ಷರು, ಕೆಪಿಸಿಸಿ ಪದಾಧಿಕಾರಿಗಳು ಸೇರಿದಂತೆ ಎಲ್ಲ ನಾಯಕರು ಭಾಗವಹಿಸಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

'ನರೇಗಾ ಕಾಯ್ದೆಗೆ ತಿದ್ದುಪಡಿ ತಂದು, ಅದರ ಹೆಸರು ಬದಲಿಸುವ ಜೊತೆ ಮೂಲ ಸ್ವರೂಪಕ್ಕೇ ಧಕ್ಕೆ ತಂದಿರುವ ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿ ದೇಶದಾದ್ಯಂತ ಪಕ್ಷ ಪ್ರತಿಭಟನೆ ಹಮ್ಮಿಕೊಳ್ಳಲಿದೆ. ರಾಜ್ಯದಲ್ಲಿಯೂ ತೀವ್ರ ಸ್ವರೂಪದ ಪ್ರತಿಭಟನೆ ಆಯೋಜಿಸುವ ಕುರಿತು ಈ ಸಭೆಯಲ್ಲಿ ಚರ್ಚೆ ನಡೆಸಲಾಗುವುದು. ಜೊತೆಗೆ, ಸ್ಥಳೀಯ ಸಂಸ್ಥೆಗಳಿಗೆ ನಡೆಯಲಿರುವ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವ ಬಗ್ಗೆಯೂ ಚರ್ಚೆ ನಡೆಯಲಿದೆ' ಎಂದು ಶಿವಕುಮಾರ್ ತಿಳಿಸಿದ್ದಾರೆ.

'ಎಚ್‌ಡಿಕೆ ವಿಧಾನಸಭೆಗೇ ಬರಲಿ'

ಬೆಂಗಳೂರು: 'ನರೇಗಾ ಯೋಜನೆಯ ಹೊಸ ಸ್ವರೂಪದ ಕುರಿತು ಬಹಿರಂಗ ಚರ್ಚೆಗೆ ವಿಶೇಷ ಅಧಿವೇಶನ ನಡೆಯಲಿದ್ದು, ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿಗೆ ಅಷ್ಟೊಂದು ಆಸಕ್ತಿ ಇದ್ದರೆ ರಾಷ್ಟ್ರಪತಿಯಿಂದ ಅನುಮತಿ ಪಡೆದು ಕರ್ನಾಟಕದ ವಿಧಾನಸಭೆಯಲ್ಲಿ ಚರ್ಚೆಗೆ ಬರಲಿ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ, ವಿಧಾನಪರಿಷತ್ತಿನ ಸದಸ್ಯ ರಮೇಶ್ ಬಾಬು ಸವಾಲು ಹಾಕಿದ್ದಾರೆ.

'ಹೊಸ ಕಾಯ್ದೆಯ ಮೂಲಕ ನರೇಗಾ ಯೋಜನೆಯನ್ನು ಜನವಿರೋಧಿಯಾಗಿ ಕೇಂದ್ರ ಸರ್ಕಾರ ರೂಪಿಸಿದೆ. ಕಾಯ್ದೆಯಲ್ಲಿರುವ ಅಂಶಗಳ ಚರ್ಚೆಗೆ ಅಧಿವೇಶನ ಕರೆಯಲು ರಾಜ್ಯ ಸರ್ಕಾರ ಮುಂದಾಗಿದೆ. ಅಲ್ಲಿ ಬಹಿರಂಗ ಚರ್ಚೆಗೆ ಮುಕ್ತ ಅವಕಾಶವಿದೆ. ಆದರೆ, ಬಹಿರಂಗ ಚರ್ಚೆಗೆ ಸಿದ್ಧ ಎಂದು ಹೇಳುವ ಮೂಲಕ ಕುಮಾರಸ್ವಾಮಿ ತಮ್ಮ ಬೌದ್ಧಿಕ ದಿವಾಳಿತನ ಸಾಬೀತುಪಡಿಸಿದ್ದಾರೆ' ಎಂದು ಅವರು ಟೀಕಿಸಿದ್ದಾರೆ.

'ನರೇಗಾ ಯೋಜನೆಯ ಕುರಿತಂತೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳು ಚರ್ಚೆಗೆ ಮುಂದಾದಾಗ ಪಲಾಯನ ಮಾಡಿರುವ ಕೇಂದ್ರ ಸರ್ಕಾರಕ್ಕೆ ಕುಮಾರಸ್ವಾಮಿಯವರ ಸಲಹೆಯ ಅವಶ್ಯ ಇದೆ' ಎಂದೂ ವ್ಯಂಗ್ಯವಾಡಿದ್ದಾರೆ.

'ಕುಮಾರಸ್ವಾಮಿಗೆ ಕರ್ನಾಟಕದ ಬಗ್ಗೆ ಬದ್ಧತೆ ಇದ್ದರೆ ಬೆಂಗಳೂರು 2ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಹುಬ್ಬಳ್ಳಿ–ಬೆಳಗಾವಿ–ವಿಜಯಪುರ ವಿಮಾನ ನಿಲ್ದಾಣ ವಿಸ್ತರಣೆ, ರಕ್ಷಣಾ ಕೈಗಾರಿಕಾ ಕಾರಿಡಾರ್‌ಗಳು, ಏರೋಸ್ಪೇಸ್ ಮತ್ತು ಡಿಫೆನ್ಸ್ ಕೈಗಾರಿಕಾ ಪಾರ್ಕ್‌ಗಳು, ಬಹು–ಜಿಲ್ಲಾ ಕೈಗಾರಿಕಾ ಪಾರ್ಕ್, ಬೆಂಗಳೂರು ಉಪನಗರ ರೈಲು ಯೋಜನೆ, ಮೇಕೆದಾಟು, ಯುಕೆಪಿ ಮೂರನೇ ಹಂತ, ಕಳಸಾ ಬಂಡೂರಿ ಮುಂತಾದ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮತಿ ಕೊಡಿಸಲಿ' ಎಂದೂ ಆಗ್ರಹಿಸಿದ್ದಾರೆ.

ಕಳೆದು ಹೋಗಿದ್ದ ಉಡುಗೊರೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಿಂದ ಹಾಸನಕ್ಕೆ ತಲುಪಿಸಬೇಕಾಗಿದ್ದ ಉಡುಗೊರೆ ಪೆಟ್ಟಿಗೆಯನ್ನು ಪ್ರಯಾಣಿಕರೊಬ್ಬರು ನಗರದಲ್ಲಿ ಕಳೆದುಕೊಂಡಿದ್ದರು. ಆದರೆ, ಬಿಎಂಟಿಸಿ ನಿರ್ವಾಹಕರ ಕಾಳಜಿಯಿಂದಾಗಿ ಎರಡೇ ದಿನದಲ್ಲಿ ಉಡುಗೊರೆ ಪತ್ತೆಯಾಗಿದ್ದು ಅದನ್ನು ಮರಳಿ ಪ್ರಯಾಣಿಕನಿಗೆ ತಲುಪಿಸಲಾಗಿದೆ.



ಉಡುಗೊರೆ ಪೆಟ್ಟಿಗೆ

ಹಾಸನದ ಡಾ.ಎಚ್‌.ಆರ್. ಸಂಯಮಿ ಲೆಕ್ಕಕಟ್ಟೆ ನಾಲ್ಕು ದಿನದ ಹಿಂದೆ ದೆಹಲಿಗೆ ಹೋಗಿದ್ದರು. ಪರಿಚಯಸ್ಥರೊಬ್ಬರು ಹಾಸನದ ಸ್ನೇಹಿತರಿಗೆ ಉಡುಗೊರೆ ರೂಪದಲ್ಲಿ ಮನೆ ಸ್ವಚ್ಛತೆಯ ರೊಬೋಟ್ ಯಂತ್ರ ತಲುಪಿಸಲು ಸಂಯಮಿ ಅವರಿಗೆ ನೀಡಿದ್ದರು.

ವಿಮಾನದಲ್ಲಿ ಬಂದಿಳಿದ ಅವರು ವಾಯುವಜ್ರ ಬಸ್‌ನಲ್ಲಿ ರಾಜಾಜಿನಗರ ನಿಲ್ದಾಣ ತಲುಪಿ, ಅಲ್ಲಿಂದ ಹಾಸನ ಬಸ್ ಹತ್ತಿದ್ದರು. ಸ್ವಲ್ಪ ದೂರ ಹೋದ ಮೇಲೆ ಅವರಿಗೆ ಉಡುಗೊರೆ ಮರೆತಿರುವುದು ನೆನಪಾಯಿತು. ಎಲ್ಲಿ ಬಿಟ್ಟಿದ್ದೇನೆ ಎನ್ನುವುದು ಅವರಿಗೆ ತಿಳಿದಿರಲಿಲ್ಲ. ಇದಕ್ಕಾಗಿ ಅವರು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳನ್ನು ಸಂಪರ್ಕಿಸಿದ್ದರು. ಇ–ಮೇಲ್ ಮೂಲಕ ದೂರು ನೀಡಿದರೂ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ.

ಸಂಯಮಿ ಮತ್ತೆ ದೆಹಲಿಗೆ ಹೋಗುವ ಸನ್ನಿವೇಶ ಎದುರಾಯಿತು. ನಗರದಲ್ಲಿ ವಾಯುವಜ್ರ ಬಸ್ ಹತ್ತಿ ವಿಮಾನ ನಿಲ್ದಾಣಕ್ಕೆ ಹೋಗುವಾಗ ನಿರ್ವಾಹಕ ಪರಮೇಶ್ವರ್ ಅವರೊಂದಿಗೆ ಉಡುಗೊರೆ ಬಾಕ್ಸ್ ವಿಷಯ ಚರ್ಚಿಸಿದ್ದರು.

ವಿವರ ಪಡೆದ ಪರಮೇಶ್ವರ್ ಮಾಹಿತಿ ಹಂಚಿಕೊಂಡ ಕೆಲವೇ ನಿಮಿಷದಲ್ಲಿ ಬಾಕ್ಸ್ ಪತ್ತೆಯಾಗಿ ಫೋಟೊ ಸಿಕ್ಕಿತ್ತು. ಸಂಯಮಿ ಅವರು ಕತ್ರಿಗುಪ್ಪೆ ಡಿಪೊಗೆ ಸೇರಿದ ಕೆಐಎ 10/10 ಬಸ್‌ನಲ್ಲಿ ಬಾಕ್ಸ್ ಬಿಟ್ಟು ಹೋಗಿದ್ದು, ಅದು ಅಲ್ಲಿನ ಭದ್ರತಾ ಶಾಖೆಯಲ್ಲಿ ಇರುವುದು ಖಚಿತವಾಗಿತ್ತು.

'ಉಡುಗೊರೆ ಕಳೆದುಹೋದಾಗ ಬೇಸರವಾಯಿತು. ವಿಮಾನ ನಿಲ್ದಾಣದಲ್ಲಿ ದೂರು ನೀಡಿದರೂ ಪ್ರತಿಕ್ರಿಯೆ ಬರಲಿಲ್ಲ. ಬಿಎಂಟಿಸಿ ಬಸ್‌ನಲ್ಲಿ ಬಿಟ್ಟಿದ್ದರೂ ಸಿಗುವುದು ಅನುಮಾನ ಎಂದು ಸುಮ್ಮನಾಗಿದ್ದೆ. ವಿಷಯ ತಿಳಿದ ಎರಡೇ ದಿನದಲ್ಲಿ ಪತ್ತೆಹಚ್ಚಿದ ಬಿಎಂಟಿಸಿ ಕಾರ್ಯವೈಖರಿ ಬಗ್ಗೆ ಹೆಮ್ಮೆ ಎನಿಸಿತು' ಎಂದು ಸಂಯಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರು ವಸ್ತುಗಳನ್ನು ಮರೆತು ಹೋದರೆ ಡಿಪೊದ ಭದ್ರತಾ ಶಾಖೆಗೆ ಸಿಬ್ಬಂದಿ ತಲುಪಿಸುತ್ತಾರೆ. ಕಳೆದುಕೊಂಡವರು ವಿವರ ಇಟ್ಟುಕೊಂಡಿದ್ದರೆ ಹಿಂದಿರುಗಿಸಲಾಗುತ್ತದೆ. ದಿನಕ್ಕೆ 10 ರಿಂದ 15 ವಸ್ತುಗಳು ಕಾಣೆಯಾದ ಪ್ರಕರಣಗಳು ವರದಿಯಾಗುತ್ತಿವೆ' ಎಂದು ಬಿಎಂಟಿಸಿ ವಿಮಾನ ನಿಲ್ದಾಣ ಡಿಪೊದ ಸಹಾಯಕ ಸಂಚಾರ ವ್ಯವಸ್ಥಾಪಕ ರಾಮಪ್ಪ ತಿಳಿಸಿದರು.

'2ಎ ಪ್ರವರ್ಗ'ಕ್ಕೆ ನಾಮಧಾರಿಗೌಡ: ಎಚ್‌ಡಿ ಕುಮಾರಸ್ವಾಮಿ ಭರವಸೆ

ಪ್ರಜಾವಾಣಿ ವಾರ್ತೆ

ಕೆ.ಆರ್.ನಗರ (ಮೈಸೂರು ಜಿಲ್ಲೆ): 'ಅತ್ಯಂತ ಸಣ್ಣಪ್ರಮಾಣದಲ್ಲಿರುವ ನಾಮಧಾರಿಗೌಡ ಸಮುದಾಯವನ್ನು '2ಎ ಪ್ರವರ್ಗ'ಕ್ಕೆ ಸೇರಿಸುವ ಪ್ರಯತ್ನಕ್ಕೆ ಪ್ರಾಮಾಣಿಕವಾಗಿ ಬೆಂಬಲ ಕೊಡುತ್ತೇನೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಇಲ್ಲಿ ಭಾನುವಾರ ಭರವಸೆ ನೀಡಿದರು.

ಇಲ್ಲಿ, ನಾಮಧಾರಿಗೌಡ ಸಮುದಾಯ ಭವನದ ಬೆಳ್ಳಿಹಬ್ಬದ ಸಮಾರಂಭದಲ್ಲಿ ಮಾತನಾಡಿದ ಅವರು, 'ಒತ್ತಾಯದ ಬಗ್ಗೆ ಸಂಪೂರ್ಣ ಮಾಹಿತಿ ತೆಗೆದುಕೊಂಡು ಬನ್ನಿ. ಹಿಂದುಳಿದ ವರ್ಗಗಳ ಆಯೋಗಕ್ಕೆ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಬೇಡಿಕೆಯ ಪತ್ರಗಳನ್ನೂ ತನ್ನಿ' ಎಂದು ಹೇಳಿದರು.

'ನಾಮಧಾರಿಗೌಡ ಸಮುದಾಯವು ರಾಜಕೀಯ ಸೇರಿ ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಬೇಕಾಗಿದೆ. ನಮ್ಮನ್ನು ಗುರುತಿಸಬೇಕು ಎಂದು ಸಮುದಾಯದವರು ಕೇಳುತ್ತಲೇ ಇದ್ದಾರೆ. ನೋವು, ಆತಂಕ ಬಿಡಿ. ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ' ಎಂದರು.

ಸಣ್ಣ ಸಮುದಾಯಗಳಿಗೆ: 'ಚಿಕ್ಕಮಗಳೂರು ಕಡೆ ಸಣ್ಣಪ್ರಮಾಣದಲ್ಲಿರುವ ಸರ್ಪಒಕ್ಕಲಿಗ ಸಮುದಾಯದ ಎಸ್‌.ಆರ್. ಲಕ್ಷ್ಮಯ್ಯ ಅವರನ್ನು ಎಚ್‌.ಡಿ.ದೇವೇಗೌಡರು ಎರಡು ಬಾರಿ ಶಾಸಕರಾಗಿ ಮಾಡಿದರು. ನಂತರ ಅವರ ಪುತ್ರ ಧರ್ಮೇಗೌಡರು 2 ಬಾರಿ ಪರಿಷತ್ ಸದಸ್ಯ, ಒಮ್ಮೆ ಉಪ ಸಭಾಪತಿ ಆದರು. ಅವರ ಇನ್ನೊಬ್ಬ ಪುತ್ರ ಎಸ್‌.ಎಲ್‌.ಭೋಜೇಗೌಡರು ನಮ್ಮ ಪಕ್ಷದಿಂದ ವಿಧಾನಪರಿಷತ್ ಸದಸ್ಯರಾಗಿದ್ದಾರೆ' ಎಂದು ತಿಳಿಸಿದರು.



> **ಉಪ್ಪಾರ, ಸರ್ಪ ಒಕ್ಕಲಿಗ ಸೇರಿ ಅನೇಕ ಸಣ್ಣ ಸಮುದಾಯಗಳಿಗೆ ಪಕ್ಷ ಅವಕಾಶ ಕಲ್ಪಿಸಿದೆ. ಸಣ್ಣ ಸಮುದಾಯಗಳನ್ನು ದೇವೇಗೌಡರು ಬೆಳೆಸಿದ್ದಾರೆ. ಆದರೆ, ಹಿಂದುಳಿದ ನಾಯಕ ಎಂದು ಫಲಕ ಹಾಕಿಕೊಂಡು ಕೆಲವರು ಓಡಾಡುತ್ತಾರೆ.**
> **ಎಚ್‌.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

'ಅತಿ ಸಣ್ಣ ಉಪ್ಪಾರ ಸಮುದಾಯಕ್ಕೂ ಪಕ್ಷ ಅವಕಾಶ ಕೊಟ್ಟಿದೆ. ಎಚ್‌.ಸಿ.ನೀರಾವರಿ ಅವರನ್ನು ರಾಜಕೀಯಕ್ಕೆ ತಂದೆವು. ನಾಮಧಾರಿಗೌಡ ಸಮುದಾಯದ ಒಬ್ಬರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಲಾಗುವುದು. ಸಮುದಾಯ ಭವನದ ಅಭಿವೃದ್ಧಿಗೆ ಅನುದಾನ ಒದಗಿಸುತ್ತೇನೆ' ಎಂದೂ ಭರವಸೆ ನೀಡಿದರು.

ಜಾಗೃತಿ ನಡಿಗೆ...

ಪ್ರಜಾವಾಣಿ ಚಿತ್ರ: ಅನೂಪ್ ರಾಘ. ಟಿ



ಮೈಸೂರು ವಿಶ್ವವಿದ್ಯಾಲಯ, ಮಹಾನಗರ ಪಾಲಿಕೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಮಾನಸಗಂಗೋತ್ರಿಯಲ್ಲಿ ಭಾನುವಾರ ನಡೆದ 'ಫಿಟ್ ಮೈಸೂರು-ಸಾಮೂಹಿಕ ಆರೋಗ್ಯ ಹಾಗೂ ಜಾಗೃತಿ ನಡಿಗೆ'ಯಲ್ಲಿ ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು

'ಸಂತಾಪ ಸೂಚಿಸದ ಪ್ರಧಾನಿ ಮೋದಿ, ಕೇಂದ್ರ ಅರಣ್ಯ ಸಚಿವರು'

ಪ್ರಜಾವಾಣಿ ವಾರ್ತೆ

ಗಾಡ್ಗೀಳ್ ನುಡಿನಮನ

ಬೆಂಗಳೂರು: 'ಪಶ್ಚಿಮ ಘಟ್ಟಗಳ ಸಂರಕ್ಷಣೆಗಾಗಿ ಶ್ರಮಿಸಿದ ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್ ನಿಧನರಾದಾಗ ಇಡೀ ರಾಷ್ಟ್ರವೇ ಮೌನವಾಗಿತ್ತು. ಆದರೆ, ಪ್ರಧಾನಿ, ಕೇಂದ್ರದ ಅರಣ್ಯ ಸಚಿವರು ಸಂತಾಪ ಸೂಚಿಸದಿರುವುದು ಸರಿಯಲ್ಲ' ಎಂದು ಪರಿಸರವಾದಿಗಳು ಬೇಸರ ವ್ಯಕ್ತಪಡಿಸಿದರು.

ಪರಿಸರಾಸಕ್ತ ಬಳಗ ಭಾನುವಾರ ಆಯೋಜಿಸಿದ್ದ ಮಾಧವ ಗಾಡ್ಗೀಳ್ ಅವರಿಗೆ ನುಡಿ ನಮನ ಸಲ್ಲಿಸುವ ಕಾರ್ಯಕ್ರಮದಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

ವಿಜ್ಞಾನಿ ಶೇಷಗಿರಿ ರಾವ್ ಮಾತನಾಡಿ, 'ಮಾಧವ ಗಾಡ್ಗೀಳ್ ಹಾಗೂ ಅವರ ಪತ್ನಿ ಸುಲೋಚನಾ ಅವರೊಂದಿಗೆ ಕೆಲಸ ಮಾಡಿದ್ದೇನೆ. ಮಾಧವ ಅವರು ತಮ್ಮ ಜೀವನವನ್ನು ಸತ್ಯದ ಅನ್ವೇಷಣೆಗೆ ಮುಡಿಪಾಗಿಟ್ಟಿದ್ದರು. ಪರಿಸರ ಹಾಗೂ ಮನುಷ್ಯರ ಜನಜೀವನವನ್ನು ಸಮಗ್ರವಾಗಿ ನೋಡುತ್ತಿದ್ದರು. ವಿಜ್ಞಾನಿಗಳೊಂದಿಗೆ ಹೇಗೆ ಚರ್ಚಿಸುತ್ತಿದ್ದರೊ ಅದೇ ರೀತಿ ರೈತರೊಂದಿಗೂ ಚರ್ಚೆಗಳನ್ನು ಮಾಡುತ್ತಿದ್ದರು. ಅವರು ವಿಜ್ಞಾನಿಗಿಂತ ಹೆಚ್ಚಾಗಿ ಸತ್ಯದ ಅನ್ವೇಷಕರಾಗಿದ್ದರು' ಎಂದು ಸ್ಮರಿಸಿದರು.

ಶಿಕ್ಷಣ ತಜ್ಞ ಕೆ.ಇ. ರಾಧಾಕೃಷ್ಣ ಮಾತನಾಡಿ, 'ಪ್ರಕೃತಿಗೆ ಒಂದು ಜೀವಂತಿಕೆ ಇದೆ ಎಂಬುದನ್ನು ಮಾಧವ ಗಾಡ್ಗೀಳ್ ಅವರು ತೋರಿಸಿದ್ದಾರೆ' ಎಂದರು.

ಪತ್ರಕರ್ತ ನಾಗೇಶ ಹೆಗಡೆ ಮಾತನಾಡಿ, 'ಮಾಧವ ಗಾಡ್ಗೀಳ್ ಅವರು ರೈತರು, ಮೀನುಗಾರರು, ಆದಿವಾಸಿಗಳೊಂದಿಗೆ ಕಾರ್ಯನಿರ್ವಹಿಸಿದ್ದರು. ಪ್ರಧಾನಮಂತ್ರಿಯವರ ವಿಜ್ಞಾನ ಸಲಹಾ ಮಂಡಳಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದರು. ಆದರೆ, ಅವರ ಪಾರ್ಥಿವ ಶರೀರದ ಅಂತಿಮ ಯಾತ್ರೆಯಲ್ಲಿ ಕೇವಲ 40 ಜನ ಮಾತ್ರ ಪಾಲ್ಗೊಂಡಿದ್ದರು. ಯಾವುದೇ ಮಂತ್ರಿಗಳು, ಜನಪ್ರತಿನಿಧಿಗಳು ಭಾಗವಹಿಸಿರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಟಿ.ವಿ. ರಾಮಚಂದ್ರ ಮಾತನಾಡಿ, 'ಜನರ ವಿಜ್ಞಾನಿಯಾಗಿದ್ದ ಗಾಡ್ಗೀಳ್ ಅವರು ಪರಿಸರ ಸಮತೋಲನಕ್ಕಾಗಿ ಇಡೀ ಬದುಕನ್ನೇ ಮುಡಿಪಾಗಿಟ್ಟಿದ್ದರು. ಪಶ್ಚಿಮಘಟ್ಟಗಳಿಗೆ ಸಂಬಂಧಿಸಿದ ವರದಿಯನ್ನು ಯಾರೂ ಒಪ್ಪಲಿಲ್ಲ. ಆ ವರದಿ ಜಾರಿಯಾಗಿದ್ದರೆ ಸ್ಥಳೀಯರಿಗೆ ಆಹಾರ, ನೀರು, ದೊರೆಯುತ್ತಿತ್ತು. ಜನಪರ ವರದಿಯನ್ನು ಗಣಿಗಾರಿಕೆ ಮಾಡುವವರು ವಿರೋಧಿಸಿದ್ದರು' ಎಂದು ಸ್ಮರಿಸಿದರು.

ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅವರು ಅಧ್ಯಕ್ಷತೆ ವಹಿಸಿದ್ದರು.

'ಬಹುರೂಪಿ' ಚಲನಚಿತ್ರೋತ್ಸವಕ್ಕೆ ಚಾಲನೆ: ಸಾಹಿತಿ ಬರಗೂರು

'ಸರ್ಕಾರವೇ ಮಿನಿ ಚಿತ್ರಮಂದಿರ ನಿರ್ಮಿಸಲಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯ ಸರ್ಕಾರವೇ ಜಿಲ್ಲಾ ಕೇಂದ್ರಗಳಲ್ಲಿ ಮಿನಿ ಚಿತ್ರಮಂದಿರಗಳನ್ನು ನಿರ್ಮಿಸಿ, ಕೇರಳದಂತೆ ಸಿನಿಮಾ ಸಂಸ್ಕೃತಿ ಬೆಳೆಸಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಇಲ್ಲಿ ಸಲಹೆ ನೀಡಿದರು.

ರಂಗಾಯಣದ 'ಭೂಮಿಗೀತ' ರಂಗಮಂದಿರದಲ್ಲಿ ಭಾನುವಾರ 'ಬಹುರೂಪಿ ಬಾಬಾಸಾಹೇಬ್' ರಾಷ್ಟ್ರೀಯ ನಾಟಕೋತ್ಸವ ನಿಮಿತ್ತ ಏರ್ಪಡಿಸಿರುವ 'ಬಹುರೂಪಿ ಚಲನಚಿತ್ರೋತ್ಸವ' ಉದ್ಘಾಟಿಸಿ ಮಾತನಾಡಿದರು.

'ಬೆಂಗಳೂರಿನಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿತ್ತು. ಬಜೆಟ್‌ನಲ್ಲಿ ಜಾರಿಗೊಳಿಸುವುದಾಗಿ ಮೂರು ಬಾರಿ ಹೇಳಿದ್ದರು. ಆದರೆ ಆಗಲಿಲ್ಲ' ಎಂದರು.

ಮುಖ್ಯಾಂಶಗಳು

- ಮುಖ್ಯಮಂತ್ರಿ ನೀಡಿದ್ದ ಭರವಸೆ ಈಡೇರಿಲ್ಲ
- ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಲಿ
- ಕೇರಳದಂತೆ ಸಿನಿಮಾ ಸಂಸ್ಕೃತಿ ಬೆಳೆಸಲಿ

'ಏಕ ಪರದೆ ಚಿತ್ರಮಂದಿರಗಳಲ್ಲಿ ಜನರು ಸಿನಿಮಾವನ್ನು ಸಂಭ್ರಮಿಸುತ್ತಿದ್ದರು. ಮಲ್ಟಿಪ್ಲೆಕ್ಸ್‌ಗಳಲ್ಲಿ ಆ ಸಂಭ್ರಮ ಕಾಣುತ್ತಿಲ್ಲ. ಕಲಾತ್ಮಕ ಚಿತ್ರಗಳೂ ಸೇರಿ ಕನ್ನಡ ಸಿನಿಮಾಗಳಿಗೆ ಚಿತ್ರಮಂದಿರಗಳು ಸಿಗುತ್ತಿಲ್ಲ. 100 ಆಸನ ಸಾಮರ್ಥ್ಯದ ಚಿತ್ರಮಂದಿರಗಳನ್ನು ಸರ್ಕಾರವೇ ನಿರ್ಮಿಸಿದರೆ ಸಹಾಯವಾಗುತ್ತದೆ' ಎಂದರು.

'ಕೇರಳ ಸರ್ಕಾರ 100ಕ್ಕೂ ಹೆಚ್ಚು ಮಿನಿ ಚಿತ್ರಮಂದಿರಗಳನ್ನು ಸ್ಥಾಪಿಸಿ ನಡೆಸಲು ಸಾಧ್ಯವಿದ್ದರೆ ಇಲ್ಲೇಕೆ ಆಗುವುದಿಲ್ಲ? ಪ್ರಾಯೋಗಿಕವಾಗಿಯಾದರೂ ಯೋಜನೆ ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸಿದರು.

'ಚಿತ್ರೋದ್ಯಮ ಇಂದು ಸಾಮಾಜಿಕ ಸಂವೇದನೆಗಳಿಗೆ ಪ್ರತಿಸ್ಪಂದಿಸುವ ಮಾಧ್ಯಮವಾಗಿ ಉಳಿದಿಲ್ಲ. ರಾಜ್‌ಕುಮಾರ್ ಯುಗದ ಸಿನಿಮಾಗಳು ಅಭಿರುಚಿ ಬೆಳೆಸಿದ್ದವು. ಲಾಭವಷ್ಟೇ ಮುಖ್ಯವಾದಾಗ ಕಲಾತ್ಮಕತೆ ಮಾಯವಾಗುತ್ತದೆ. ಚಲನಚಿತ್ರವು ಮಾಧ್ಯಮವಾಗಬೇಕು. ಅದು ಸಂವೇದನೆ ಬೆಳೆಸುತ್ತದೆ' ಎಂದರು.

ಉದ್ಘಾಟನೆ ಇಂದು

'ಬಹುರೂಪಿ' ಬೆಳ್ಳಿಹಬ್ಬದ ಪ್ರಯುಕ್ತ 'ಬಹುರೂಪಿ ಬಾಬಾ ಸಾಹೇಬ್–ಸಮತೆಯೆಡೆಗೆ ನಡಿಗೆ' ಆಶಯದಲ್ಲಿ ರಂಗಾಯಣ ಏರ್ಪಡಿಸಿರುವ ನಾಟಕೋತ್ಸವದ ಉದ್ಘಾಟನೆಯನ್ನು ಜ.12ರಂದು ಸಂಜೆ 5.30ಕ್ಕೆ ಮಣಿಪುರದ ರಂಗಕರ್ಮಿ ಹೈಸ್ನಾಂ ಸಾವಿತ್ರಿದೇವಿ ನೆರವೇರಿಸಲಿದ್ದಾರೆ. 18ರವರೆಗೆ ಉತ್ಸವ ನಡೆಯಲಿದ್ದು, ಬಹುಭಾಷೆಯ 12 ನಾಟಕಗಳೂ ಸೇರಿದಂತೆ 24 ನಾಟಕಗಳು ಪ್ರದರ್ಶನಗೊಳ್ಳಲಿವೆ.

'ಅರಣ್ಯ ಇಲಾಖೆ ವಿರುದ್ಧ ಒಗ್ಗಟ್ಟಿನ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಗೆ ಹಂಚಿಕೆಯಾಗಿರುವ ಭೂಮಿ ತಮ್ಮದೆಂದು ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸುತ್ತಿದ್ದು, ಅದರ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ಮಾಡಲು ಮಾಜಿ ಸಚಿವ ಕೆ.ಆರ್. ರಮೇಶ್ ಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರೈತ ಮುಖಂಡರು ನಿರ್ಧರಿಸಿದ್ದಾರೆ.

ಶಾಸಕರ ಭವನದಲ್ಲಿ ಜ. 9ರಂದು ನಡೆದ ಸಭೆಯಲ್ಲಿ ರೈತ ಹೋರಾಟಗಾರರು, ಬುದ್ಧಿಜೀವಿಗಳು, ವಕೀಲರು ಭಾಗವಹಿಸಿದ್ದರು. ಇದೇ 18ರಂದು ಮತ್ತೊಮ್ಮೆ ಸಭೆ ಸೇರಿ ಮುಂದಿನ ಹೋರಾಟದ ರೂಪುರೇಷೆ ಕುರಿತು ಚರ್ಚೆ ನಡೆಸಲು ತೀರ್ಮಾನಿಸಿದ್ದಾರೆ.

ಸಭೆಯಲ್ಲಿ ಮಾತನಾಡಿದ ರಮೇಶ್ ಕುಮಾರ್, 'ಭೂಮಿಯ ಒಡೆತನ ರಾಜ್ಯ ಸರ್ಕಾರಕ್ಕೆ ಸೇರಿದೆ. ಕಾಲಕಾಲಕ್ಕೆ ವಿವೇಚನಾ ದೃಷ್ಟಿಯಿಂದ ರೈತರಿಗೆ ಮತ್ತು ಇತರೆ ಅಭಿವೃದ್ಧಿ ಕೆಲಸಗಳಿಗೆ ಭೂಮಿ ಹಂಚಿಕೆ ಮಾಡಿದಂತೆ, ಅರಣ್ಯ ಇಲಾಖೆಗೂ ಮಾಡಲಾಗಿದೆ. ಅರಣ್ಯ ಇಲಾಖೆಯು ತನಗೆ ಹಂಚಿಕೆಯಾದ ಭೂಮಿಗೆ ನೂರಾರು ವರ್ಷ ಕಾಲ ಏಕೆ ಮ್ಯುಟೇಶನ್ ಮಾಡಿಲ್ಲ' ಎಂದು ಪ್ರಶ್ನಿಸಿದರು.

> **ರೈತರು ಅರಣ್ಯ ಇಲಾಖೆಯ ಮುಂದೆ ಭಿಕ್ಷೆ ಬೇಡಬೇಕಿಲ್ಲ. ಕಾಡಿನ ರಕ್ಷಣೆ ಹೆಸರಿನಲ್ಲಿ ರೈತರಿಗೆ ತೊಂದರೆ ಕೊಡುವುದನ್ನು ಅಧಿಕಾರಿಗಳು ನಿಲ್ಲಿಸಬೇಕು**
> **ರಮೇಶ್ ಕುಮಾರ್,** ಮಾಜಿ ಸಚಿವ

'ಭೂಮಿ ಹಂಚಿಕೆ ಮಾಡಿ ಅಧಿಸೂಚನೆ ಹೊರಡಿಸಿದ ಬಳಿಕ, ಅದರ ಸರ್ವೆ ನಂಬರ್, ವಿಸ್ತೀರ್ಣ, ಬೆಳೆ ಮುಂತಾದ ವಿವರಗಳಿಗಾಗಿ ಇಲಾಖೆಯು ಅರಣ್ಯ ಅಧಿಕಾರಿ ನೇಮಿಸಿ ಕ್ರಮ ತೆಗೆದುಕೊಳ್ಳಬೇಕು. ಆದರೆ, ಹಲವು ವರ್ಷ ಕಳೆದರೂ ಈ ಕೆಲಸ ಮಾಡಿಲ್ಲ. ಕಂದಾಯ ಮತ್ತು ಅರಣ್ಯ ಇಲಾಖೆಯು ಮೂಲ ನಕಾಶೆಗಳನ್ನು ಬದಿಗಿಟ್ಟು, ರೈತರನ್ನು ಒಕ್ಕಲೆಬ್ಬಿಸುವುದನ್ನು ಸಹಿಸುವುದಿಲ್ಲ' ಎಂದು ಅವರು ಹೇಳಿದರು.

'ಸ್ವಾತಂತ್ರ ಪೂರ್ವದಲ್ಲಿ ಮೈಸೂರು ಸರ್ಕಾರ ಅಧಿಸೂಚನೆ ಹೊರಡಿಸಿರುವ ಭೂಮಿ ತಮ್ಮದೆಂದು ಅರಣ್ಯ ಇಲಾಖೆಯವರು ಅತಿಕ್ರಮಣ ಮಾಡುತ್ತಿರುವುದರಿಂದ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 41,528 ಎಕರೆ ಭೂಮಿ ಸೇರಿದಂತೆ ಕೋಲಾರ ಜಿಲ್ಲೆ ಮತ್ತು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಲಕ್ಷಾಂತರ ಎಕರೆ ಭೂಮಿ ರೈತರ ಕೈ ತಪ್ಪಿದೆ' ಎಂದೂ ರಮೇಶ್ ಕುಮಾರ್ ವಿವರಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ್ ಕೊಂಡಜ್ಜಿ, ಹೈಕೋರ್ಟ್ ವಕೀಲ ಶಿವಪ್ರಸಾದ್, ಮುಳಬಾಗಿಲಿನ ಎಂ. ಗೋಪಾಲ್, ಶ್ರೀ ರಾಮ್, ಪಾಪೇಗೌಡ, ರೈತ ಸಂಘದ ಪಿ. ಆರ್. ಸೂರ್ಯನಾರಾಯಣ, ಟಿ.ಎಂ. ವೆಂಕಟೇಶ್, ಪಾಪಕೋಟೆ ನವೀನ್ ಕುಮಾರ್ ಸಭೆಯಲ್ಲಿದ್ದರು.

prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ವಿರಾಟ್ ದಾಖಲೆ
ಭಾರತ ತಂಡದ ವಿರಾಟ್ ಕೊಹ್ಲಿ, ಮೂರು ಮಾದರಿಗಳ ಕ್ರಿಕೆಟ್ ಸೇರಿ ವೇಗವಾಗಿ 28ಸಾವಿರ ರನ್ (624 ಇನಿಂಗ್ಸ್) ಗಳಿಸಿದರು. ಸಚಿನ್ ತೆಂಡೂಲ್ಕರ್ (644 ಇನಿಂಗ್ಸ್) ದಾಖಲೆ ಮೀರಿದರು



ಗೋದ್ನಾ ಯೋಜನೆ ಜಿಂದಾಲ್ ತೆಕ್ಕೆಗೆ 5 | ಕ್ರಿಪ್ಟೊ ಕೇಂದ್ರಗಳ ನಿಯಮ ಬಿಗಿ 8



ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಆಜೀವಿಕ ಮಿಷನ್ (ಗ್ರಾಮೀಣ) : ವಿಬಿ–ಜಿ ರಾಮ್ ಜಿ (ವಿಕಸಿತ ಭಾರತ – ಜಿ ರಾಮ್‌ಜಿ) ಕಾಯ್ದೆ, 2025
125 ದಿನಗಳ
ಖಚಿತ ವೇತನ ಉದ್ಯೋಗ
ಈಗ ಜಲಾಶಯಗಳನ್ನು ನಿರ್ಮಿಸಲಾಗುತ್ತದೆ, ಜಲ ಭದ್ರತೆ ಖಾತರಿಗಾಗಿ

ವಿಕಸಿತ ಗ್ರಾಮ ಪಂಚಾಯತ್‌ಗಳು ವಿಕಸಿತ ಭಾರತದ ಮಾರ್ಗ ರೂಪಿಸುತ್ತವೆ
CBC 35101/13/0070/2526

ಪ್ರತೀಕಾರಕ್ಕೆ ಸಿದ್ಧ: ಇರಾನ್ ಎಚ್ಚರಿಕೆ

ಪ್ರತಿಭಟನಕಾರರಿಗೆ ಟ್ರಂಪ್ ಬೆಂಬಲ • ಮೃತರ ಸಂಖ್ಯೆ 538ಕ್ಕೆ ಏರಿಕೆ

ದುಬೈ (ಎಪಿ): 'ಇರಾನ್ ಮೇಲೆ ಅಮೆರಿಕ ಏನಾದರೂ ದಾಳಿ ನಡೆಸಿದರೆ, ಅಮೆರಿಕ ಸೇನಾ ನೆಲೆಗಳು ಮತ್ತು ಇಸ್ರೇಲ್ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಬೇಕಾಗುತ್ತದೆ' ಎಂದು ಇರಾನ್ ದೇಶವು ಅಮೆರಿಕಕ್ಕೆ ಎಚ್ಚರಿಕೆ ನೀಡಿದೆ.

ಇರಾನ್ ಆಡಳಿತವನ್ನು ಪ್ರಶ್ನಿಸಿ ದೇಶವ್ಯಾಪಿ ಕೆಲ ವಾರಗಳಿಂದ ನಡೆಯುತ್ತಿರುವ ಪ್ರತಿಭಟನೆ ಭಾನುವಾರವೂ ಮುಂದುವರಿದಿದ್ದು, ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 538ಕ್ಕೆ ಏರಿದೆ. ಈ ಪೈಕಿ 490 ಮಂದಿ ಪ್ರತಿಭಟನಕಾರರಾಗಿದ್ದರೆ, 48 ಮಂದಿ ಭದ್ರತಾ ಸಿಬ್ಬಂದಿ.

'ದೇಶದಲ್ಲಿ ಅಶಾಂತಿ ಸೃಷ್ಟಿಯಾಗಲು ವಿದೇಶಿ ಪ್ರಭಾವವೇ ಕಾರಣ' ಎಂದು ಆರೋಪಿಸಿರುವ ಇರಾನ್ ಸರ್ಕಾರ, ಅಮೆರಿಕ ಮತ್ತು ಇಸ್ರೇಲ್ ವಿಧ್ವಂಸಕರನ್ನು ಬೆಂಬಲಿಸುತ್ತಿವೆ ಎಂದು ದೂರಿದೆ. ಪ್ರತಿಭಟನಕಾರರನ್ನು ಬೆಂಬಲಿಸುವವರು ಕಠಿಣ ಶಿಕ್ಷೆ ಎದುರಿಸಬೇಕಾಗುತ್ತದೆ ಎಂದೂ ಹೇಳಿದೆ. ಇರಾನ್ ಪ್ರತಿಭಟನೆಯಲ್ಲಿ ಅಮೆರಿಕ ಮಧ್ಯಪ್ರವೇಶಿಸುವ ಸಾಧ್ಯತೆ ಹೆಚ್ಚಿರುವ ಕುರಿತು ಇಸ್ರೇಲ್ ಎಚ್ಚರ ವಹಿಸಿದೆ ಎಂಬುದಾಗಿ ಮೂಲಗಳಿಂದ ತಿಳಿದ ಬೆನ್ನಲ್ಲೇ ಇರಾನ್ ಕಠಿಣ ಸಂದೇಶ ರವಾನಿಸಿದೆ.

ಟ್ರಂಪ್ ಬೆಂಬಲ: ಇನ್ನೊಂದೆಡೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರತಿಭಟನಕಾರರಿಗೆ ಬೆಂಬಲ ಸೂಚಿಸಿದ್ದಾರೆ. 'ಇರಾನ್‌ನ ಜನರು ಸ್ವಾತಂತ್ರ್ಯಕ್ಕಾಗಿ ಹಿಂದೆಂದೂ ಕೇಳರಿಯದ ರೀತಿಯಲ್ಲಿ ಹೋರಾಡುತ್ತಿದ್ದಾರೆ. ಅವರಿಗೆ ಸಹಾಯ ಮಾಡಲು ಅಮೆರಿಕ ಸಿದ್ಧವಿದೆ' ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಹೇಳಿಕೆ ನೀಡಿದ್ದಾರೆ.

'ಇರಾನ್ ಮೇಲೆ ದಾಳಿ ನಡೆಸಲು ಸಜ್ಜಾಗಿರುವಂತೆ ಟ್ರಂಪ್ ಅವರು ಸೇನೆಗೆ ಈಗಾಗಲೇ ಸೂಚಿಸಿದ್ದಾರೆ. ಆದರೆ ದಾಳಿ ಕುರಿತು ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ' ಎಂದು ಮೂಲಗಳು ಮಾಹಿತಿ ನೀಡಿವೆ.

▸8



ಇರಾನ್‌ನ ಆಡಳಿತವನ್ನು ವಿರೋಧಿಸಿ ಟೆಹರಾನ್‌ನಲ್ಲಿ ಜನರು ಪ್ರತಿಭಟನೆ ನಡೆಸಿದರು —ಎಪಿ ಚಿತ್ರ

ಮುಂದುವರಿದ ಪ್ರತಿಭಟನೆ

ಟೆಹರಾನ್, ಮಶಾದ್ ಸೇರಿ ದೇಶದ ವಿವಿಧ ನಗರಗಳಲ್ಲಿ ಜನರು ಭಾನುವಾರವೂ ಬೀದಿಗಿಳಿದು ಇರಾನ್ ಆಡಳಿತದ ವಿರುದ್ಧ ಪ್ರತಿಭಟನೆ ನಡೆಸಿದರು. ಅಮೆರಿಕದ ಎಚ್ಚರಿಕೆ ನಡುವೆಯೂ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಪ್ರತಿಭಟನಕಾರರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಸೂಚನೆಗಳನ್ನು ನೀಡಿದ್ದಾರೆ.

ಪ್ರತಿಭಟನೆಯಲ್ಲಿ ಭಾಗವಹಿಸುವವರನ್ನು 'ದೇವರ ಶತ್ರುಗಳು' ಎಂದು ಪರಿಗಣಿಸಿ, ಮರಣದಂಡನೆ ವಿಧಿಸಲಾಗುತ್ತದೆ ಎಂದು ಇರಾನ್‌ನ ಅಟಾರ್ನಿ ಜನರಲ್ ಮೊಹಮ್ಮದ್ ಮೊವಾಹೆದಿ ಆಜಾದ್ ಎಚ್ಚರಿಸಿದ್ದಾರೆ.

'ಗಲಭೆಕೋರರಿಗೆ ನೆರವು ನೀಡುವವರು ಅದೇ ರೀತಿಯ ಆರೋಪಗಳನ್ನು ಎದುರಿಸಬೇಕಾಗುತ್ತದೆ' ಎಂದು ಅಲ್ಲಿನ ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿ ಪ್ರಕಟಿಸಿದೆ.

ಇರಾನ್ ಸುಮ್ಮನಿರಲ್ಲ– ಸ್ಪೀಕರ್ ಖಲೀಬಾಫ್

'ಇಸ್ಲಾಮಿಕ್ ಗಣರಾಜ್ಯವಾದ ಇರಾನ್ ಮೇಲೆ ಅಮೆರಿಕ ದಾಳಿ ನಡೆಸಿದರೆ, ನಾವು ಸುಮ್ಮನಿರುವುದಿಲ್ಲ. ಅಮೆರಿಕ ಸೇನೆ ಮತ್ತು ಇಸ್ರೇಲ್‌ಗೆ ತಕ್ಕ ಪಾಠ ಕಲಿಸಲಿದ್ದೇವೆ' ಎಂದು ಇರಾನ್ ಸಂಸತ್ತಿನ ಸ್ಪೀಕರ್ ಖಲೀಬಾಫ್ ಎಚ್ಚರಿಸಿದರು.

ದೇಶದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಕುರಿತು ಭಾನುವಾರ ಇರಾನ್ ಸಂಸತ್ತು ಸಭೆ ಸೇರಿ ಚರ್ಚೆ ನಡೆಸಿತು. ಈ ವೇಳೆ ಪೀಠದ ಮುಂಭಾಗ ಬಂದ ಸಂಸದರು, 'ಅಮೆರಿಕ ಅಂತ್ಯವಾಗಬೇಕು' ಎಂದು ಕೂಗಿ, ಆಕ್ರೋಶ ಹೊರಹಾಕಿದರು. ಆಗ ಮಾತನಾಡಿದ ಸ್ಪೀಕರ್, 'ಅಮೆರಿಕ ದಾಳಿ ಮಾಡಿದರೆ, ಅದಕ್ಕೆ ಇರಾನ್ ತಕ್ಕ ಪಾಠ ಕಲಿಸಲಿದೆ' ಎಂದರು.

ಪ್ರತಿಭಟನೆಯನ್ನು ಸಮರ್ಥವಾಗಿ ನಿಯಂತ್ರಿಸು ತ್ತಿರುವುದಕ್ಕೆ ಪೊಲೀಸರು, ಅರೆಸೈನಿಕ ಪಡೆ ಮತ್ತು ಸ್ವಯಂ ಸೇವಕರನ್ನು ಸ್ಪೀಕರ್ ಇದೇ ವೇಳೆ ಶ್ಲಾಘಿಸಿದರು. 'ಅಮೆರಿಕ ದಾಳಿ ಮಾಡಿದರೆ ತಕ್ಕ ಪ್ರತ್ಯುತ್ತರ ನೀಡುತ್ತೇವೆ. ಅಮೆರಿಕ ಸೇನೆಯ ಎಲ್ಲ ಕೇಂದ್ರಗಳು, ನೆಲೆಗಳು ಮತ್ತು ಹಡಗುಗಳನ್ನು ಗುರಿಯಾಗಿಸುತ್ತೇವೆ. ಎದುರಾಳಿ ದಾಳಿ ನಡೆಸಿದ ಬಳಿಕ ನಾವು ಪ್ರತಿಕ್ರಿಯಿಸುತ್ತೇವೆ ಎಂದುಕೊಳ್ಳಬೇಡಿ. ನಮ್ಮ ವಿರುದ್ಧದ ಬೆದರಿಕೆಯ ಯಾವುದೇ ಕುರುಹು ಲಭ್ಯವಾದರೂ ತಕ್ಕ ಪಾಠ ಕಲಿಸದೆ ಬಿಡುವುದಿಲ್ಲ' ಎಂದು ಸ್ಪೀಕರ್ ಗುಡುಗಿದರು.



ಶಿರಸಿಯಲ್ಲಿ ನಡೆದ ಜನ ಸಮಾವೇಶದಲ್ಲಿ ಪಾಲ್ಗೊಂಡ ಪರಿಸರ ಕಾರ್ಯಕರ್ತರು

'ನದಿಗೂ ಜೀವದ ಹಕ್ಕು ಕೊಡಿ'

ಶಿರಸಿಯಲ್ಲಿ ನಡೆದ ಜನ ಸಮಾವೇಶದಲ್ಲಿ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ಶಿರಸಿ: 'ಉತ್ತರ ಕನ್ನಡದಲ್ಲಿ ನದಿ ತಿರುವು ಯೋಜನೆ ಕೈಬಿಡಬೇಕು. ಮಾನವ ಹಕ್ಕು ಕಾಯ್ದೆ ಜಾರಿಗೆ ತಂದ ಮಾದರಿಯಲ್ಲಿ ನದಿಗಳಿಗೂ ಜೀವಿಸುವ ಹಕ್ಕು ಹಾಗೂ ನೈಸರ್ಗಿಕ ಹರಿವು ಉಳಿಸಿಕೊಳ್ಳುವ ಹಕ್ಕು ನೀಡುವ ಕಾನೂನು ಜಾರಿಗೆ ತರಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮುಂದಾಗಬೇಕು' ಎಂದು ನದಿ ತಿರುವು ಯೋಜನೆ ವಿರೋಧಿಸಿ ಶಿರಸಿಯಲ್ಲಿ ಭಾನುವಾರ ಆಯೋಜಿಸಿದ್ದ ಜನ ಸಮಾವೇಶದಲ್ಲಿ ಆಗ್ರಹಿಸಲಾಯಿತು.

ಪಶ್ಚಿಮಘಟ್ಟದ ಜೀವನಾಡಿಗಳಾದ ಬೇಡ್ತಿ-ವರದಾ ಹಾಗೂ ಅಘನಾಶಿನಿ-ವೇದಾವತಿ ನದಿ ಜೋಡಣೆ ಯೋಜನೆ ಕೈಬಿಡಲು ಆಗ್ರಹಿಸಿ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನೇತೃತ್ವದಲ್ಲಿ ಸಮಾವೇಶ ನಡೆಯಿತು.

'ನದಿ ಜೋಡಣೆ ಯೋಜನೆ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ರಾಜ್ಯ ಸರ್ಕಾರ ನೀಡಿರುವ ಒಪ್ಪಿಗೆ ಹಿಂಪಡೆಯಬೇಕು. ನದಿ ತಿರುವು ಯೋಜನೆ, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಸೇರಿ ಬೃಹತ್ ಯೋಜನೆಗಳನ್ನು ಜಾರಿ ಮಾಡಬಾರದು' ಎಂದು ಸಮಾವೇಶದಲ್ಲಿ ಹಕ್ಕೊತ್ತಾಯ ಮಾಡಲಾಯಿತು.

'ನದಿ ತಿರುವು ಯೋಜನೆಗಳು ಸೂಕ್ಷ್ಮ ಪಶ್ಚಿಮ ಘಟ್ಟದ ಮಡಿಲಿಗೆ ಬೇಡ, ಉತ್ತರ ಕನ್ನಡ ಜಿಲ್ಲೆಯ ಪರಿಸರ ಧಾರಣ ಸಾಮರ್ಥ್ಯ ಈಗಾಗಲೇ ಮುಗಿದಿದೆ ಎಂದು ಶಿರಸಿ ಮತ್ತು ಬೆಂಗಳೂರಿನಲ್ಲಿ ವಿಜ್ಞಾನಿಗಳು, ನೀರಾವರಿ ತಜ್ಞರು ಸಭೆ ನಡೆಸಿ ವರದಿ ನೀಡಿದ್ದಾರೆ. ಜನಾಭಿಪ್ರಾಯ ಪರಿಗಣಿಸಿ ನದಿ ತಿರುವು ಯೋಜನೆಗಳನ್ನು ಸರ್ಕಾರ ಶಾಶ್ವತವಾಗಿ ಕೈ ಬಿಡಬೇಕು' ಎಂದು ಒತ್ತಾಯಿಸಲಾಯಿತು.

▸5

ಮಹಿಳೆಗೆ ಮದ್ಯ ಕುಡಿಸಿ ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಪತಿಯೊಂದಿಗೆ ಜಗಳ ಮಾಡಿಕೊಂಡು ಹುಬ್ಬಳ್ಳಿಗೆ ಬಂದಿದ್ದ 32 ವರ್ಷದ ಮಹಿಳೆಯನ್ನು ಆಟೊದಲ್ಲಿ ಅಪಹರಿಸಿ, ಅವರಿಗೆ ಮದ್ಯ ಕುಡಿಸಿ ಅತ್ಯಾಚಾರ ಎಸಗಿದ ಆರೋಪದ ಮೇಲೆ ಹಳೇ ಹುಬ್ಬಳ್ಳಿ ಠಾಣೆ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಇಲ್ಲಿನ ಶಿವಶಂಕರ ಕಾಲೊನಿ ನಿವಾಸಿಗಳಾದ ಆಟೊ ಚಾಲಕ ಶಿವಾನಂದ ಕಾನಾನ, ಗೌಂಡಿ ಕಾರ್ಮಿಕ ಗಣೇಶ ಗಿಡ್ಡನ್ನವರ ಹಾಗೂ ವಿಡಿಯೊ ಚಿತ್ರೀಕರಿಸಿದ ಪೇಂಟರ್ ಪ್ರದೀಪ ದೊಡಮನಿ ಬಂಧಿತರು.

ಹಾವೇರಿಯ ನಾಗೇನಮಟ್ಟಿ ಯವರಾದ ಸಂತ್ರಸ್ತೆಗೆ ನಗರದ ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳ ಸುಪರ್ದಿಗೆ ಒಪ್ಪಿಸಲಾಗಿದೆ.

ಮಹಿಳೆ ಶಿವಮೊಗ್ಗದಲ್ಲಿ ವಾಸವಿದ್ದಾಗ ಗಂಡನ ಜೊತೆ ಜಗಳ ಮಾಡಿಕೊಂಡಿದ್ದರು. ಪತ್ನಿ ಮೇಲೆ ಹಲ್ಲೆ ನಡೆಸಿದ ಪ್ರಕರಣದಲ್ಲಿ ಪತಿ ಶಿವಮೊಗ್ಗದ ಜೈಲಿನಲ್ಲಿದ್ದಾರೆ. ಒಂದೂವರೆ ತಿಂಗಳ ಹಿಂದೆ ಹುಬ್ಬಳ್ಳಿಗೆ ಬಂದಿದ್ದ ಮಹಿಳೆ, ಇಲ್ಲಿನ ಸಿದ್ಧಾರೂಢಮಠ, ವಿವಿಧ ದೇವಸ್ಥಾನಗಳು, ಬಸ್ ನಿಲ್ದಾಣಗಳಲ್ಲಿ ರಾತ್ರಿ ತಂಗುತ್ತಿದ್ದರು.

▸5

ಪಿಎಸ್‌ಎಲ್‌ವಿ–ಸಿ62 ಉಡಾವಣೆಗೆ ಕ್ಷಣಗಣನೆ

ಶ್ರೀಹರಿಕೋಟ (ಪಿಟಿಐ): ಭೂ ಸರ್ವೇಕ್ಷಣಾ ಉಪಗ್ರಹ ಮತ್ತು ಇತರ 14 ಉಪಗ್ರಹಗಳನ್ನು ಹೊತ್ತ ಪಿಎಸ್‌ಎಲ್‌ವಿ–ಸಿ62 ರಾಕೆಟ್ ಉಡಾವಣೆಗೆ ಕ್ಷಣಗಣನೆ ಆರಂಭವಾಗಿದೆ.

ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಸೋಮವಾರ ಬೆಳಿಗ್ಗೆ 10.18ಕ್ಕೆ 250 ಟನ್ ತೂಕದ ಸಾಧನಗಳನ್ನು ಹೊತ್ತು ಎಲ್‌ಎಸ್‌ಎಲ್‌ವಿ–ಸಿ62 ರಾಕೆಟ್ ನಭಕ್ಕೆ ಚಿಮ್ಮಲಿದೆ ಎಂದು ಇಸ್ರೊ ಭಾನುವಾರ ತಿಳಿಸಿದೆ. ಇಸ್ರೊ ಅಂಗಸಂಸ್ಥೆಯಾದ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ನೇತೃತ್ವದಲ್ಲಿ ದೇಶೀಯ ಹಾಗೂ ವಿದೇಶದ 14 ಉಪಗ್ರಹಗಳನ್ನು ಕಕ್ಷೆಗೆ ಕಳುಹಿಸಲು ಸಿದ್ಧತೆ ನಡೆದಿದೆ. ಥಾಯ್ಲೆಂಡ್ ಮತ್ತು ಬ್ರಿಟನ್ ಅಭಿವೃದ್ಧಿ ಪಡಿಸಿದ ಭೂ ಸರ್ವೇಕ್ಷಣಾ ಉಪಗ್ರಹವನ್ನು ಪಿಎಸ್‌ಎಲ್‌ವಿ ರಾಕೆಟ್ ಮೊದಲಿಗೆ ಕಕ್ಷೆಗೆ ತಲುಪಿಸಲಿದೆ. ನಂತರ ನಭಕ್ಕೆ ಹಾರಿದ 17 ನಿಮಿಷಗಳ ಒಳಗಾಗಿ ಉಳಿದ 13 ಉಪಗ್ರಹಗಳನ್ನು ಸೂರ್ಯ ಸಮನ್ವಯ ಕಕ್ಷೆಗೆ ಸೇರಿಸಲಿದೆ.

ಮುಖ್ಯಾಂಶಗಳು
- ಬೆಳಿಗ್ಗೆ 10.18ಕ್ಕೆ ನಭಕ್ಕೆ ಚಿಮ್ಮಲಿದೆ
- ಕಕ್ಷೆ ಸೇರಲಿರುವ 14 ಉಪಗ್ರಹಗಳು

ಚಿನಕುರುಳಿ ಪ್ರಕಾಶ್ ಶೆಟ್ಟಿ



RAJIV GANDHI UNIVERSITY OF HEALTH SCIENCES, KARNATAKA
4th 'T' Block, Jayanagar, Bengaluru - 560041, India
&
ALVA'S Education Foundation®
Moodubidire - 574 227, D.K., Karnataka
Jointly organize
Under the auspices of
ASSOCIATION OF INDIAN UNIVERSITIES (AIU)
85th ALL INDIA INTER-UNIVERSITY ATHLETICS CHAMPIONSHIP 2025–26 (Men & Women)
JAN 12 13 14 15 16 2026
Swarajya Maidan, Moodubidire
Under the esteemed leadership of

DR. BHAGAVAN B.C.
Hon'ble Vice-Chancellor, RGUHS
Hearty Welcome

Dr M. Mohan Alva
Chairman, Alva's Education Foundation (R.), Moodubidire

JSW PRESENTS
BLR HUBBA | ಬೆಂಗಳೂರು ಹಬ್ಬ
GOVERNMENT OF KARNATAKA
ಬೆಂಗಳೂರಿನ ಅತಿ ದೊಡ್ಡ ಕಲೆ ಮತ್ತು ಸಾಂಸ್ಕೃತಿಕ ಹಬ್ಬ
ಜನವರಿ 16 ರಿಂದ 25, 2026
350 ಕ್ಕೂ ಹೆಚ್ಚು ಕಾರ್ಯಕ್ರಮಗಳು - ಫ್ರೀಡಂ ಪಾರ್ಕ್ & 30+ ಸ್ಥಳಗಳಲ್ಲಿ.

ವಿಶೇಷ ಹಬ್ಬ
ಈಗ ಕಾಯ್ದಿರಿಸಿ
www.blrhubba.in
ಸಂಗೀತ, ನೃತ್ಯ, ನಾಟಕ, ಕಲೆ, ಆಹಾರ
ಮಕ್ಕಳಿಗಾಗಿ ವಿಶೇಷ ಚಟುವಟಿಕೆಗಳು, ಮಳಿಗೆಗಳು ಮತ್ತು ಇತ್ಯಾದಿ
Anchor unboxingBLR Sponsors manipalfoundation Biocon Group go native Prestige Group

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ



ಕಾರ್ಯಕ್ರಮದಲ್ಲಿ ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ ಅವರನ್ನು ಗೌರವಿಸಲಾಯಿತು. ಬಿ.ಎಸ್‌. ಜಯಪ್ರಕಾಶ ನಾರಾಯಣ, ಆರ್‌. ಶೇಷಶಾಸ್ತ್ರಿ, ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

‘ಗುರು ಸ್ಥಾನದ ಮೌಲ್ಯಗಳ ಮೂರ್ತರೂಪ ಚಿಮೂ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ನಾಡು, ನುಡಿ, ಗಡಿ ವಿಚಾರ ಬಂದಾಗ ನಿಖರ, ನಿಷ್ಠುರವಾಗಿ ಮಾತನಾಡುತ್ತಿದ್ದ ಸಂಶೋಧಕ ಎಂ. ಚಿದಾನಂದಮೂರ್ತಿ ಅವರ ಹಲವು ಸಂಶೋಧನಾ ಕೃತಿಗಳು ಒಕ್ಕೂಟ ವ್ಯವಸ್ಥೆಗೆ ಅಪಾಯ ಬಂದ ಸಂದರ್ಭದಲ್ಲಿ ನೆರವಿಗೆ ಬರುತ್ತವೆ’ ಎಂದು ಸಾಹಿತಿ ಎಸ್‌.ಜಿ.ಸಿದ್ದರಾಮಯ್ಯ ಹೇಳಿದರು.

ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ ಮತ್ತು ಸಪ್ನ ಪುಸ್ತಕ ಮಳಿಗೆ ಸಂಯುಕ್ತವಾಗಿ ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ‘ಕನ್ನಡ-ಕನ್ನಡಿಗ- ಕರ್ನಾಟಕ’ ಕೃತಿಯ ಪರಿಷ್ಕೃತ 17ನೇ ಮುದ್ರಣದ ಜನಾರ್ಪಣೆ, ಚಿದಾನಂದಮೂರ್ತಿ ಸ್ಮರಣೆ ಮತ್ತು ಎಸ್‌.ಎಲ್‌.ಭೈರಪ್ಪ ನೆನಪು ಕಾರ್ಯಕ್ರಮ-ದಲ್ಲಿ ಅವರು ಮಾತನಾಡಿದರು.

‘ಪ್ರಾಮಾಣಿಕ ಸಂಶೋಧನೆಗೆ ಹೆಸರಾಗಿದ್ದ ಎಂ. ಚಿದಾನಂದಮೂರ್ತಿ ಅವರು ಗುರುವಿನ ಸ್ಥಾನದ ಮೌಲ್ಯಗಳ ಮೂರ್ತರೂಪದಂತೆ ಬಾಳಿ ಬದುಕಿದರು. ಅಧಿಕಾರ, ಪ್ರಶಸ್ತಿ ಬಯಸಿ ಹೋದವರಲ್ಲ. ಈ ಕಾರಣದಿಂದಲೇ ಗೌರವ ಉಳಿಸಿ-ಕೊಂಡಿದ್ದಾರೆ’ ಎಂದರು.

ಸಂಶೋಧಕ ಆರ್‌. ಶೇಷಶಾಸ್ತ್ರಿ ಮಾತನಾಡಿ, ‘ಚಿದಾನಂದಮೂರ್ತಿ ಖಚಿತ ಪುರಾವೆಗಳನ್ನು ಆಧರಿಸಿ ಸಂಶೋಧನೆ ನಡೆಸುತ್ತಿದ್ದರು. ಕರ್ನಾಟಕಕ್ಕೆ ಸಂಬಂಧಿಸಿದ ಬಹುಮುಖಿ ಧಾರೆಗಳ ಗ್ರಂಥಾಲಯ ಸ್ಥಾಪಿಸಬೇಕು ಎಂಬ ಕನಸು ಹೊಂದಿದ್ದರು. ಅದನ್ನು ಸರ್ಕಾರ ಈಡೇರಿಸಬೇಕು’ ಎಂದು ಅಭಿಪ್ರಾಯಪಟ್ಟರು.

ಅನುವಾದಕ ಬಿ. ಎಸ್‌. ಜಯಪ್ರಕಾಶ ನಾರಾಯಣ ಮಾತನಾಡಿ, ‘ಎಸ್‌.ಎಲ್‌. ಭೈರಪ್ಪ ಅವರು ನಂಬಿಕೆ, ಸಂಘರ್ಷ, ಅನುದಿನದ ಸಂಗತಿಗಳಿಗೆ ಗಂಭೀರ ತಾತ್ವಿಕತೆಯನ್ನು ತಮ್ಮ ಬರವಣಿಗೆ ಮೂಲಕ ಕಟ್ಟಿಕೊಡುತ್ತಿದ್ದರು. ಲೇಖಕರನ್ನು ಎಡ-ಬಲ ತರಹದ ಚಿಂತನೆಗಳ ಸ್ವರೂಪದಲ್ಲಿ ನೋಡುವುದು ಸರಿಯಲ್ಲ’ ಎಂದರು. ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ. ಸಪ್ನ ಪುಸ್ತಕ ಮಳಿಗೆಯ ವ್ಯವಸ್ಥಾಪಕ ಆರ್‌. ದೊಡ್ಡೇಗೌಡ, ಕನ್ನಡ ಹೋರಾಟಗಾರ ಮ.ಚಂದ್ರಶೇಖರ್‌, ಕೆ.ಎನ್‌.ಭಗವಾನ್‌, ಬೆ.ರಾ.ನಾಗರಾಜ್‌, ರಮೇಶ್‌ ಬಾಬು, ಸುರೇಶ್‌ ಉಪಸ್ಥಿತರಿದ್ದರು.

‘ವಿದೇಶಕ್ಕೆ 14 ಲಕ್ಷ ಉದ್ಯಮಿಗಳು’

‘ಉದ್ಯಮಿ ಒಕ್ಕಲಿಗ ಎಕ್ಸ್‌ಪೊ–2026’ರಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್



ಒಕ್ಕಲಿಗ ಎಕ್ಸ್‌ಪೊದ ಸಮಾರೋಪದಲ್ಲಿ ಸ್ಫಟಿಕಪುರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಅವರನ್ನು ಫಸ್ಟ್‌ಸರ್ಕಲ್‌ನ ಮುಖ್ಯ ಮಾರ್ಗದರ್ಶಕ ಜಯರಾಮ್ ರಾಯಪುರ, ಅಧ್ಯಕ್ಷ ಡಿ. ಮುನಿರಾಜು ಗೌರವಿಸಿದರು. ಶಾಸಕ ಶರತ್ ಬಚ್ಚೇಗೌಡ, ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್‌.ಶಂಕರ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾರಿ ನಿರ್ದೇಶನಾಲಯ, ಸಿಬಿಐ ಕಾಟ ತಾಳಲು ಆಗದೇ ದೇಶದಲ್ಲಿನ 14 ಲಕ್ಷ ಉದ್ಯಮಿಗಳು ವಿದೇಶಗಳಿಗೆ ಸ್ಥಳಾಂತರಗೊಳ್ಳುತ್ತಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಇ.ಡಿ ಸಿಬಿಐ ಕಾಟ: ಡಿಕೆಶಿ

ಅರಮನೆ ಮೈದಾನದಲ್ಲಿ ನಡೆದ ‘ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ–2026’ರಲ್ಲಿ ಮಾತನಾಡಿ, ‘ನನಗೂ ಹಲವರು ಹೇಳುತ್ತಾರೆ. ಕಷ್ಟವೋ, ಸುಖನೋ ಎಲ್ಲ ಅನುಭವಿಸಿ ಆಗಿದೆ. ಇಲ್ಲೇ ಇರುತ್ತೇನೆ ಅಂತ ಹೇಳಿರುವೆ. ಹಣ್ಣು ಕೆಂಪಾಗಿ, ಚೆನ್ನಾಗಿದ್ದರೆ ಜನರು ಕಲ್ಲು ಹೊಡೆಯುತ್ತಾರೆ. ಯಾರು ಬಲಿಷ್ಠರಾಗುತ್ತಾರೋ ಅವರಿಗೆ ಶತ್ರುಗಳು ಜಾಸ್ತಿ. ಅಸೂಯೆ ಪಡುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಊರಿನಲ್ಲಿ ಹುಟ್ಟಿದ ಹೋರಿಗಳೆಲ್ಲ ಬಸವ ಆಗುವುದಿಲ್ಲ. ಎಲ್ಲರೂ ನಾಯಕರಾಗಲು ಆಗುವುದಿಲ್ಲ’ ಎಂದರು.

‘ಯಾವುದೇ ಕೆಲಸ ಇರಲಿ ಆತ್ಮ ವಿಶ್ವಾಸ ಇಟ್ಟುಕೊಂಡು ಮುನ್ನುಗ್ಗಬೇಕು. ಯಾವತ್ತೂ ತಮ್ಮನ್ನು ತಾವು ನಿಷ್ಪ್ರಯೋಜಕ, ಸಣ್ಣವ ಎಂದು ಭಾವಿಸಬಾರದು. ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತೆ. ಬದ್ಧತೆಗೆ ಯಶಸ್ಸು ಸಿಗುತ್ತದೆ. ದೇವರು ವರ, ಶಾಪ ನೀಡುವುದಿಲ್ಲ. ಅವಕಾಶ ನೀಡುತ್ತಾನೆ. ಆ ಅವಕಾಶ ಸಿಕ್ಕಾಗ ಶ್ರಮವಹಿಸಿ ಯಶಸ್ಸು ಸಾಧಿಸಬೇಕು. ಮನುಷ್ಯನಿಗೆ ನಂಬಿಕೆಗಿಂತ ದೊಡ್ಡ ಗುಣ ಮತ್ತೊಂದಿಲ್ಲ. ವ್ಯವಹಾರದಲ್ಲಿ ನಂಬಿಕೆ ಉಳಿಸಿಕೊಳ್ಳಬೇಕು. ಆಗ ಗ್ರಾಹಕರು ಬರುತ್ತಾರೆ. ನಂಬಿಕೆ ಮೂಲಕ ಬ್ರ್ಯಾಂಡ್ ಹೆಚ್ಚಿಸಿಕೊಳ್ಳಬಹುದು’ ಎಂದರು.

‘ಉದ್ಯಮಿಗಳು ಸಾಲ ತಂದು ವ್ಯಾಪಾರ ಮಾಡುತ್ತಾರೆ. ಬಡ್ಡಿ ಕಟ್ಟಿ, ಹಲವಾರು ಉದ್ಯೋಗಿಗಳಿಗೆ ವೇತನ ನೀಡುತ್ತಾರೆ. ಜಿಎಸ್‌ಟಿ ಪಾವತಿಸಿದ ನಂತರ ಉಳಿದರೆ ಲಾಭ. ಒಕ್ಕಲಿಗರು ಸ್ವಾಭಿಮಾನದ ಬದುಕಿಗೆ ದೊಡ್ಡ ಶಕ್ತಿ. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲ ಇದೆ’ ಎಂದರು.

‘ಬಾಲಗಂಗಾಧರನಾಥ ಸ್ವಾಮೀಜಿ ಅವರ ಜನ್ಮದಿನ ಕಾರ್ಯಕ್ರಮಕ್ಕೆ ಪುಟ್ಟಪರ್ತಿ ಸಾಯಿ ಬಾಬಾ ಅವರು ಬಂದಿದ್ದರು. ಅವರು ಹಣ ಹಾಗೂ ರಕ್ತ ಎರಡೂ ನಿರಂತರ ಚಲನೆಯಲ್ಲಿ ಇರಬೇಕು, ಆಗಲೇ ಒಳ್ಳೆಯದು ಎಂದಿದ್ದರು. ಯಾವುದೇ ಉದ್ಯಮ ಮಾಡಿದರೂ ಸಮಾಜದಲ್ಲಿ ಉತ್ತಮ ಘನತೆ ಹೊಂದಿರಬೇಕು’ ಎಂದು ಹೇಳಿದರು.

ಫಸ್ಟ್ ಸರ್ಕಲ್ ಮುಖ್ಯ ಮಾರ್ಗದರ್ಶಕ ಜಯರಾಮ್ ರಾಯಪುರ, ಅಧ್ಯಕ್ಷ ಡಿ. ಮುನಿರಾಜು, ಮಾಜಿ ಸಚಿವ ಬಿ.ಎಲ್‌.ಶಂಕರ್, ಉದ್ಯಮಿ ಪ್ರಶಾಂತ್ ಪ್ರಕಾಶ್, ಸಮಾಜದ ಮುಖಂಡರಾದ ವಿ.ರಾಮಸ್ವಾಮಿ, ಡಾ.ನಾಗೇಶ್, ಶಿವಕುಮಾರ್, ಬಾಲಕೃಷ್ಣ, ವೆಂಕಟಪ್ಪ, ನೀಲಕಂಠ, ತಿಮ್ಮೇಶ್ ಉಪಸ್ಥಿತರಿದ್ದರು.

ಒಕ್ಕಲಿಗರ ಮಕ್ಕಳಿಗೆ ‘ಗೌಡ’ ಕಡ್ಡಾಯ

ಒಕ್ಕಲಿಗರು ಮಕ್ಕಳ ಹೆಸರಿನ ಮುಂದೆ ‘ಗೌಡ’ ಪದವನ್ನು ಕಡ್ಡಾಯವಾಗಿ ಸೇರಿಸಬೇಕು. ಆಗ ಮಾತ್ರ ಸಮಾಜ ಅವರನ್ನು ಸುಲಭವಾಗಿ ಗುರುತಿಸುತ್ತದೆ ಎಂದು ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದ ಅಧ್ಯಕ್ಷ ಶರತ್ ಬಚ್ಚೇಗೌಡ ಹೇಳಿದರು.

ಉದ್ಯೋಗಿಗಳಾಗುವುದಕ್ಕಿಂತ ಉದ್ಯಮಿಗಳಾದರೆ ಹತ್ತಾರು ಜನರಿಗೆ ಉದ್ಯೋಗ ನೀಡಬಹುದು. ಒಕ್ಕಲು ಮಾಡಿದರೆ ಗ್ರಾಮೀಣ ಜನರು ಗುರುತಿಸುತ್ತಾರೆ. ಉದ್ಯಮಿಯಾದರೆ ನಗರದಲ್ಲೂ ಪರಿಚಿತರಾಗುತ್ತಾರೆ ಎಂದರು.

‘ಒಕ್ಕಲಿಗರಿಗೆ ಹೆಚ್ಚು ಮಕ್ಕಳಿರಲಿ’

‘ಒಂದು ಸಮುದಾಯ ಸ್ಪರ್ಧೆಗೆ ಬಿದ್ದವರಂತೆ ಮಕ್ಕಳು ಮಾಡಿಕೊಳ್ಳುತ್ತಾರೆ. ಒಕ್ಕಲಿಗರು ಒಂದು ಮಗುವನ್ನೂ ಸಾಕಲು ಕಷ್ಟ ಎಂದು ಕೊರಗುತ್ತಿದ್ದಾರೆ. ಇಂತಹ ಮನೋಭಾವ ಬದಲಾಗಬೇಕು. ಹೆಚ್ಚು ಮಕ್ಕಳನ್ನು ಪ್ರತಿ ಕುಟುಂಬಗಳೂ ಹೊಂದಬೇಕು’ ಎಂದು ಚಿಕ್ಕಮಗಳೂರಿನ ವೈದ್ಯ ಜೆ.ಪಿ.ಕೃಷ್ಣೇಗೌಡ ಹೇಳಿದರು.

ಒಕ್ಕಲಿಗರು ಕಾಫಿ ಉದ್ಯಮಕ್ಕೆ ಹೆಸರಾಗಿದ್ದಾರೆ. ಸಿದ್ಧಾರ್ಥ ಹೆಗ್ಡೆ ಕಾಫಿ ಸಾಮ್ರಾಜ್ಯವನ್ನೇ ಕಟ್ಟಿದ್ದ ದೊರೆ. ಸಾವಿರಾರು ಜನರಿಗೆ ಉದ್ಯೋಗ ನೀಡಿದ್ದರು. ಅವರ ರೀತಿ ಇತರರೂ ಸಮಾಜದ ಜನರ ಏಳಿಗೆಗೆ ಕೈಜೋಡಿಸಬೇಕು ಎಂದರು.

‘ಸಂಕ್ರಾಂತಿ ನೆಲಮೂಲ ಸಂಪ್ರದಾಯಕ್ಕೆ ಸೋಪಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಹಬ್ಬಗಳು ಕನ್ನಡ, ತೆಲುಗು ಸಂಸ್ಕೃತಿ ಹಾಗೂ ಸಂಪ್ರದಾಯಗಳ ಅಡಿಪಾಯ. ಭಿನ್ನ ಹೆಸರುಗಳಿಂದ ದೇಶದೆಲ್ಲೆಡೆ ಆಚರಿಸಲಾಗುವ ರೈತರ ಹಬ್ಬ ಸಂಕ್ರಾಂತಿಯನ್ನು ತೆಲುಗಿನಲ್ಲಿ ಪೆದ್ದಪಂಡಗ ಎನ್ನಲಾಗುತ್ತದೆ’ ಎಂದು ಮಾಜಿ ಸಚಿವೆ ಜಯಮಾಲಾ ಹೇಳಿದರು.

ತೆಲುಗು ವಿಜ್ಞಾನ ಸಮಿತಿಯು ಶ್ರೀಕೃಷ್ಣದೇವರಾಯ ಕಲಾ ಮಂದಿರದಲ್ಲಿ ಆಯೋಜಿಸಿದ್ದ 73ನೇ ಸಂಕ್ರಾಂತಿ ಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ‘ಈ ಆಚರಣೆ ನಮ್ಮ ನೆಲಮೂಲ ಸಂಪ್ರದಾಯಗಳ ಸೋಪಾನ’ ಎಂದರು.

‘ಕನ್ನಡ ಮತ್ತು ತೆಲುಗು ಭಾಷೆಗಳೆರಡೂ ಮೂಲ ದ್ರಾವಿಡ ಭಾಷೆಯ ಕುಡಿಗಳು. ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ಪರಸ್ಪರ ಹೋಲಿಕೆಯಿದ್ದು, ಎರಡೂ ಭಾಷೆಗಳು ಒಂದೇ ನಾಣ್ಯದ ಎರಡು ಮುಖಗಳಂತಿವೆ’ ಎಂದರು. ತೆಲುಗು ವಿಜ್ಞಾನ ಸಮಿತಿಯ ಅಧ್ಯಕ್ಷ ರಾಧಾಕೃಷ್ಣ ರಾಜು ಮಾತನಾಡಿ, ‘ಏಕತೆಯೇ ನಮ್ಮ ಬಲ. ಸಂಕ್ರಾಂತಿಯು ಅವಿಭಕ್ತ ಕುಟುಂಬಗಳ ಉಳಿವಿಗೆ ಪೂರಕ. ಕನ್ನಡ ಮತ್ತು ತೆಲುಗು ಭಾಷೆಗಳ ಸಂಸ್ಕೃತಿಯ ಆಧಾರಸ್ತಂಭ’ ಎಂದರು.

ಇದೇ ವೇಳೆ ಲೇಖಕಿ ರೋಹಿಣಿ ಸತ್ಯ ಅವರಿಗೆ ಸಂಕ್ರಾಂತಿ ಸಾಹಿತ್ಯ ಪ್ರಶಸ್ತಿ ಮತ್ತು ಕಲಾವಿದೆ ಮಾಲತಿ ಸುಧೀರ್ ಅವರಿಗೆ ಸಂಕ್ರಾಂತಿ ಸಂಸ್ಕೃತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಲೇಖಕಿ ಭವಾನಿ ದೇವಿ ಮತ್ತಿತರು ಉಪಸ್ಥಿತರಿದ್ದರು.

‘ಮರೆಯಾಗುತ್ತಿದೆ ಮಾನವತಾವಾದ’



ಕಾರ್ಯಕ್ರಮದಲ್ಲಿ ಬಿ.ರಮೇಶ್‌, ಕೆ.ಆರ್‌. ರಮೇಶ್ ಕುಮಾರ್‌, ಬರಗೂರು ರಾಮಚಂದ್ರಪ್ಪ, ಎಚ್‌.ಎಲ್‌. ಪುಷ್ಪಾ, ಮಲ್ಲಿಗೆ ಮತ್ತು ಮೋಹನ್ ರಾಜ್ ಇದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಇಂದು ಮೂಲಭೂತವಾದದ ಬಿಕ್ಕಟ್ಟು ಎದುರಿಸುತ್ತಿದೆ. ಆಡಳಿತ ನಡೆಸುತ್ತಿರುವ ಸರ್ಕಾರಗಳು ದ್ವೇಷಗಳನ್ನು ದಾಟದ ಕಾರಣ ಮಾನವತಾವಾದ, ಸೌಹಾರ್ದ ಮರೆಯಾಗುತ್ತಿವೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

‘ಸೌಹಾರ್ದ ಭಾರತ’ ಕೃತಿ ಜನಾರ್ಪಣೆ

ಜನಪ್ರಕಾಶನ, ಸೌಹಾರ್ದ ಕರ್ನಾಟಕ ಶನಿವಾರ ಆಯೋಜಿಸಿದ್ದ ತಮ್ಮ ಕೃತಿ ‘ಸೌಹಾರ್ದ ಭಾರತ’ ಪುಸ್ತಕ ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಪಕ್ಷಪಾತ, ಪೂರ್ವಗ್ರಹ, ಅಸಮಾನತೆ, ಮತೀಯತೆ ಮಿತಿ ಮೀರುತ್ತಿದೆ. ಅದಕ್ಕಾಗಿ ಸೌಹಾರ್ದ ಮತ್ತು ಸಮಾನತೆ ಭಾರತದ ಎರಡು ಕಣ್ಣುಗಳು ಎಂದು ಭಾವಿಸಿ ಸಮಾಜದ ಸ್ವಾಸ್ಥ್ಯ ಕಾಪಾಡಬೇಕಾದುದು ಎಲ್ಲರ ಹೊಣೆಗಾರಿಕೆ. ಸೌಹಾರ್ದ ಮತ್ತು ಸಮಾನತೆಯನ್ನು ಏಕಕಾಲದಲ್ಲಿ ಪ್ರತಿಪಾದಿಸಬೇಕು. ಇಂತಹ ನಡೆ ವೇದಿಕೆಯ ಮೇಲಿನ ವೀರಾವೇಶಕ್ಕೆ ಸೀಮಿತವಾಗದೆ, ಜನರ ಬಳಿಗೆ ವಿಚಾರಗಳು ತಲುಪಬೇಕು. ಜನಾಕ್ಷರ ಆಂದೋಲನವಾಗಬೇಕು’ ಎಂದರು.

ಸಾಹಿತಿ ಎಚ್‌.ಎಲ್‌.ಪುಷ್ಪಾ ಮಾತನಾಡಿ, ‘ಭಾರತದ ಸಂವಿಧಾನ ಇಂದು ಅಪಾಯಕ್ಕೆ ಸಿಲುಕಿದೆ. ಸಹಿಷ್ಣುತೆ, ಸೌಹಾರ್ದ, ಪಂಥೀಯವಾದ ಹೆಚ್ಚು ಚರ್ಚೆಯಾಗುತ್ತಿವೆ. ಎಂತಹ ಭಾರತದಲ್ಲಿ ಜೀವಿಸುತ್ತಿದ್ದೇವೆ ಎಂದು ಕಳವಳವಾಗುತ್ತಿದೆ. ಬಳ್ಳಾರಿಯಂತಹ ಘಟನೆಗಳು ಆಘಾತ ಮೂಡಿಸಿವೆ’ ಎಂದರು.

ಬರಗೂರು ಅವರು ವಿವಿಧ ಸಮಯದಲ್ಲಿ ಬರೆದ ‘ಸ್ವಾಮಿ ವಿವೇಕಾನಂದ: ಸೌಹಾರ್ದ ಸಂಕೇತ’ ‘ದ್ವೇಷ ಬಿಟ್ಟು; ದೇಶ ಕಟ್ಟು’ ‘ಒಂದೇ ದಿನ ಹುತಾತ್ಮರಾದ ಹಿಂದೂ–ಮುಸ್ಲಿಂ ದೇಶ ಭಕ್ತರು’ ಗಾಂಧೀಜಿ: ಪರಧರ್ಮ ಸಹಿಷ್ಣುತೆಯ ಪ್ರತೀಕ’ ‘ಡಾ.ಅಂಬೇಡ್ಕರ್ ದೃಷ್ಟಿಯಲ್ಲಿ ಸಮಾನತೆ ಮತ್ತು ಸೌಹಾರ್ದ’ ‘ಮನುಷ್ಯರು ಬೇಕಾಗಿದ್ದಾರೆ ಹುಡುಕೋಣ ಬನ್ನಿ’ ‘ಮತೀಯತ್ವಕ್ಕೆ ಕನ್ನಡದಲ್ಲಿ ಉತ್ತರ’ ‘ತಾಯ್ತನವನ್ನು ಕಳೆದುಕೊಳ್ಳುತ್ತಿರುವ ಸಮಾಜ’ ಮತ್ತು ಧಾರ್ಮಿಕ–ಸೌಹಾರ್ದತೆ’ ಎಂಬ ಒಂಬತ್ತು ಲೇಖನಗಳು ಸೌಹಾರ್ದ ಭಾರತ ಕೃತಿಯಲ್ಲಿವೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ.ರಮೇಶ್, ದಲಿತ ಮುಖಂಡ ಮಾವಳ್ಳಿ ಶಂಕರ್, ಮೋಹನ್ ರಾಜ್, ಜ್ಯೋತಿ ಅನಂತ ಸುಬ್ಬರಾವ್, ರಾಜಶೇಖರ ಮೂರ್ತಿ ಉಪಸ್ಥಿತರಿದ್ದರು.

‘ಕಾಂಗ್ರೆಸ್‌ನ ಎಲ್ಲರೂ ಜಾತ್ಯತೀತರಲ್ಲ’

‘ಭಗತ್ ಸಿಂಗ್ ಅವರಿಗೂ ಬಲವಂತವಾಗಿ ಜನಿವಾರ ಹಾಕುವ ಕೆಲಸ ನಡೆದಿದೆ. ಸ್ವಾಮಿ ವಿವೇಕಾನಂದ ಅವರನ್ನು ಕೇಶವ ಕೃಪಾದಲ್ಲಿ ಇರಿಸುವ ಕಾರ್ಯ ನಡೆದಿದೆ. ಕಾಂಗ್ರೆಸ್ ಒಳಗೆ ಇರುವ ಎಲ್ಲರೂ ಜಾತ್ಯತೀತರು ಎಂದು ಹೇಳುವ ಧೈರ್ಯವೂ ಇಲ್ಲವಾಗಿದೆ’ ಎಂದು ಮಾಜಿ ಸಚಿವ ಕೆ.ಆರ್. ರಮೇಶ್ ಕುಮಾರ್ ಹೇಳಿದರು.

ಯಾವುದೇ ಪಕ್ಷದ ಪ್ರಣಾಳಿಕೆಯಲ್ಲಿ ದೇಶವನ್ನು ಸುಡುತ್ತೇವೆ. ಜಗಳ ಹಚ್ಚುತ್ತೇವೆ ಎಂದು ಹೇಳಿಲ್ಲ. ಆದರೂ ಈಗ ಬೆಂಕಿಹಚ್ಚುವ ಕೆಲಸ ನಡೆಯುತ್ತಿದೆ. ಚುನಾವಣಾ ಆಯೋಗ, ಸುಪ್ರೀಂ ಕೋರ್ಟ್ ಮೇಲಿನ ವಿಶ್ವಾಸವೂ ಕಡಿಮೆಯಾಗುತ್ತಾ ಹೋಗಿದೆ ಎಂದರು.

‘ಸಮಾಜಕ್ಕೆ ಕೊಡುಗೆ ನೀಡಿದ ಅರಸು ಅವರಿಗೂ ಅನ್ಯಾಯ ಮಾಡಲಾಯಿತು. ಸುಳ್ಳನ್ನು ಸತ್ಯ ಎಂದು ಹೇಳುವವರಿಗೆ ಸಮಾಜದಲ್ಲಿ ಹೆಚ್ಚಿನ ಮನ್ನಣೆ ಸಿಗುತ್ತಿದೆ. ರಾಜಕೀಯ ಪಕ್ಷಗಳಲ್ಲಿ ಪ್ರಜಾಪ್ರಭುತ್ವ ಮಾಯವಾಗಿದೆ. ಮೃಗೀಯ ಮನಸುಗಳಿಗೆ ಸ್ಥಾನ ಮಾನ ಸಿಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ನಿಧನ ವಾರ್ತೆ

ಅರುಂಧತಿ ರಮೇಶ್



ಬೆಂಗಳೂರು: ಕವಯತ್ರಿ ಅರುಂಧತಿ ರಮೇಶ್ (78) ಭಾನುವಾರ ನಿಧನರಾದರು. ಅವರಿಗೆ ಪುತ್ರ ಇದ್ದಾರೆ.

ಅರುಧಂತಿ ಅವರು ದಾವಣಗೆರೆಯ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ್ದರು. ಮಡಿಲು, ಪರಿಸರಕಾವ್ಯ, ಪರಾಗಸ್ಪರ್ಶಕ್ಕೆ ಕಾದ ಕವನ, ಮುಂಜಾವಿನ ಬೆಳದಿಂಗಳು, ಚಿತ್ತಚಾತಕ, ರೊಮ್ಯಾಂಟಿಕ್ ಕಥೆಯೊಂದರ ಕೊನೆ, ಬಗೆದಷ್ಟು ಬಾನು, ವೈಜ್ಞಾನಿಕ ನಾಟಕಗಳು ಹಾಗೂ ನಲ್ನುಡಿಗಳು, ತೇಲಿಬಿಟ್ಟ ದೀಪಗಳು ಅವರ ಕವನ ಸಂಕಲನಗಳಾಗಿವೆ.

ಗೋವಿಂದ ಪೈ ಸ್ಮಾರಕ ಪ್ರತಿಷ್ಠಾನದ ಕಡೆಂಗೋಡ್ಲು ಶಂಕರಭಟ್ಟರ ಪ್ರಶಸ್ತಿ, ಬೇಂದ್ರೆ-ಅಡಿಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಅರುಂಧತಿ ಅವರು ಭಾಜನರಾಗಿದ್ದಾರೆ. ಅರುಂಧತಿ ಅವರ ಅಪೇಕ್ಷೆಯಂತೆ ಮೃತದೇಹವನ್ನು ರಾಮಯ್ಯ ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಗಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಪ್ರಾಣಿಗಳ ಚಿತಾಗಾರ ಮತ್ತೆ ಆರಂಭ

ಬೆಂಗಳೂರು: ಸುಮನಹಳ್ಳಿ ಪ್ರಾಣಿಗಳ ಚಿತಾಗಾರ ಜ.12ರಿಂದ ಪುನರಾರಂಭವಾಗಲಿದೆ ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಕೆ.ವಿ. ರಾಜೇಂದ್ರ ತಿಳಿಸಿದರು.

ಚಿಮಣಿ ಕುಸಿದು 2025ರ ಏಪ್ರಿಲ್ 14ರಿಂದ ಮುಚ್ಚಲಾಗಿದ್ದ ಸುಮನಹಳ್ಳಿ ಪ್ರಾಣಿಗಳ ಚಿತಾಗಾರದಲ್ಲಿ 120 ಅಡಿಗಳ ಚಿಮಣಿ ಪುನರ್ ನಿರ್ಮಾಣ ಮಾಡಲಾಗಿದೆ.

ಪಶ್ಚಿಮ ನಗರ ಪಾಲಿಕೆ ಎಂಜಿನಿಯರಿಂಗ್ ವಿಭಾಗವು ಹೊಸ ಚಿಮಣಿ ರಚನೆಯನ್ನು ಮರುಸ್ಥಾಪಿಸಿದೆ. ಇದರಿಂದ, ಮೃತ ಸಾಕುಪ್ರಾಣಿಗಳು ಮತ್ತು ಬೀದಿ ಪ್ರಾಣಿಗಳ ವಿಲೇವಾರಿಗೆ ಸಹಕಾರಿಯಾಗಲಿದೆ. ಈ ಚಿತಾಗಾರವು ಬೆಳಿಗ್ಗೆ 7ರಿಂದ ಸಂಜೆ 5ರವರೆಗೆ ತೆರೆದಿರುತ್ತದೆ ಎಂದರು.

ಮಾಹಿತಿಗೆ: 9743454593.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವಾರ್ಡ್‌ವಾರು ಕರಡು ಮೀಸಲಾತಿ

155-ದಾಸರಹಳ್ಳಿ ವಿಧಾನಸಭಾ ಕ್ಷೇತ್ರ		
ವಾರ್ಡ್ 1	ನಾಗಸಂದ್ರ	ಸಾಮಾನ್ಯ
ವಾರ್ಡ್ 2	ಚೊಕ್ಕಸಂದ್ರ	ಹಿಂದುಳಿದ ವರ್ಗ ಎ
ವಾರ್ಡ್ 3	ನೆಲಗದರನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 4	ಪಾರ್ವತಿ ನಗರ	ಸಾಮಾನ್ಯ
ವಾರ್ಡ್ 5	ರಾಜೇಶ್ವರಿ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 6	ಶಿವಪುರ	ಪರಿಶಿಷ್ಟ ಜಾತಿ
ವಾರ್ಡ್ 7	ರಾಜಗೋಪಾಲ ನಗರ	ಸಾಮಾನ್ಯ
ವಾರ್ಡ್ 8	ಹೆಗ್ಗನಹಳ್ಳಿ	ಸಾಮಾನ್ಯ
ವಾರ್ಡ್ 9	ಶ್ರೀಗಂಧನಗರ	ಸಾಮಾನ್ಯ (ಮಹಿಳೆ)
ವಾರ್ಡ್ 10	ಸುಂಕದಕಟ್ಟೆ	ಸಾಮಾನ್ಯ (ಮಹಿಳೆ)
153-ಯಶವಂತಪುರ ವಿಧಾನಸಭಾ ಕ್ಷೇತ್ರ		
ವಾರ್ಡ್ 11	ದೊಡ್ಡಬಿದರಕಲ್ಲು	ಸಾಮಾನ್ಯ
ವಾರ್ಡ್ 12	ಅಂದ್ರಹಳ್ಳಿ	ಪರಿಶಿಷ್ಟ ಪಂಗಡ
ವಾರ್ಡ್ 13	ನಾಡಪ್ರಭು ಕೆಂಪೇಗೌಡ ನಗರ	ಸಾಮಾನ್ಯ
ವಾರ್ಡ್ 14	ಹೇರೋಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 15	ಬ್ಯಾಡರಹಳ್ಳಿ	ಹಿಂದುಳಿದ ವರ್ಗ ಎ
ವಾರ್ಡ್ 16	ಉಲ್ಲಾಳು	ಸಾಮಾನ್ಯ
ವಾರ್ಡ್ 17	ನಾಗದೇವನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 18	ಕೆಂಗಲ್ ಹನುಮಂತಯ್ಯ ಪಶ್ಚಿಮ	ಸಾಮಾನ್ಯ
ವಾರ್ಡ್ 19	ಶಿವನಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 20	ಕೆಂಗೇರಿ ಕೋಟೆ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 21	ಕೆಂಗೇರಿ	ಹಿಂದುಳಿದ ವರ್ಗ ಎ (ಮಹಿಳೆ)
154-ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ		
ವಾರ್ಡ್ 22	ಬಂಗಾರಪ್ಪ ನಗರ	ಸಾಮಾನ್ಯ
ವಾರ್ಡ್ 23	ರಾಜರಾಜೇಶ್ವರಿ ನಗರ	ಹಿಂದುಳಿದ ವರ್ಗ ಬಿ
ವಾರ್ಡ್ 24	ಜ್ಞಾನಭಾರತಿ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 25	ವಿನಾಯಕ ಲೇಔಟ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 26	ಮಲ್ಲತ್ತಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 27	ಶ್ರೀಗಂಧದ ಕಾವಲ್	ಹಿಂದುಳಿದ ವರ್ಗ ಎ
ವಾರ್ಡ್ 28	ಕೊಟ್ಟಿಗೆಪಾಳ್ಯ	ಸಾಮಾನ್ಯ
ವಾರ್ಡ್ 29	ಚೌಡೇಶ್ವರಿ ನಗರ	ಸಾಮಾನ್ಯ
ವಾರ್ಡ್ 30	ಕೆಂಪೇಗೌಡ ಬಡಾವಣೆ	ಸಾಮಾನ್ಯ (ಮಹಿಳೆ)
ವಾರ್ಡ್ 31	ಫ್ರೀಡಂ ಫೈಟರ್ ವಾರ್ಡ್	ಸಾಮಾನ್ಯ
ವಾರ್ಡ್ 32	ಲಗ್ಗೆರೆ	ಸಾಮಾನ್ಯ
ವಾರ್ಡ್ 33	ಲಕ್ಷ್ಮೀದೇವಿ ನಗರ	ಪರಿಶಿಷ್ಟ ಜಾತಿ
ವಾರ್ಡ್ 34	ಪೀಣ್ಯ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 35	ಗೊರಗುಂಟೆಪಾಳ್ಯ	ಪರಿಶಿಷ್ಟ ಜಾತಿ (ಮಹಿಳೆ)
156-ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ		
ವಾರ್ಡ್ 36	ನಾಲ್ವಡಿ ಕೃಷ್ಣರಾಜ ಒಡೆಯರ್ ವಾರ್ಡ್	ಪರಿಶಿಷ್ಟ ಜಾತಿ
ವಾರ್ಡ್ 37	ಪುನೀತ್ ರಾಜ್‌ಕುಮಾರ್ ವಾರ್ಡ್	ಸಾಮಾನ್ಯ
ವಾರ್ಡ್ 38	ನಂದಿನಿ ಲೇಔಟ್	ಹಿಂದುಳಿದ ವರ್ಗ ಎ
ವಾರ್ಡ್ 39	ಜೈಮಾರುತಿ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 40	ಮಹಾಲಕ್ಷ್ಮೀಪುರ	ಸಾಮಾನ್ಯ
ವಾರ್ಡ್ 41	ನಾಗಪುರ	ಸಾಮಾನ್ಯ
ವಾರ್ಡ್ 42	ರಾಜಮಯೂರ ವರ್ಮ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 43	ಕೇತಮಾರನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 44	ಶಂಕರ ಮಠ	ಹಿಂದುಳಿದ ವರ್ಗ ಎ
ವಾರ್ಡ್ 45	ಶಕ್ತಿ ಗಣಪತಿ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 46	ಕಮಲಾನಗರ	ಸಾಮಾನ್ಯ (ಮಹಿಳೆ)
ವಾರ್ಡ್ 47	ವೃಷಭಾವತಿ ನಗರ	ಸಾಮಾನ್ಯ (ಮಹಿಳೆ)
157-ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ		
ವಾರ್ಡ್ 48	ಮತ್ತಿಕೆರೆ	ಸಾಮಾನ್ಯ (ಮಹಿಳೆ)
ವಾರ್ಡ್ 49	ಅರಮನೆ ನಗರ	ಹಿಂದುಳಿದ ವರ್ಗ ಎ
ವಾರ್ಡ್ 50	ಸದಾಶಿವನಗರ	ಸಾಮಾನ್ಯ
ವಾರ್ಡ್ 51	ರಾಜಮಹಲ್	ಹಿಂದುಳಿದ ವರ್ಗ ಬಿ
ವಾರ್ಡ್ 52	ಕೋದಂಡರಾಮಪುರ	ಸಾಮಾನ್ಯ (ಮಹಿಳೆ)
ವಾರ್ಡ್ 53	ಮಲ್ಲೇಶ್ವರ	ಹಿಂದುಳಿದ ವರ್ಗ ಎ
ವಾರ್ಡ್ 54	ಸುಬೇದಾರಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 55	ಸುಬ್ರಹ್ಮಣ್ಯನಗರ	ಸಾಮಾನ್ಯ (ಮಹಿಳೆ)
ವಾರ್ಡ್ 56	ಗಾಯತ್ರಿನಗರ	ಸಾಮಾನ್ಯ
ವಾರ್ಡ್ 57	ಕುವೆಂಪು ವಾರ್ಡ್	ಸಾಮಾನ್ಯ (ಮಹಿಳೆ)
165-ರಾಜಾಜಿನಗರ ವಿಧಾನಸಭಾ ಕ್ಷೇತ್ರ		
ವಾರ್ಡ್ 58	ದಯಾನಂದ ನಗರ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 59	ಬಂಡಿ ರೆಡ್ಡಿ ವೃತ್ತ ವಾರ್ಡ್	ಪರಿಶಿಷ್ಟ ಜಾತಿ
ವಾರ್ಡ್ 60	ಪ್ರಕಾಶ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 61	ದ.ರಾ. ಬೇಂದ್ರೆ ವಾರ್ಡ್	ಹಿಂದುಳಿದ ವರ್ಗ ಬಿ
ವಾರ್ಡ್ 62	ರಾಮಮಂದಿರ	ಸಾಮಾನ್ಯ (ಮಹಿಳೆ)
ವಾರ್ಡ್ 63	ರಾಜಾಜಿನಗರ	ಸಾಮಾನ್ಯ
ವಾರ್ಡ್ 64	ಶಿವನಗರ	ಸಾಮಾನ್ಯ
ವಾರ್ಡ್ 65	ಮಂಜುನಾಥ ನಗರ	ಹಿಂದುಳಿದ ವರ್ಗ ಎ
ವಾರ್ಡ್ 66	ಸಾಣೆಗುರುವನಹಳ್ಳಿ	ಹಿಂದುಳಿದ ವರ್ಗ ಎ
ವಾರ್ಡ್ 67	ಬಸವೇಶ್ವರ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 68	ಕಾಮಾಕ್ಷಿಪಾಳ್ಯ	ಸಾಮಾನ್ಯ
166-ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ		
ವಾರ್ಡ್ 69	ಅಗ್ರಹಾರ ದಾಸರಹಳ್ಳಿ	ಸಾಮಾನ್ಯ
ವಾರ್ಡ್ 70	ಡಾ ರಾಜ್‌ಕುಮಾರ್ ವಾರ್ಡ್	ಸಾಮಾನ್ಯ
ವಾರ್ಡ್ 71	ತಿಮ್ಮೇನಹಳ್ಳಿ	ಹಿಂದುಳಿದ ವರ್ಗ ಎ
ವಾರ್ಡ್ 72	ಕಾವೇರಿಪುರ	ಸಾಮಾನ್ಯ (ಮಹಿಳೆ)
ವಾರ್ಡ್ 73	ವಿಷ್ಣುವರ್ಧನ್ ವಾರ್ಡ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 74	ಪಟ್ಟೇಗಾರ ಪಾಳ್ಯ	ಸಾಮಾನ್ಯ
ವಾರ್ಡ್ 75	ಮಾರೇನಹಳ್ಳಿ ಪಶ್ಚಿಮ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 76	ಮೂಡಲಪಾಳ್ಯ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 77	ಮಾರುತಿ ಮಂದಿರ ವಾರ್ಡ್	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 78	ಅನುಭವ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 79	ನಾಗರಬಾವಿ	ಸಾಮಾನ್ಯ
ವಾರ್ಡ್ 80	ಚಂದ್ರಾ ಲೇಔಟ್	ಹಿಂದುಳಿದ ವರ್ಗ ಎ
ವಾರ್ಡ್ 81	ನಾಯಂಡಹಳ್ಳಿ	ಪರಿಶಿಷ್ಟ ಜಾತಿ
167-ವಿಜಯನಗರ ವಿಧಾನಸಭಾ ಕ್ಷೇತ್ರ		
ವಾರ್ಡ್ 82	ಅತ್ತಿಗುಪ್ಪೆ	ಹಿಂದುಳಿದ ವರ್ಗ ಎ
ವಾರ್ಡ್ 83	ಹಂಪಿ ನಗರ	ಹಿಂದುಳಿದ ವರ್ಗ ಬಿ
ವಾರ್ಡ್ 84	ಹೊಸಹಳ್ಳಿ	ಹಿಂದುಳಿದ ವರ್ಗ ಎ
ವಾರ್ಡ್ 85	ಆದಿ ಚುಂಚನಗಿರಿ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 86	ವಿದ್ಯಾರಣ್ಯನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 87	ಕೆ.ಪಿ. ಅಗ್ರಹಾರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 88	ಸಂಗೊಳ್ಳಿ ರಾಯಣ್ಣ ವಾರ್ಡ್	ಪರಿಶಿಷ್ಟ ಪಂಗಡ (ಮಹಿಳೆ)
ವಾರ್ಡ್ 89	ಬಾಪೂಜಿ ನಗರ	ಹಿಂದುಳಿದ ವರ್ಗ ಎ
ವಾರ್ಡ್ 90	ಕೃಷ್ಣದೇವರಾಯ ವಾರ್ಡ್	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 91	ಗಾಳಿ ಆಂಜನೇಯ ದೇವಸ್ಥಾನ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 92	ಮುನೇಶ್ವರ ಬ್ಲಾಕ್	ಸಾಮಾನ್ಯ (ಮಹಿಳೆ)
ವಾರ್ಡ್ 93	ಆವಲಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 94	ದೀಪಾಂಜಲಿ ನಗರ	ಸಾಮಾನ್ಯ
170-ಬಸವನಗುಡಿ ವಿಧಾನಸಭಾ ಕ್ಷೇತ್ರ		
ವಾರ್ಡ್ 95	ಸ್ವಾಮಿ ವಿವೇಕಾನಂದ ವಾರ್ಡ್	ಸಾಮಾನ್ಯ
ವಾರ್ಡ್ 96	ಕತ್ರಿಗುಪ್ಪೆ	ಸಾಮಾನ್ಯ (ಮಹಿಳೆ)
ವಾರ್ಡ್ 97	ಶ್ರೀನಿವಾಸ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 98	ಅಶೋಕ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 99	ಟಿ.ಆರ್. ಶಾಮಣ್ಣ ನಗರ	ಸಾಮಾನ್ಯ
ವಾರ್ಡ್ 100	ಶ್ರೀನಗರ	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 101	ಕೆಂಪಾಂಬುಧಿ ವಾರ್ಡ್	ಸಾಮಾನ್ಯ
ವಾರ್ಡ್ 102	ಹನುಮಂತನಗರ	ಸಾಮಾನ್ಯ (ಮಹಿಳೆ)
ವಾರ್ಡ್ 103	ಎನ್.ಆರ್. ಕಾಲೋನಿ	ಸಾಮಾನ್ಯ
ವಾರ್ಡ್ 104	ತ್ಯಾಗರಾಜನಗರ	ಸಾಮಾನ್ಯ (ಮಹಿಳೆ)
171-ಪದ್ಮನಾಭನಗರ ವಿಧಾನಸಭಾ ಕ್ಷೇತ್ರ		
ವಾರ್ಡ್ 105	ಯಡಿಯೂರು	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 106	ದೇವಗಿರಿ ದೇವಸ್ಥಾನ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 107	ಧರ್ಮಗಿರಿ ವಾರ್ಡ್	ಸಾಮಾನ್ಯ (ಮಹಿಳೆ)
ವಾರ್ಡ್ 108	ಗಣೇಶ ಮಂದಿರ ವಾರ್ಡ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 109	ಕಾಮಾಕ್ಯ ಲೇಔಟ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 110	ಚಿಕ್ಕಲಸಂದ್ರ	ಸಾಮಾನ್ಯ
ವಾರ್ಡ್ 111	ಇಟ್ಟಮಡು	ಸಾಮಾನ್ಯ (ಮಹಿಳೆ)
ವಾರ್ಡ್ 112	ಹೊಸಕೆರೆಹಳ್ಳಿ	ಸಾಮಾನ್ಯ

IDEMI
GOVERNMENT OF INDIA
Ministry of Micro, Small and Medium Enterprises
INSTITUTE FOR DESIGN OF ELECTRICAL MEASURING INSTRUMENTS, MUMBAI
वैद्युतिक मापन उपयंत्र अभिकल्प संस्थान, मुंबई
Government Certificate course on
Digital Marketing With AI
Course Duration 2 Days | Course Dates- 17,18 Jan 2026 | Course Timing - 10.30 am to 5.00 pm
VENUE: IDEMI EXTENTION CENTRE-C/O MSME DEVELOPMENT INSTITUTE, WEST OF CHORD RD, INDUSTRIAL ESTATE, RAJAJINAGAR, BENGALURU, KARNATAKA-560010
Email id : training@idemi.org Web : www.idemi.org Ph.: (022) 2405 0301/2/3/4
Content : Introduction of AI, Chat GTP, Gemini, Google, AI Image & Video Creator, Instagram & Facebook (Organic & Paid Marketing), Linkdin Professional Use, Google Business Profile Creation, YouTube & Earning, Search engine Optimization (SEO).
Fees 4000/-+18 % GST Regular (Include Lunch & Tea) | Student Fees- 2500+18 % GST (include lunch & tea)
(Fees are not Refundable)
For people from IT & Management Field, Entrepreneur Students & all general citizen
After successful certificate will be issued
हमें कॉल करें / Call us between 10 am to 6 pm
Contact-9019870803,9403566219,9481236511,9869087617

TENDER NOTICE
CONRAD BENGALURU
Conrad Bengaluru, a luxurious 5-Star hotel invites sealed tenders from reliable and established vendors in Bengaluru on a rate contract basis of 12 months commencing from **1st April 2026 to 31st March 2027** to supply of following:

Food & Beverage
1. Indian grocery (pulses, spices, tin products, canned & bottle products)
2. Dry Fruits
3. Imported grocery (imported tin, canned & bottle)
4. Local Vegetable
5. Local & imported fruits
6. Exotic vegetable
7. Garlic Peeled, Mushroom, Frozen Corn, Sambar onion
8. Fresh Chicken & Chicken Products.
9. Egg
10. Fresh Fish & Sea Food
11. Fresh lamb & lamb products
12. Frozen Sea Food
13. Imported sea food
14. Tenderloin
15. Fresh milk, milk products & tetra milk Packet.
16. Local & imported cheese
17. Ice Cream
18. Snacks & sweets

Non Food Items
1. Office stationery
2. Printing Stationery
3. Housekeeping & general supply
4. Cooking gas & fuel gel
5. Fresh flower & decorator
6. Hiring of AV equipment's & banquet CCG/ Furniture
7. Courier services
8. Motor Rewinding/glass & mirror fixing
9. Sales Vehicle & ODC Vehicle providers
10. Charcoal
11. ODC Manpower

Tender Forms and other Particulars can be obtained on payment of **Rs. 1000/-** for each category and are available with the purchase manager at the hotel between **10am** to **5pm** from **15th Jan** to **02th February 2026.** Last date of duly filled tender forms submission is on **10th February 2026.**
The Tender is subject to following: 1. The Rates finalized for the twelve months will not change under any circumstances. 2. The rates must be inclusive of delivery charges until our stores premises; tax should be shown separately on the invoices if applicable. 3. The Hotel reserves the right to reject any or all tenders without any reasons whatsoever and no representation shall be entertained on this account.
Sealed tenders must be addressed to the attention of: Purchase Manager, Conrad Bengaluru, 25/3, Kensington Rd, Ulsoor, Bengaluru-08, Tel: +91,80 22144371,73

ಐಕ್ಯೂ ಇನ್ಫೋಟೆಕ್ ಲಿಮಿಟೆಡ್
CIN: L31909KA1985PLC006990
ನೋಂದಾಯಿತ ಕಚೇರಿ: 185, 2 ನೇ ಮಹಡಿ, ಕಣ್ಣನ್ ಕಾಂಪ್ಲೆಕ್ಸ್, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಚಿಕ್ಕ ಬೆಟ್ಟ ಹಳ್ಳಿ, ವಿದ್ಯಾರಣ್ಯಪುರ, ಬೆಂಗಳೂರು, ಕರ್ನಾಟಕ – 560097

ಅಸಾಧಾರಣ ಸಾಮಾನ್ಯ ಸಭೆಯ ಸೂಚನೆ

ಈ ಮೂಲಕ ಸೂಚನೆ ನೀಡುವುದೇನೆಂದರೆ ಅನ್‌ಲಿಸ್ಟೆಡ್ ಸಾರ್ವಜನಿಕ ಕಂಪನಿಯಾದ **ಐಕ್ಯೂ ಇನ್ಫೋಟೆಕ್ ಲಿಮಿಟೆಡ್‌**ನ ಸದಸ್ಯರ ಅಸಾಧಾರಣ ಸಾಮಾನ್ಯ ಸಭೆ (ಇಜಿಎಂ) **ಜನವರಿ 31ನೇ ಶನಿವಾರ ಬೆಳಿಗ್ಗೆ 11.30 ಕ್ಕೆ** ವೀಡಿಯೊ ಕಾನ್ಫರೆನ್ಸಿಂಗ್ (ವಿಸಿ) / ಇತರ ಆಡಿಯೋವಿಶುವಲ್ ವಿಧಾನಗಳ (ಒಎವಿಎಂ) ಮೂಲಕ ಈ ಕೆಳಗಿನ ವ್ಯವಹಾರಗಳನ್ನು ನಡೆಸಲು ತೀರ್ಮಾನಿಸಿದೆ.
ವಿಶೇಷ ವ್ಯವಹಾರ:
1. ಅಸಾಧಾರಣ ಸಾಮಾನ್ಯ ಸಭೆಯ ಸೂಚನೆಯಲ್ಲಿ ನಿಗದಿಪಡಿಸಿದಂತೆ ಪರಿಗಣಿಸಲು ಮತ್ತು ಸೂಕ್ತವೆಂದು ಭಾವಿಸಿದರೆ ನಿರ್ಣಯ(ಗಳನ್ನು) ಅಂಗೀಕರಿಸಲು.
ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 102 ರ ಅನುಸಾರವಾಗಿ ವಿವರಣಾತ್ಮಕ ಹೇಳಿಕೆಯೊಂದಿಗೆ ಇಜಿಎಂ ನ ಸೂಚನೆಯನ್ನು ಕಂಪನಿಯ ಸದಸ್ಯರಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಕಳುಹಿಸಲಾಗಿದೆ. ಈ ಸೂಚನೆಯು ಕಂಪನಿಯ ನೋಂದಾಯಿತ ಕಚೇರಿಯಲ್ಲಿ ವ್ಯವಹಾರದ ಸಮಯದಲ್ಲಿ ಪರಿಶೀಲನೆಗೆ ಲಭ್ಯವಿದೆ.
ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇಜಿಎಂ ಸಮಯದಲ್ಲಿ ರಿಮೋಟ್ ಇ–ಮತದಾನ ಮತ್ತು ಇ–ಮತದಾನವನ್ನು ಒದಗಿಸುತ್ತಿದೆ. ಕಂಪನಿ/ಠೇವಣಿಯಲ್ಲಿ ಇ–ಮೇಲ್ ಐಡಿಗಳನ್ನು ನೋಂದಾಯಿಸಿರುವ ಸದಸ್ಯರು ತಮ್ಮ ನೋಂದಾಯಿತ ಇ–ಮೇಲ್ ವಿಳಾಸದಲ್ಲಿ ಇಜಿಎಂ ನ ಸೂಚನೆ ಮತ್ತು ಇ–ಮತದಾನಕ್ಕಾಗಿ ಲಾಗಿನ್ ರುಜುವಾತುಗಳನ್ನು ಸ್ವೀಕರಿಸುತ್ತಾರೆ.
ತಮ್ಮ ಇ–ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರು, ಇಜಿಎಂ ನ ಸೂಚನೆ ಮತ್ತು ಇ–ಮತದಾನ ಲಾಗಿನ್ ವಿವರಗಳನ್ನು ಸ್ವೀಕರಿಸಲು ತಮ್ಮ ಆಯಾ ಠೇವಣಿ ಭಾಗವಹಿಸುವವರೊಂದಿಗೆ ನೋಂದಾಯಿಸಿಕೊಳ್ಳುವಂತೆ ವಿನಂತಿಸಲಾಗಿದೆ.
ಸದಸ್ಯರು ವಿಸಿ/ಒಎವಿಎಂ ಮೂಲಕ ಇಜಿಎಂ ನಲ್ಲಿ ಭಾಗವಹಿಸಬಹುದು ಮತ್ತು ಭಾಗವಹಿಸಬಹುದು. ಸೇರುವ ಲಿಂಕ್ ಮತ್ತು ಭಾಗವಹಿಸುವಿಕೆಗೆ ಸೂಚನೆಗಳನ್ನು ಸದಸ್ಯರ ನೋಂದಾಯಿತ ಇ–ಮೇಲ್ ವಿಳಾಸಗಳಿಗೆ ಕಳುಹಿಸಲಾಗುತ್ತದೆ. ಯಾವುದೇ ಸಹಾಯವನ್ನು ಬಯಸುವ ಸದಸ್ಯರು **cs@iqinfotech.net** ನಲ್ಲಿ ಕಂಪನಿಯನ್ನು ಸಂಪರ್ಕಿಸಬಹುದು.

ಐಕ್ಯೂ ಇನ್ಫೋಟೆಕ್ ಲಿಮಿಟೆಡ್
ಮಂಡಳಿಯ ಆದೇಶದ ಮೇರೆಗೆ
ಸಹಿ/–
ಶ್ರೀನಿವಾಸನ್ ಸುದರ್ಶನ್
ವ್ಯವಸ್ಥಾಪಕ ನಿರ್ದೇಶಕ
ಡಿಐಎನ್: 00382354

ಸ್ಥಳ: ಬೆಂಗಳೂರು
ದಿನಾಂಕ: 09/01/2026

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE SELLING

Commercial Land

Sarjapur Road

COMMERCIAL LAND Sale 25000Sft Dommasandra Electronic City Main Road Near PRR Junction And DPS 8884501767

Sites

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

RENTAL PROPERTIES

Accommodation Available

Commercial

PREMIUM OFFICE SPACE FOR RENT
On Lalbagh road, Bangalore. 6500sq ft. (G+2) ample parking, 100KV transformer + generator. Fire escape, perfect vastu and road on 3 sides.
9845205215

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS

Business to Business

Finance

FINANCE
Property Collaterals Available in HYDERABAD
9154136496

Business Offers

Finance

MSME LOAN
Available For Any Start-UpsCompanies And Existing Running Companies,Hotels,Shops Establishments Etc
Contact-7204995189

PERSONAL

Change of Name

HARSHITHA ARERA Yathiraj wife of Satish Renukappa residing at No.811, 17th F-1 Koramangala 6th Block Bangalore 560095 changed my name as Harshitha Satish Arera Yathiraj

ಚಿಟಿಕೆ ಸುದ್ದಿ

ಮಾರ್ಚ್ 11ಕ್ಕೆ ವಕೀಲರ ಪರಿಷತ್ ಚುನಾವಣೆ

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ 23 ಪದಾಧಿಕಾರಿಗಳ ಆಯ್ಕೆಗೆ ಮಾರ್ಚ್ 11ರಂದು ಚುನಾವಣೆ ಘೋಷಿಸಲಾಗಿದೆ. ಚುನಾವಣಾ ಅಧಿಕಾರಿಯಾಗಿರುವ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ ಅವರು ಈ ಕುರಿತಂತೆ ಇದೇ 5ರಂದು ಅಧಿಸೂಚನೆ ಹೊರಡಿಸಿದ್ದಾರೆ.

ಮಾರ್ಚ್ 11ರ ಬುಧವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ರಾಜ್ಯದ 194 ಕಡೆ ಹಾಗೂ ಬೆಂಗಳೂರಿನಲ್ಲಿ ಸಿಟಿ ಸಿವಿಲ್ ಕೋರ್ಟ್ ಸಂಕೀರ್ಣದಲ್ಲಿ ಮತದಾನ ಜರುಗಲಿದೆ.

ವಕೀಲರ ವರ್ಗದಲ್ಲಿನ 18 ಮತ್ತು ಮಹಿಳೆಯರ ಕೋಟಾದಡಿಯ 7 ಸೀಟುಗಳೂ ಸೇರಿದಂತೆ ಒಟ್ಟು 25 ಸದಸ್ಯರನ್ನು ಕೆಎಸ್‌ಬಿಸಿ ಹೊಂದಿದೆ. ಇವರಲ್ಲಿ ಇಬ್ಬರನ್ನು ಭಾರತೀಯ ವಕೀಲರ ಪರಿಷತ್ (ಬಿಸಿಐ) ಮುಖಾಂತರ ನಾಮನಿರ್ದೇಶನ ಮಾಡಲಾಗುತ್ತದೆ. ನಾಮಪತ್ರ ಸಲ್ಲಿಕೆಗೆ ಫೆಬ್ರುವರಿ 10 ಕಡೆಯ ದಿನ.

ಬಿಡದಿ ಪುರಸಭೆ ತನಿಖೆಗೆ ಆದೇಶ

ಬಿಡದಿ (ರಾಮನಗರ): ಪಟ್ಟಣದ ಪುರಸಭೆಯ ನೌಕರರ ವೇತನ ವ್ಯತ್ಯಾಸದ ಬಾಕಿ ಮೊತ್ತ ₹1.89 ಕೋಟಿಯನ್ನು ಕಾನೂನುಬಾಹಿರವಾಗಿ ಪಾವತಿಸಿ, ಅದಕ್ಕಾಗಿ ನೌಕರರಿಂದ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಪುರಸಭೆ ಮುಖ್ಯಾಧಿಕಾರಿ ಮೀನಾಕ್ಷಿ ಎಂ. ಮತ್ತು ವಾರ್ಡ್–13ರ ಕಾಂಗ್ರೆಸ್ ಸದಸ್ಯ ಉಮೇಶ್ ವಿರುದ್ಧ ತನಿಖೆಗೆ ನಗರಾಭಿವೃದ್ಧಿ ಇಲಾಖೆ ಆದೇಶಿಸಿದೆ.

ಹೆಚ್ಚುವರಿ ಕಾರ್ಯದರ್ಶಿ-4 ನಾಗೇಂದ್ರ ಪ್ರಸಾದ್ ಹೊನ್ನಳ್ಳಿ, ಅಧೀನ ಕಾರ್ಯದರ್ಶಿ ಲತಾ. ಕೆ., ಮತ್ತು ಪೌರಾಡಳಿತ ನಿರ್ದೇಶನಾಲಯದ ಕೇಂದ್ರ ಸ್ಥಾನಿಕ ಸಹಾಯಕ ಅಮಿತ್ ತರದಾಳೆ ಅವರನ್ನು ಒಳಗೊಂಡ ತನಿಖಾ ತಂಡವನ್ನು ಇಲಾಖೆ ರಚಿಸಿದೆ.

ತನಿಖಾ ತಂಡವು ಪುರಸಭೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ 15 ದಿನದ ಒಳಗಾಗಿ ತನಿಖಾ ವರದಿ ನೀಡಬೇಕು ಎಂದು ನಗರಾಭಿವೃದ್ಧಿ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಕಾರು ಡಿಕ್ಕಿ: ಇಬ್ಬರಿಗೆ ಗಾಯ

ದೊಡ್ಡಬಳ್ಳಾಪುರ: ತಾಲ್ಲೂಕಿನ ತೂಬಗೆರೆ ರಸ್ತೆಯ ಕಾರನಾಳ ಕ್ರಾಸ್ ಬಳಿ ಭಾನುವಾರ ಸಂಜೆ ಎರಡು ಕಾರುಗಳು ಮುಖಾಮುಖಿ ಡಿಕ್ಕಿಯಾಗಿ ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಕಾರಿನಲ್ಲಿದ್ದ ಕೆ.ಆರ್.ಪುರ ನಿವಾಸಿಗಳಾದ ಕಿಶೋರ್, ಶ್ರೀಧರ್ ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಂಗಳೂರಿನ ಕೆ.ಆರ್.ಪುರದಿಂದ ನಂದಿ ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಕಾರನಾಳ ಕ್ರಾಸ್‌ನಲ್ಲಿ ಕಾರುಗಳು ಮುಖಾಮುಖಿ ಡಿಕ್ಕಿಯಾಗಿವೆ.

ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಲೆಗೂ ಮುನ್ನ ಬಾಲಕಿ ಮೇಲೆ ಅತ್ಯಾಚಾರ

ವೈದ್ಯಕೀಯ ಪರೀಕ್ಷೆಯಲ್ಲಿ ದೃಢ: ಆರೋಪಿ ವಿರುದ್ಧ ಪೋಕ್ಸೊ ಪ್ರಕರಣ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಆರು ವರ್ಷದ ಬಾಲಕಿ ಹತ್ಯೆ ಪ್ರಕರಣ ಹೊಸ ತಿರುವು ಪಡೆದಿದ್ದು, ಆರೋಪಿ ಕೊಲೆಗೂ ಮೊದಲು ಅತ್ಯಾಚಾರ ಎಸಗಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ದೃಢಪಟ್ಟಿದೆ.

ಈ ಸಂಬಂಧ ಪಶ್ಚಿಮ ಬಂಗಾಳದ ಯುಸೂಫ್ ಮೀರ್(30) ಎಂಬಾತನನ್ನು ಬಂಧಿಸಿ, ಕೊಲೆ, ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ.

‘ಮೂರು ವರ್ಷದ ಹಿಂದೆ ಪಶ್ಚಿಮ ಬಂಗಾಳದ ಕುಟುಂಬವೊಂದು ತಮ್ಮ ಪುತ್ರಿ ಜತೆ ಬೆಂಗಳೂರಿಗೆ ಬಂದಿದ್ದು, ವೈಟ್‌ಫೀಲ್ಡ್‌ನ ಪಟ್ಟಂದೂರು ಲೇಔಟ್‌ನಲ್ಲಿ ಕಾರ್ಮಿಕರ ಶೆಡ್‌ನಲ್ಲಿ ವಾಸವಾಗಿತ್ತು. ಬಾಲಕಿ ತಂದೆ ಕೂಲಿ ಕಾರ್ಮಿಕನಾಗಿದ್ದರೆ, ತಾಯಿ ಮನೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಬಾಲಕಿಯನ್ನು ಮನೆಯಲ್ಲಿಯೇ ಬಿಟ್ಟು ದಂಪತಿ ಕೆಲಸಕ್ಕೆ ಹೋಗುತ್ತಿದ್ದರು. ಅವರ ಮನೆ ಪಕ್ಕದಲ್ಲೇ ಆರೋಪಿ ವಾಸವಾಗಿದ್ದ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ಯುಸೂಫ್ ಮೀರ್ ಮತ್ತು ಮೃತ ಬಾಲಕಿಯ ತಾಯಿ ನಡುವೆ ಕುಡಿಯುವ ನೀರು ಮತ್ತು ಗುಜರಿ ವಿಷಯಕ್ಕೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ಎಂಟು ದಿನದ ಹಿಂದೆಯೂ ಜಗಳ ಆಗಿತ್ತು. ಅದು ವಿಕೋಪಕ್ಕೆ ಹೋಗಿ ಬಾಲಕಿಯ ತಾಯಿ ಆರೋಪಿಗೆ ಹೊಡೆದಿದ್ದರು. ಅದರಿಂದ ಕೋಪಗೊಂಡಿದ್ದ ಆರೋಪಿ, ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಜನವರಿ 5ರಂದು ದಂಪತಿ ಕೆಲಸಕ್ಕೆ ಹೋದಾಗ, ಬಾಲಕಿಯನ್ನು ಅಪಹರಿಸಿ, ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ. ಬಳಿಕ ವೈಯರ್‌ನಿಂದ ಕುತ್ತಿಗೆಗೆ ಬಿಗಿದು ಹತ್ಯೆಗೈದು ಮೃತದೇಹವನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಇರಿಸಿ, ಬ್ಯಾಗ್‌ನಲ್ಲಿ ತುಂಬಿ ನೆಲ್ಲೂರುಹಳ್ಳಿಯ ರಸ್ತೆ ಬದಿ ಚರಂಡಿಗೆ ಎಸೆದು ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

‘ಕೆಲಸ ಮುಗಿಸಿಕೊಂಡು ಮನೆಗೆ ಬಂದ ದಂಪತಿ ಹುಡುಕಾಟ ನಡೆಸಿದರೂ ಮಗಳು ಪತ್ತೆಯಾಗಿರಲಿಲ್ಲ. ಬಳಿಕ ಪೊಲೀಸರು ಘಟನಾ ಸ್ಥಳದ ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಬಾತ್ಮೀದಾರರ ಮಾಹಿತಿ ಮೇರೆಗೆ ಕ್ಷಿಪ್ರ ಕಾರ್ಯಾಚರಣೆ ನಡೆಸಿ, ಮೃತದೇಹ ಪತ್ತೆ ಹಚ್ಚಿದ್ದರು. ಬಳಿಕ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಹತ್ಯೆಗೈದಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ಬೆಂಕಿ ಅವಘಡದಲ್ಲಿ ಟೆಕಿ ಸಾವು: ವಿದ್ಯಾರ್ಥಿ ಬಂಧನ

ಬೆಂಕಿ ಅವಘಡದಲ್ಲಿ ಉಸಿರುಗಟ್ಟಿ ಸಾಫ್ಟ್‌ವೇರ್ ಎಂಜಿನಿಯರ್ ಶರ್ಮಿಳಾ (34) ಮೃತಪಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಮಮೂರ್ತಿನಗರ ಠಾಣೆ ಪೊಲೀಸರು ಯುವಕನನ್ನು ಬಂಧಿಸಿದ್ದಾರೆ.

ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣದ ಅರಸು ನಗರ ನಿವಾಸಿ ಕರ್ನಲ್ ಕುರೈ (18) ಎಂಬಾತನನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.



ಶರ್ಮಿಳಾ

ದಕ್ಷಿಣ ಕನ್ನಡ ಜಿಲ್ಲೆಯ ಶರ್ಮಿಳಾ ಅವರು ಸುಬ್ರಹ್ಮಣ್ಯ ಲೇಔಟ್‌ನ ವಸತಿ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಶನಿವಾರ ರಾತ್ರಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ಮೃತಪಟ್ಟಿದ್ದರು. ಮೃತಳ ಸ್ನೇಹಿತ ಕೆ.ರೋಹಿತ್ ಅವರ ದೂರು ಆಧರಿಸಿ, ಪೊಲೀಸರು ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಿದ್ದಾರೆ.

‘ಶರ್ಮಿಳಾ ಮನೆಯ ಪಕ್ಕದಲ್ಲಿಯೇ ವಾಸಿಸುತ್ತಿದ್ದ ಕರ್ನಲ್ ಕುರೈ, ಜನವರಿ 3ರ ರಾತ್ರಿ 9 ಗಂಟೆ ಸಮಯದಲ್ಲಿ ಸ್ಲೈಡಿಂಗ್ ವಿಂಡೋ ಮೂಲಕ ಫ್ಲ್ಯಾಟ್ ಪ್ರವೇಶಿಸಿದ್ದಾನೆ. ಲೈಂಗಿಕವಾಗಿ ಸಹಕರಿಸುವಂತೆ ಕೇಳಿದಾಗ, ಆಕೆ ಪ್ರತಿರೋಧ ವ್ಯಕ್ತಪಡಿಸಿದ್ದಾಳೆ. ಆಕೆಯ ಬಾಯಿ ಮತ್ತು ಮೂಗನ್ನು ಬಲವಾಗಿ ಹಿಡಿದಿದ್ದ ಕಾರಣ ಅರೆಪ್ರಜ್ಞಾಸ್ಥಿತಿಗೆ ತಲುಪಿದರು. ಈ ವೇಳೆ ಆಕೆಗೆ ಸಣ್ಣ ಗಾಯವಾಗಿ ರಕ್ತ ಬಂದಿದೆ. ಆರೋಪಿಯು ಆಕೆ ಧರಿಸಿದ್ದ ಬಟ್ಟೆ ಹಾಗೂ ಇತರೆ ಸಾಕ್ಷ್ಯಗಳನ್ನು ಕೊಠಡಿಯ ಹಾಸಿಗೆ ಮೇಲೆ ಹಾಕಿ, ಬೆಂಕಿ ಹಚ್ಚಿ ಸಾಕ್ಷ್ಯ ನಾಶ ಮಾಡಿದ್ದ’ ಎಂದು ಪೊಲೀಸರು ಹೇಳಿದ್ದಾರೆ.

‘ಬಳಿಕ ಶರ್ಮಿಳಾಗೆ ಸೇರಿದ ಮೊಬೈಲ್ ಫೋನ್ ಅನ್ನು ತೆಗೆದುಕೊಂಡು ಆರೋಪಿ ಪರಾರಿಯಾಗಿದ್ದ. ಹೊಗೆ ಆವರಿಸಿಕೊಂಡು, ಉಸಿರುಗಟ್ಟಿ ಮೃತಪಟ್ಟಿದ್ದರು. ವಸತಿ ಸಮುಚ್ಚಯದ ಫ್ಲ್ಯಾಟ್‌ಗೆ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು (ಎಫ್‌ಎಸ್‌ಎಲ್) ಭೇಟಿ ನೀಡಿ ಪರಿಶೀಲಿಸಿದ್ದರು. ತಾಂತ್ರಿಕ ಸಾಕ್ಷ್ಯಾಧಾರಗಳ ಮೇರೆಗೆ ಆರೋಪಿಯನ್ನು ಪತ್ತೆ ಮಾಡಿ, ವಿಚಾರಣೆ ನಡೆಸಿದಾಗ, ಕೃತ್ಯ ಎಸಗಿರುವುದು ಗೊತ್ತಾಯಿತು’ ಎಂದು ತಿಳಿಸಿದರು.

‘ಆರೋಪಿಯನ್ನು 3 ದಿನ ಕಸ್ಟಡಿಗೆ ಪಡೆಯಲಾಗಿದೆ. ಈತ ಪಿಯುಸಿ ವಿದ್ಯಾರ್ಥಿಯಾಗಿದ್ದು, ತಾಯಿ ಜತೆ ವಾಸವಾಗಿದ್ದ. ತನಿಖೆ ಮುಂದುವರಿದಿದೆ’ ಎಂದು ಮಾಹಿತಿ ನೀಡಿದರು.

ಸಿ.ಎಂ ನಿವಾಸಕ್ಕೆ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಕುರಿತ ಕಥೆಯನ್ನು ಹೊಂದಿರುವ ‘ಶಿವಲೀಲಾ’ ಸಿನಿಮಾಗೆ ಚಿತ್ರಮಂದಿರಗಳನ್ನು ನೀಡದೆ ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿ ಚಿತ್ರತಂಡದ ಕಲಾವಿದರು ಹಾಗೂ ಬಿಜೆಪಿ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಮನವಿ ಸ್ವೀಕರಿಸಲು ಯಾರೂ ಬಾರದ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಕಲಾವಿದರು ಹಾಗೂ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಸಿಎಆರ್ ಕೇಂದ್ರಕ್ಕೆ ಬಸ್‌ನಲ್ಲಿ ಕರೆದೊಯ್ದು ಬಳಿಕ ಬಿಡುಗಡೆ ಮಾಡಿದರು.

‘ಸಮಾಜದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಸಾಮಾನ್ಯರ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕುವ ಬಲವಾದ ಪ್ರಯತ್ನವಿದು. ರಾಜ್ಯದ ಮೂರು ಚಿತ್ರಮಂದಿರಗಳಲ್ಲಿ ತಲಾ ಒಂದು ಪ್ರದರ್ಶನಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಶಾಲಾ, ಕಾಲೇಜು ಮಕ್ಕಳು ಕಡ್ಡಾಯವಾಗಿ ಈ ಚಿತ್ರ ನೋಡಲು ಸುತ್ತೋಲೆ ಹೊರಡಿಸಬೇಕು’ ಎಂದು ಚಿತ್ರದ ನಿರ್ದೇಶಕ ಅಶೋಕ್ ಜೈರಾಮ್ ಸರ್ಕಾರವನ್ನು ಆಗ್ರಹಿಸಿದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಮಾತನಾಡಿ, ‘ರಾಜ್ಯದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಜೀವನ ನರಕವಾಗಿದೆ. ಮನೆಯಲ್ಲೂ ಅವರನ್ನು ಸೇರಿಸುವುದಿಲ್ಲ. ಅವರು ಎಲ್ಲಿ ಬದುಕಬೇಕು? ಅವರ ಜೀವನ ಕುರಿತ ಚಿತ್ರ ವೀಕ್ಷಿಸಲು ಚಿತ್ರಮಂದಿರ ಕೊಡುತ್ತಿಲ್ಲ. ಈ ಸಂಬಂಧ ಸರ್ಕಾರವೇ ಸುತ್ತೋಲೆ ಹೊರಡಿಸಿ, ಮಕ್ಕಳು, ಪೋಷಕರು, ಸರ್ಕಾರಿ ನೌಕರರು ವೀಕ್ಷಿಸಲು ಅವಕಾಶ ಕೊಡಬೇಕು’ ಎಂದರು.

‘ಮನೆ, ಪಡಿತರ ಚೀಟಿ, ಆಧಾರ್ ಕಾರ್ಡ್ ಸೇರಿ ಅಗತ್ಯ ಸೌಲಭ್ಯ ಒದಗಿಸಬೇಕು. ಬೇಡಿಕೆ ಈಡೇರಿಸದಿದ್ದರೆ ಹೋರಾಟ ಮಾಡಲಾಗುವುದು’ ಎಂದು ಎಚ್ಚರಿಸಿದರು.

ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಮಾತನಾಡಿ, ‘ಲಿಂಗತ್ವ ಅಲ್ಪಸಂಖ್ಯಾತರ ಸಮಾಜದಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಕಾನೂನು ಬದಲಾವಣೆ ಮಾಡಿಯಾದರೂ ಮೀಸಲಾತಿ ನೀಡಿ, ಮುಖ್ಯವಾಹಿನಿಗೆ ಬರಲು ಅವಕಾಶ ಮಾಡಿ ಕೊಡಬೇಕು’ ಎಂದರು.

ಬಿಜೆಪಿ ಮುಖಂಡರಾದ ವೈ. ಸಂಪಂಗಿ, ಮಂಜುಳಾ ಹಾಗೂ ಜಾನಪದ ಕಲಾವಿದೆ ಜೋಗತಿ ಮಂಜಮ್ಮ ಭಾಗವಹಿಸಿದ್ದರು.

ಮನೆ ಮಾಲೀಕರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಪ್ರಜೆಗಳಿಗೆ ಮನೆ ಬಾಡಿಗೆ ನೀಡಿದ ಬಳಿಕ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡದ ಮನೆ ಮಾಲೀಕರೊಬ್ಬರ ವಿರುದ್ಧ ವೈಟ್‌ಫೀಲ್ಡ್ ಠಾಣೆ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ.

ನಾಗೊಂಡನಹಳ್ಳಿ ನಿವಾಸಿ ರಾಘವೇಂದ್ರ ಎಂಬವರ ವಿರುದ್ಧ ವಲಸೆ ಮತ್ತು ವಿದೇಶಿಯರ ಕಾಯ್ದೆ ಹಾಗೂ ಸರ್ಕಾರಿ ಅಧಿಕಾರಿಗಳಿಗೆ ಮಾಹಿತಿ ನೀಡದೆ ವಂಚಿಸಿದ ಆರೋಪದ ಮೇಲೆ ಎಫ್‌ಐಆರ್ ದಾಖಲಾಗಿದೆ.

ರಾಘವೇಂದ್ರ ಅವರು ತಮ್ಮ ಮನೆಯನ್ನು ಆಫ್ರಿಕಾದ ಇಬ್ಬರು ಮಹಿಳೆಯರಿಗೆ ಬಾಡಿಗೆಗೆ ನೀಡಿದ್ದರು. ಆದರೆ, ಕಾನೂನಿನ ಪ್ರಕಾರ ಸ್ಥಳೀಯ ಪೊಲೀಸ್ ಠಾಣೆ ಹಾಗೂ ವಿದೇಶಿಯರ ಪ್ರಾದೇಶಿಕ ನೋಂದಣಿ ಪ್ರಾಧಿಕಾರಕ್ಕೆ (ಎಫ್‌ಆರ್‌ಆರ್‌ಒ) ‘ಸಿ’ ಫಾರ್ಮ್ ಅನ್ವಯ ಮಾಹಿತಿ ನೀಡಿರಲಿಲ್ಲ. ಹಾಗಾಗಿ ಮನೆಯ ಮಾಲೀಕರ ವಿರುದ್ಧ ಪ್ರಕರಣವನ್ನು ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಗೃಹ ರಕ್ಷಕ ಸಿಬ್ಬಂದಿ ಮೇಲೆ ಹಲ್ಲೆ: ಮಹಿಳೆಯ ಬಂಧನ

ರಾಮಮೂರ್ತಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಬಿಎಂಟಿಸಿ ನಿಲ್ದಾಣದ ಬಳಿ ಕರ್ತವ್ಯದಲ್ಲಿದ್ದ ಮಹಿಳಾ ಗೃಹರಕ್ಷಕ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ.

ನಾರಾಯಣಪುರದ ಸುಭಾಷ್ ಬೀದಿ ನಿವಾಸಿ, ಧಾಮಿನಿ ಎಂಬಾಕೆಯನ್ನು ಬಂಧಿಸಲಾಗಿದೆ.

‘ಬಾಣಸವಾಡಿ ಸಂಚಾರ ಪೊಲೀಸ್ ಠಾಣೆಗೆ ನಿಯೋಜಿತವಾಗಿರುವ ಗೃಹರಕ್ಷಕ ಸಿಬ್ಬಂದಿ ಲಕ್ಷ್ಮೀನರಸಮ್ಮ ಅವರು ಮಧ್ಯಾಹ್ನ 3 ಗಂಟೆಗೆ ಕೆ.ಆರ್. ಪುರ ಬಸ್ ನಿಲ್ದಾಣದ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆಗ ಬಸ್‌ಗಾಗಿ ಕಾಯುತ್ತಿದ್ದ ಹಲವರು ರಸ್ತೆ ಮೇಲೆ ನಿಂತಿದ್ದರು. ವಾಹನ ಸಂಚಾರಕ್ಕೆ ತೊಂದರೆ ಉಂಟಾಗುವುದರಿಂದ ರಸ್ತೆಯ ಮೇಲೆ ನಿಲ್ಲದಂತೆ ಹೇಳಿದರು’ ಎಂದು ಪೊಲೀಸರು ತಿಳಿಸಿದರು.

‘ಈ ಸಂದರ್ಭದಲ್ಲಿ ಧಾಮಿನಿ ಗದ್ದಲ ಸೃಷ್ಟಿಸಿ, ಲಕ್ಷ್ಮೀನರಸಮ್ಮ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಜುಟ್ಟು ಹಿಡಿದು ಎಳೆದಾಡಿ, ಉಗುರಿನಿಂದ ಪರಚಿ ಗಾಯಗೊಳಿಸಿದ್ದರು. ಇದರಿಂದ ರಕ್ತಸ್ರಾವ ಉಂಟಾಗಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಬಾತ್ಮೀದಾರರ ಮಾಹಿತಿ ಆಧರಿಸಿ, ಆರೋಪಿ ಬಂಧಿಸಿ ಜೈಲಿಗೆ ಕಳುಹಿಸಿದರು. ಆರೋಪಿಯು ಮಾಲ್ದೀವ್ಸ್‌ನಲ್ಲಿ 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದು, ನಂತರ ಬೆಂಗಳೂರಿನ ಕಾಲೇಜೊಂದರಲ್ಲಿ ಬಿಬಿಎಂ ಪದವಿ ಪಡೆದಿದ್ದಾರೆ’ ಎಂದು ಹೇಳಿದರು.

ಉದ್ಯೋಗದ ಆಮಿಷ: ಏಳು ಮಂದಿ ವಿರುದ್ಧ ಪ್ರಕರಣ

ಹೈಕೋರ್ಟ್‌ನಲ್ಲಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಲಕ್ಷಾಂತರ ರೂಪಾಯಿ ವಂಚಿಸಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಏಳು ಆರೋಪಿಗಳ ವಿರುದ್ಧ ಗಂಗಮ್ಮನಗುಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದರ್ಶನ್ ಅಡ್ಯಂತಾಯ, ಅರ್ಜುನ್ ಅಡ್ಯಂತಾಯ, ಲವಿನಾ ಜಾನೆಟ್, ಜೈಸನ್ ಡಿಸೋಜ, ಮಹೇಂದ್ರ ಕಾಂಚನ್, ಪಿ.ಪಿ.ರಾಕೇಶ್, ನೆಲ್ಸನ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಉದ್ಯೋಗಕ್ಕೆ ಸಂಬಂಧಿಸಿದಂತೆ ಸುಮಿತ್ ಕುಮಾರ್, ಶಿವಕುಮಾರ್ ತಲಾ ₹8 ಲಕ್ಷ, ಮಹಿತಾ ₹11 ಲಕ್ಷ, ಹರ್ಷಾ ₹15 ಲಕ್ಷ, ಹರ್ಷಿತಾ ಶ್ರೀನಿವಾಸ್ ₹ 13 ಲಕ್ಷವನ್ನು ಆರೋಪಿಗಳಿಗೆ ನೀಡಿದ್ದರು. ಒಟ್ಟು ₹ 55 ಲಕ್ಷ ಪಡೆದು ಆರೋಪಿಗಳು ವಂಚಿಸಿದ್ದಾರೆ ಎಂದು ದೂರು ನೀಡಲಾಗಿದೆ. ಇದೇ ಪ್ರಕರಣದ ತನಿಖೆಯನ್ನು ಸಿಸಿಬಿಯೂ ನಡೆಸುತ್ತಿದೆ.



ಮಧುರ ವುಮೆನ್ಸ್ ಕ್ಲಬ್ ಹಾಗೂ ಗರುಡ ಫೌಂಡೇಷನ್ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪೌರಕಾರ್ಮಿಕರ ಸನ್ಮಾನ, ಸೀರೆ ವಾಕಥಾನ್ ಹಾಗೂ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳಿಗೆ ಶಾಸಕ ಉದಯ್ ಗರುಡಾಚಾರ್ ಚಾಲನೆ ನೀಡಿದರು. ಮೇದಿನಿ ಗರುಡಾಚಾರ್, ಕರ್ನಾಟಕ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ, ಮಂಜುಳಾ ಶಂಕರ್, ದಿವ್ಯಾ ರಂಗೇನಹಳ್ಳಿ ಉಪಸ್ಥಿತರಿದ್ದರು

ನೈಸ್ ರಸ್ತೆಯಲ್ಲಿ ಅಪಘಾತ: ಮೂವರಿಗೆ ಗಾಯ

ಬ್ಯಾರಿಕೇಡ್‌ಗೆ ಕಾರು ಡಿಕ್ಕಿ: ಇಬ್ಬರ ಸಾವು

ಬೆಂಗಳೂರು: ನೈಸ್ ರಸ್ತೆಯ ವರಹಾ ಸಂದ್ರ ಸೇತುವೆ ಬಳಿ ಶನಿವಾರ ರಾತ್ರಿ ಸಂಭವಿಸಿದ ಕಾರು ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ದೇವರಾಜ್ (32) ಮತ್ತು ಅಶೋಕ್ (23) ಮೃತರು.

ಲಗ್ಗೆರೆಯಲ್ಲಿ ವಾಸವಾಗಿದ್ದ ಇಬ್ಬರೂ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಸ್ನೇಹಿತರಾದ ಶ್ರೀನಿವಾಸ್, ಮದನ್, ಮಹಾಂತೇಶ್ ಅವರ ಜತೆ ಕಾರಿನಲ್ಲಿ ನೆಲಮಂಗಲಕ್ಕೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದರು.

ದೇವರಾಜ್ ಅತಿ ವೇಗವಾಗಿ ಕಾರು ಚಾಲನೆ ಮಾಡುತ್ತಿದ್ದರು. ನಿಯಂತ್ರಣ ತಪ್ಪಿ ರಸ್ತೆ ಬದಿಯ ಬ್ಯಾರಿಕೇಡ್‌ಗೆ ವಾಹನ ಡಿಕ್ಕಿ ಹೊಡೆದಿದೆ. ನಂತರ ಅವರ ನಿಯಂತ್ರಣಕ್ಕೆ ಸಿಗದೆ ಪಲ್ಟಿಯಾಗಿದೆ. ಘಟನೆಯಲ್ಲಿ ಗಾಯಗೊಂಡ ಐದು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ತೀವ್ರವಾಗಿ ಗಾಯಗೊಂಡಿದ್ದ ದೇವರಾಜ್ ಮತ್ತು ಅಶೋಕ್, ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಹೇಳಿದರು.

ಶ್ರೀನಿವಾಸ್, ಮದನ್ ಮತ್ತು ಮಹಾಂತೇಶ್ ಅವರು ಕಾರಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದರು. ಅಪಘಾತದ ತೀವ್ರತೆಗೆ ಕಾರು ಜಖಂಗೊಂಡಿದೆ ಎಂದು ಮಾಹಿತಿ ನೀಡಿದರು.

ಯಶಸ್ಸಿಗೆ ಕೃತಕ ಬುದ್ಧಿಮತ್ತೆ ಸಾಧನ: ರಾಜೀವ್ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳು ತಮ್ಮ ಮಹತ್ವಾಕಾಂಕ್ಷೆಗಳಿಗೆ ಕಾವಲಾಗಿ ನಿಂತು, ಛಲಬಿಡದೆ ಸತತ ಪ್ರಯತ್ನದಿಂದ ಯಶಸ್ಸು ಗಳಿಸಬೇಕು’ ಎಂದು ರಾಜ್ಯಸಭೆಯ ಮಾಜಿ ಸದಸ್ಯ ಪ್ರೊ. ಎಂ.ವಿ. ರಾಜೀವ್ ಗೌಡ ಹೇಳಿದರು.

ಬಾಲ್ಕ್ (ಭಾರತೀಯ ಅಕಾಡೆಮಿ ಆಫ್ ಲಿಂಗ್ವಿಸ್ಟಿಕ್ ಆ್ಯಂಡ್ ಕಮ್ಯುನಿಕೇಷನ್) ಸಂಸ್ಥೆ ವತಿಯಿಂದ ನಗರದಲ್ಲಿ ಭಾನುವಾರ ನಡೆದ ‘ಬಾಲ್ಕ್ ಸಂಕಲ್ಪ -2026’, ಸ್ವಾಮಿ ವಿವೇಕಾನಂದ ಜಯಂತಿ, ರಾಷ್ಟ್ರಕವಿ ಕುವೆಂಪು ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ಇಂದಿನ ಆಧುನಿಕ ಯುಗದಲ್ಲಿ ಕೃತಕ ಬುದ್ಧಿಮತ್ತೆಯನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವ ಮೂಲಕ, ಬಾಲ್ಕ್ ಸಂಸ್ಥೆಯು ಮುಂದಿನ ಹಂತಕ್ಕೆ ಬೆಳೆದು ರಾಜ್ಯ ಹಾಗೂ ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಲಿ’ ಎಂದು ಅವರು ಆಶಿಸಿದರು.

ಡಿಐಜಿ ಅಹ್ಮದ್ ಅಸಾದ್ ಮಾತನಾಡಿ, ‘ಬಾಲ್ಕ್ ಸಂಸ್ಥೆಯ ವಿದ್ಯಾರ್ಥಿಗಳು ಕೇವಲ ಗುರಿ ಹೊಂದುವುದಷ್ಟೇ ಅಲ್ಲ, ಬದುಕಿನಲ್ಲಿ ಶ್ರೇಷ್ಠ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಸ್ವಾಮಿ ವಿವೇಕಾನಂದರಂತೆ ಮೇರು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದರು.

ಬಾಲ್ಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎ.ಎನ್. ನಟರಾಜ್ ಗೌಡ ಅಧ್ಯಕ್ಷತೆ ವಹಿಸಿದ್ದರು.

ಬಾಲ್ಕ್ ನಿರ್ದೇಶಕಿ ಆಶಾರಾಣಿ, ಬಿಎಂಟಿಸಿ ಉಪಾಧ್ಯಕ್ಷ ನಿಕೇತ್ ರಾಜ್ ಮೌರ್ಯ, ರಮಾಕಾಂತ್, ಐಐಟಿ ಚೆನ್ನೈನ ಅಮರೇಶ್, ಬಾಲ್ಕ್ ಸಂಸ್ಥೆಯ ವಿವಿಧ ಶಾಖಾ ನಿರ್ದೇಶಕರು, ಸಿಬ್ಬಂದಿ ಹಾಜರಿದ್ದರು.

SBI ಭಾರತೀಯ ಸ್ಟೇಟ್ ಬ್ಯಾಂಕ್

ಆವರಣ ಮತ್ತು ಸ್ಥಿರಾಸ್ತಿ ವಿಭಾಗ, ಸ್ಥಳೀಯ ಪ್ರಧಾನ ಕಚೇರಿ, #65, ಸೇಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು–560001

ಭಾರತೀಯ ಸ್ಟೇಟ್ ಬ್ಯಾಂಕ್, ಸೈಟ್ ಸಂಖ್ಯೆ 527/1, 15ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು, ಕರ್ನಾಟಕದಲ್ಲಿ ಕಾರ್ಯನಿರ್ವಾಹಕ ಎನ್‌ಕ್ಲೇವ್ ನ ಪ್ರಸ್ತಾವಿಕ ನಿರ್ಮಾಣಕ್ಕಾಗಿ ಆರ್ಕಿಟೆಕ್ಚರಲ್ ಮತ್ತು ಪ್ರಾಜೆಕ್ಟ್ ನಿರ್ವಹಣೆ ಸಲಹಾ ಸಂಸ್ಥೆಯ ಪೂರ್ವಾರ್ಹತೆ ಮತ್ತು ಆಯ್ಕೆಗಾಗಿ ಎರಡು ಬಿಡ್ ವ್ಯವಸ್ಥೆ (ತಾಂತ್ರಿಕ ಬಿಡ್ ಮತ್ತು ಬೆಲೆ ಬಿಡ್) ಯಲ್ಲಿ ಇ-ಟೆಂಡರ್ ಅನ್ನು ಆಹ್ವಾನಿಸಿದೆ. ಅರ್ಜಿದಾರರು ಟೆಂಡರ್ ಮತ್ತು ಇತರೆ ದಾಖಲೆಗಳನ್ನು ಬ್ಯಾಂಕಿನ ವೆಬ್ ಸೈಟ್ www.sbi.co.in ನಲ್ಲಿ "Procurement News" ನ ಅಡಿಯಲ್ಲಿ SBI IN THE NEWS ನಿಂದ ಡೌನ್ ಲೋಡ್ ಮಾಡಬಹುದು. ಟೆಂಡರ್ ಅನ್ನು ಸಲ್ಲಿಸಲು ಕೊನೆಯ ದಿನಾಂಕ: 02.02.2026 ಮಧ್ಯಾಹ್ನ 3.00 ಗಂಟೆವರೆಗೆ. ಯಾವುದೇ ಕಾರಣವನ್ನು/ಗಳನ್ನು ನೀಡದೆ, ಯಾವುದೇ ಅಥವಾ ಎಲ್ಲಾ ಟೆಂಡರ್ ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ಮೇಲಿನ ಜಾಹೀರಾತಿನಲ್ಲಿ ನೀಡಲಾದ ಯಾವುದೇ ತಿದ್ದುಪಡಿ ಅಥವಾ ಅನುಬಂಧ ಯಾವುದಾದರು ಇದ್ದರೆ, ಅದನ್ನು ಬ್ಯಾಂಕಿನ ವೆಬ್ ಸೈಟ್ https://sbi.bank.in/ ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 12.01.2026
ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಪಿ & ಇ)

ಕುಂದು ಕೊರತೆ ಜನದನಿ




ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ಅಶೋಕ ನಗರಕ್ಕೆ ಸಂಪರ್ಕಿಸುವ ರಸ್ತೆ ಗುಂಡಿಮಯ’



ಶಾಂತಿನಗರ ವಿಧಾನಸಭಾ ಕ್ಷೇತ್ರದ ಅಶೋಕ ನಗರದ ವಾರ್ಡ್ ಸಂಖ್ಯೆ 25ಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಇಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳಲ್ಲಿ ತ್ಯಾಜ್ಯ ನೀರು ತುಂಬಿಕೊಂಡಿದೆ. ಈ ಗುಂಡಿಯಲ್ಲಿ ದ್ವಿಚಕ್ರ ವಾಹನ ಸವಾರರು ಬಿದ್ದು, ಕೈ ಕಾಲು ಮುರಿದುಕೊಂಡಿರುವ ಘಟನೆಗಳು ನಡೆದಿವೆ. ರಸ್ತೆ ಗುಂಡಿ ಮುಚ್ಚುವಂತೆ ಪಾಲಿಕೆ ಅಧಿಕಾರಿಗಳಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ. ಕೂಡಲೇ ರಸ್ತೆ ಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. **ಸುಭಾಷ್,** ಅಶೋಕನಗರ



‘ರಸ್ತೆ ಗುಂಡಿ ಮುಚ್ಚಿ’

ಮಹದೇವಪುರ ವಿಧಾನಸಭಾ ಕ್ಷೇತ್ರದ ಎಸ್.ಎಂ. ಕೃಷ್ಣ ವಾರ್ಡ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಆದರೆ, ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಅಪಘಾತಗಳು ಸಂಭವಿಸುತ್ತಿವೆ. ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವಂತೆ ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ.

ರಘು
ಎಸ್.ಎಂ. ಕೃಷ್ಣ ವಾರ್ಡ್

‘ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ’

ಕೆಂಪೇಗೌಡ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಎರಡನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೆ ಕಸ ತಂದು ಹಾಕಲಾಗಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಇಲ್ಲಿ ಹಾಕಿರುವ ತ್ಯಾಜ್ಯವನ್ನು ಪಾಲಿಕೆ ಸಿಬ್ಬಂದಿ ಕೂಡಲೇ ವಿಲೇವಾರಿ ಮಾಡಬೇಕು.

ಶಿವಪ್ರಸಾದ್ ಎಸ್., ಪಾದಚಾರಿ



ನಿಧನ ವಾರ್ತೆ

ಪಿ.ಎಸ್. ಗೌರಮ್ಮ



ಬೆಂಗಳೂರು: ರಾಜಾಜಿ ನಗರದ ನವರಂಗ್ ಚಿತ್ರಮಂದಿರದ ಭಾಗದಲ್ಲಿ ಪ್ರಜಾವಾಣಿ ಪತ್ರಿಕಾ ವಿತರಕರಾದ ಸುಬ್ರಹ್ಮಣ್ಯ ಶೆಟ್ಟಿ ಅವರ ಪತ್ನಿ ಪಿ.ಎಸ್. ಗೌರಮ್ಮ (62) ಅವರು ಭಾನುವಾರ ನಿಧನರಾದರು. ಅವರಿಗೆ ಪತಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಯುವ ದಿನಾಚರಣೆ, ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ: ಅಧ್ಯಕ್ಷತೆ: ಬಿ. ರಮೇಶ್, ಉಪಸ್ಥಿತಿ: ಎ. ನವೀನ್ ಜೋಸೆಫ್, ರಮೇಶ್ ಬಿ. ಕುಡೇನಟ್ಟಿ, ಎಂ.ವಿ. ವಿಜಯಲಕ್ಷ್ಮಿ, ಕೆ. ಶಿವಶಂಕರ, ಡಾ. ಅಬ್ದುಲ್ ಖಾದರ್, ಆಯೋಜನೆ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

ಸ್ವಾಮಿ ವಿವೇಕಾನಂದರ ಜಯಂತಿ: ಉದ್ಘಾಟನೆ: ಎಂ.ಎನ್. ನಟರಾಜ್, ಅಧ್ಯಕ್ಷತೆ: ಜಾನಪದ ಎಸ್. ಬಾಲಾಜಿ, ಪದಪತ್ರ ಪ್ರದಾನ: ಎ. ಅಮೃತ್‌ರಾಜ್, ಉಪಸ್ಥಿತಿ: ಕೆ. ನಾಗನಗೌಡ, ಆಯೋಜನೆ: ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ಬೆಂಗಳೂರು ನಗರ ಜಿಲ್ಲಾ ಘಟಕ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಮನೆಗೊಂದು ಗ್ರಂಥಾಲಯದ ಅನುಷ್ಠಾನಕ್ಕೆ ಚಾಲನೆ: ಬಿ.ಟಿ. ಲಲಿತಾ ನಾಯ್ಕ್, ಅತಿಥಿ: ಶಿವರಾಜ ಎಸ್. ತಂಗಡಗಿ, ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಶಿವರಾಜ ತಂಗಡಗಿ ಅವರ ನಿವಾಸ, ಸರ್ಕಾರಿ ವಸತಿಗೃಹ, ಜಯಮಹಲ್ ಮುಖ್ಯರಸ್ತೆ, ಚಾಮರ ವಜ್ರಗೇಟ್, ಜಯಮಹಲ್ ಮಧ್ಯಾಹ್ನ 12

ಹೂಡಿಕೆದಾರರ ಶಿಕ್ಷಣ ಮತ್ತು ಜಾಗೃತಿ ಉಪಕ್ರಮ: ಉಪನ್ಯಾಸ: ಸದಾನಂದ ಪ್ಯಾಟಿ, ಆಯೋಜನೆ: ಕೆನರಾ ರೊಬೆಕೊ ಮ್ಯೂಚುವಲ್ ಫಂಡ್, ಪ್ರಜಾವಾಣಿ, ಸ್ಥಳ: ದಿ ಪ್ರಿಂಟರ್ಸ್ ಮೈಸೂರು ಪ್ರೈ.ಲಿ., 75, ಎಂ.ಜಿ. ರಸ್ತೆ, ಹರಿದೇವಪುರ, ಶಾಂತಲಾ ನಗರ, ಶಿವಾಜಿ ನಗರ, ಸಂಜೆ 4

ಸರ್ಕಾರಿ ಶಾಲಾ ಮಕ್ಕಳಿಗೆ ಪಾಠಿಚೀಲ, ಪುಸ್ತಕ, ಸಾಂಸ್ಕೃತಿಕ ಕಾರ್ಯಕ್ರಮದ ಪ್ರಶಸ್ತಿ ಪತ್ರ ವಿತರಣೆ: ಉದ್ಘಾಟನೆ: ಜಾನ್ ದೇವರಾಜ್, ಅಧ್ಯಕ್ಷತೆ: ಶಾಂತಕುಮಾರಿ, ಅತಿಥಿಗಳು: ಕೆ. ರೇಖಾ, ಗುರುದತ್, ತಿಪ್ಪೇಸ್ವಾಮಿ, ಆರ್. ದೀಪಕ್, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಒಕ್ಕೂಟ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವಸಂತಪುರ, ಮಧ್ಯಾಹ್ನ 3

ಸಿಂ.ರಾ. ಹೊನ್ನಲಿಂಗಯ್ಯ ಅವರ ‘ಮೈಸೂರು ರಾಜ್ಯದಲ್ಲಿ ಬ್ರಿಟಿಷರ ಕಾನೂನು’ ಪುಸ್ತಕ ಬಿಡುಗಡೆ: ಚಂದ್ರಮೌಳಿ, ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಪುಸ್ತಕದ ಕುರಿತು: ಎಸ್. ಚಂದ್ರಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಮಾರ್ಗಶೀರ್ಷೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಸಿಕ್ಕಿಲ್ ಗುರುಚರಣ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30



ಸಿಕ್ಕಿಲ್ ಗುರುಚರಣ್

‘ಹೋಂ ರೂಲು’, ‘ಕನ್ನಡಕ್ಕೊಬ್ಬನೇ ಕೈಲಾಸಂ’ ನಾಟಕಗಳ ಪ್ರದರ್ಶನ: ಆಯೋಜನೆ: ಅಂತರಂಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15ರಿಂದ



ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್

ಮೊಬೈಲ್ ಆ್ಯಪ್ ಅಭಿವೃದ್ಧಿ: ಪಿಯಾನಲಿಟಿಕ್ಸ್ ಎಜುಟೆಕ್ (Pianalytix Edutech) ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ರಿಯಾಕ್ಟ್ ನೇಟಿವ್ ಮೊಬೈಲ್ ಆ್ಯಪ್ ಡೆವಲಪ್‌ಮೆಂಟ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಆ್ಯಂಡ್ರಾಯ್ಡ್, ಡೇಟಾ ಬೇಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಡಿಬಿಎಂಎಸ್), ಐಒಎಸ್, ಮೊಬೈಲ್ ಅಪ್ಲಿಕೇಷನ್ ಡೆವಲಪ್‌ಮೆಂಟ್ ಮತ್ತು ರಿಯಾಕ್ಟ್ ನೇಟಿವ್ ಕುರಿತು ಜ್ಞಾನ ಇರುವ ವಿದ್ಯಾರ್ಥಿಗಳು ಜ. 29ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹ 16,000. ಸಂಪರ್ಕ: https://shorturl.at/aT8Xx.

ಪ್ರಾಂಪ್ಟ್ ಡಿಸೈನರ್ ಟ್ರೇನಿ : ಐಮಾಪ್ರೊ ಇನ್ ಪ್ರತಿಷ್ಠಾನವು (Imapro.in Foundation) ಪ್ರಾಂಪ್ಟ್ ಡಿಸೈನರ್ ಟ್ರೇನಿ ಇಂಟರ್ನಿಗಳನ್ನು ಆಹ್ವಾನಿಸಿದೆ. ಇಂಗ್ಲಿಷ್‌ನಲ್ಲಿ ಬರೆಯುವ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜ. 29 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್ ₹ 2,000– ₹ 5,000. ಸಂಪರ್ಕ: https://shorturl.at/gFcKr.

ಬೆಂಗಳೂರು ಕೇಂದ್ರಿತ

ಸಾಫ್ಟ್‌ವೇರ್ ಟೆಸ್ಟಿಂಗ್: ಅಯೂ ಡಿವೈಸಸ್ ಸಂಸ್ಥೆಯು ಸಾಫ್ಟ್‌ವೇರ್ ಟೆಸ್ಟಿಂಗ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಡೇಟಾಬೇಸ್ ಟೆಸ್ಟಿಂಗ್, ಮ್ಯಾನ್ಯುಯಲ್ ಟೆಸ್ಟಿಂಗ್, ಸಾಫ್ಟ್‌ವೇರ್ ಟೆಸ್ಟಿಂಗ್ ಮತ್ತು ಯೂಸಬಿಲಿಟಿ ಟೆಸ್ಟಿಂಗ್ ಬಗ್ಗೆ ಅರಿತಿರುವವರು ಜ. 29ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹ 8,000– ₹ 12,000. ಸಂಪರ್ಕ: https://shorturl.at/IJMWA.

ಡಿಜಿಟಲ್ ಮಾರ್ಕೆಟಿಂಗ್: ಜೆನ್‌ಎಐ ಪೀಪಲ್ (GenAI People) ಸಂಸ್ಥೆಯು ಡಿಜಿಟಲ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಇಂಗ್ಲಿಷ್‌ನಲ್ಲಿ ಮಾತನಾಡುವ ಮತ್ತು ಬರೆಯುವ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ಜನವರಿ 29ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹ 20,000– ₹ 25,000. ಸಂಪರ್ಕ: https://shorturl.at/TLWIm. ❖

ಎಸ್‌ಎಸ್‌ಎಲ್‌ಸಿ ಭಯ ಬಿಡಿ, ಲಕ್ಷ್ಯ ಕೊಡಿ

• ಅರ್ಚನಾ ಆರ್.



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಬುದ್ಧಿವಂತರು, ಪರಿಶ್ರಮಿಗಳಾಗಿದ್ದರೂ ಎಲ್ಲೋ ಒಂದು ಕಡೆ ಅವರನ್ನು ಪರೀಕ್ಷೆಯ ಭಯ ಕಾಡುತ್ತಿರುತ್ತದೆ. ಎಲ್ಲಿ ಫೇಲಾಗುವೆನೊ, ಕಡಿಮೆ ಅಂಕ ಗಳಿಸುವೆನೊ ಎಂಬ ಆತಂಕ ಸುಳಿಯುತ್ತಿರುತ್ತದೆ. ಅದರಲ್ಲೂ ಇಂದಿನ ವಿದ್ಯಾರ್ಥಿಗಳಿಗೆ ಶಾಲೆಯ, ಪೋಷಕರ ಒತ್ತಡದಿಂದ ಆತಂಕ ಮತ್ತಷ್ಟು ಹೆಚ್ಚಾಗಿ ಅವರ ಮನೋಬಲ ಕುಸಿಯಲೂಬಹುದು. ಆದರೆ ವಿದ್ಯಾರ್ಥಿಗಳೇ, ಆತಂಕ ಬಿಡಿ. ಸರಿಯಾಗಿ ಓದುವುದು ಹಾಗೂ ಪರೀಕ್ಷೆಗೆ ತಯಾರಾಗುವುದು ಒಂದು ಕಲೆ.

ಪರೀಕ್ಷೆಯಲ್ಲಿ ಜಯಶೀಲರಾಗಬೇಕೆಂದು ಬಯಸಿರುವವರೆಲ್ಲರೂ ಅತಿ ಬುದ್ಧಿವಂತರಾಗಲಿ, ಸೃಜನಶೀಲರಾಗಲಿ ಆಗಿರಲೇಬೇಕೆಂದೇನೂ ಇಲ್ಲ. ಆದರೆ, ಜ್ಞಾನಾರ್ಜನೆಗಾಗಿ ಅಧ್ಯಯನ ಮಾಡುವುದು ಎಷ್ಟು ಮುಖ್ಯವೋ ಪರೀಕ್ಷೆಯಲ್ಲಿ ಯಶಸ್ವಿಯಾಗುವುದಕ್ಕಾಗಿ ಅಧ್ಯಯನ ಮಾಡುವುದೂ ಅಷ್ಟೇ ಮುಖ್ಯ ಎಂಬುದು ನೆನಪಿರಲಿ. ಯಶಸ್ಸಿನ ರಹಸ್ಯವಿರುವುದು ಏಕಾಗ್ರತೆಯಲ್ಲಿ. ಓದಿನಲ್ಲಿ ತನ್ಮಯತೆ ಮತ್ತು ಸತತ ಅಭ್ಯಾಸದಿಂದ ಏಕಾಗ್ರತೆಯನ್ನು ಪಡೆದುಕೊಳ್ಳಬಹುದು. ಇದರಿಂದ ಆತ್ಮವಿಶ್ವಾಸ ಹೆಚ್ಚಿ ಪರೀಕ್ಷೆಯ ಭಯ ನಿವಾರಣೆಯಾಗುತ್ತದೆ.

ಪರೀಕ್ಷೆಯ ದಿನದ ವಿದ್ಯಾರ್ಥಿಗಳ ಮನಃಸ್ಥಿತಿ ಅವರ ಬರವಣಿಗೆ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಿ, ಕೆಲವು ಸೂಚನೆಗಳನ್ನು ಪಾಲಿಸುವುದು ಸೂಕ್ತ. ಅವುಗಳೆಂದರೆ: ನಿಮ್ಮ ಪಾಠಗಳನ್ನು ಸಂಪೂರ್ಣವಾಗಿ ಓದಿಕೊಳ್ಳಿ. ಪಾಠದಲ್ಲಿನ ಪ್ರತಿ ವಾಕ್ಯವೂ ಬಹುಮುಖ್ಯ. ವಾಕ್ಯಗಳೇ ಪ್ರಶ್ನೆಗಳಾಗಿ ಬರಬಹುದು. ತುಂಬಾ ಕಷ್ಟವಾದುದನ್ನು ಪರೀಕ್ಷೆಯ ಸಮಯದಲ್ಲಿ ಓದಲು ಪ್ರಯತ್ನಿಸಬೇಡಿ. ಮನನ ಮಾಡಬೇಕಾದ ಪದ್ಯಗಳನ್ನು ಆದಷ್ಟು ಮುಂಚಿತವಾಗಿ ಮಾಡಿಕೊಳ್ಳಿ. ನಕ್ಷೆಗಳು ಅಥವಾ ಚಿತ್ರದ ಭಾಗಗಳನ್ನು ಪ್ರಶ್ನೆಗಳಾಗಿ ಪರಿವರ್ತಿಸಿ ಕೇಳಬಹುದು. ಆದ್ದರಿಂದ ಎಲ್ಲ ವಿವರಗಳನ್ನೂ ಮನನ ಮಾಡಿಕೊಳ್ಳಿ. ಈಗಾಗಲೇ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಬ್ಲೂಪ್ರಿಂಟ್‌ಗಳು ಮತ್ತು ಮಾದರಿ ಪ್ರಶ್ನೆಗಳನ್ನು ಪ್ರಕಟ ಮಾಡಿದ್ದು, ಅವುಗಳನ್ನು ಸತತವಾಗಿ ಅಭ್ಯಾಸಕ್ಕೆ ಬಳಸಿಕೊಳ್ಳಿ.

ಗಣಿತ

- ಹೇಳಿಕೆ ರೂಪದ ಪ್ರಶ್ನೆಗಳಿರುತ್ತವೆ. ಪ್ರಶ್ನೆಯನ್ನು ಎಚ್ಚರದಿಂದ ಓದಿ, ಯಾವ ಉತ್ತರ ಕಂಡುಹಿಡಿಯಬೇಕು ಎನ್ನುವುದನ್ನು ಅರ್ಥಮಾಡಿಕೊಳ್ಳಿ.
- ಸರಿಯಾದ ಸೂತ್ರ ಯಾವುದು ಎಂದು ನಿರ್ಧರಿಸಿ.
- ಗುಣಾಕಾರ ಮತ್ತಿತರ ಮೂಲ ಕ್ರಿಯೆಗಳನ್ನು ಮಾಡುವಾಗ ಎಚ್ಚರ ವಹಿಸಿ (ಸಾಮಾನ್ಯವಾಗಿ ನೀವು ತಪ್ಪುವುದು ಇಲ್ಲೇ. ಅದನ್ನು ಸಿಲ್ಲಿ ಮಿಸ್ಟೇಕ್ ಎಂದು ನೀವು ಅಂದುಕೊಂಡರೂ ಲೆಕ್ಕದ ಉತ್ತರ ತಪ್ಪಾಗುತ್ತದೆ ಎನ್ನುವುದು ಗಮನದಲ್ಲಿ ಇರಲಿ.
- ಲೆಕ್ಕಗಳನ್ನು ಮಾಡುವಾಗ ವರ್ಕಿಂಗ್ ಕಾಲಂ ಅನ್ನು ಸರಿಯಾಗಿ ಬಳಸಿಕೊಳ್ಳಿ.
- ನೀವು ಎಷ್ಟು ಉತ್ತರಿಸುತ್ತೀರೋ ಅದಕ್ಕೆ ತಕ್ಕಂತೆ ಅಂಕಗಳು ದೊರೆಯುತ್ತವೆ. ಹಾಗಾಗಿ, ಯಾವುದೋ ಲೆಕ್ಕ ಬರಲಿಲ್ಲ ಎಂದು ಬಿಟ್ಟುಬಿಡಬೇಡಿ. ಏನು ತಿಳಿದಿರುತ್ತದೋ ಅದನ್ನು ಬರೆಯಿರಿ.

ವಿಜ್ಞಾನ

- ಇಲ್ಲಿ ನಿರ್ದಿಷ್ಟ ಪ್ರಶ್ನೆಗಳಿರುತ್ತವೆ. ಸರಿಯಾದ ನೇರ ಉತ್ತರವನ್ನು ಬರೆಯುವಲ್ಲಿ ನೀವು ಸಮರ್ಥರಾಗಬೇಕು.
- ಎರಡು ಉಪಯೋಗಗಳು, ದೋಷಗಳು, ಪ್ರಯೋಜನಗಳು ಅಥವಾ ಕಾರಣಗಳನ್ನು ಬರೆಯಿರಿ ಎಂದು ಪ್ರಶ್ನೆಯಿರುವಾಗ, ಮುಖ್ಯವಾದ ಎರಡನ್ನು ಮಾತ್ರ ಬರೆಯಿರಿ. ಹೆಚ್ಚು ಬರೆಯುವ ಅವಶ್ಯಕತೆಯಿಲ್ಲ.

ಸಮಾಜವಿಜ್ಞಾನ

- ಪ್ರಮುಖ ಅಂಶಗಳನ್ನು ಎದ್ದು ಕಾಣುವಂತೆ ಬರೆಯಿರಿ. ಒಂದೇ ವಿಷಯವನ್ನು ಅನವಶ್ಯಕವಾಗಿ ಪುನಃ ಪುನಃ ವಿವರಿಸುವ ಗೋಜಿಗೆ ಹೋಗಬೇಡಿ.
- ನಕ್ಷೆಗಳನ್ನು ಬರೆದು, ಅಲ್ಲಿ ಸ್ಥಳಗಳನ್ನು ಗುರುತಿಸುವ ಅಭ್ಯಾಸ ಮಾಡಿಕೊಳ್ಳಿ.

ಭಾಷಾ ವಿಷಯ

- ಸುಂದರ ಕೈಬರಹದ ಕಡೆ ಗಮನಕೊಡಿ. ವ್ಯಾಕರಣ, ಕಾಗುಣಿತ, ವಾಕ್ಯ ರಚನೆ ಮತ್ತು ವಾಕ್ಯಾರ್ಥಕ ಚಿಹ್ನೆಗಳ ಕುರಿತು ಎಚ್ಚರ ವಹಿಸಿ.
- ನಿಮ್ಮ ಉತ್ತರಗಳು ಚಿಕ್ಕದಾಗಿರಲಿ, ಸ್ಪಷ್ಟವಾಗಿರಲಿ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಎದುರಿಸುವುದು, ಜಯಶೀಲರಾಗುವುದು ಒಂದು ದೊಡ್ಡ ಸಾಹಸವೇನಲ್ಲ. ತಾಳ್ಮೆಯಿಂದ, ಸರಿಯಾಗಿ ವ್ಯವಸ್ಥೆ ಮಾಡಿಕೊಂಡು ತಯಾರಾದಲ್ಲಿ ಖಂಡಿತ ಜಯಶೀಲರಾಗುವಿರಿ. ❖

ಇದರ ಬಗ್ಗೆ ಗಮನವಿರಲಿ

- ಬಳಸುವ ಪೆನ್ನು, ಪೆನ್ಸಿಲ್ಲು, ರಬ್ಬರ್, ಉತ್ತಮ ಮಟ್ಟದ್ದಾಗಿರಲಿ. ಒಂದೇ ರೀತಿಯ ಪೆನ್ನು, ಪೆನ್ಸಿಲ್‌ಗಳನ್ನು ಒಂದಕ್ಕಿಂತ ಹೆಚ್ಚು ಇಟ್ಟುಕೊಳ್ಳಿ. ಈ ಎಲ್ಲವನ್ನು ಸರಿಯಾದ ಒಂದು ಪೆಟ್ಟಿಗೆಯಲ್ಲಿ ಇಟ್ಟುಕೊಳ್ಳಿ.
- ನಿಮಗಿಂತ ಧೈರ್ಯ ಕಳೆದುಕೊಂಡ ವಿದ್ಯಾರ್ಥಿಗಳಿಂದ ದೂರವಿರಿ.
- ನಿಮ್ಮಲ್ಲಿ ನೀವೇ ಧೈರ್ಯ ತುಂಬಿಕೊಳ್ಳಿ. ನನ್ನಿಂದ 'ಇದು ಸಾಧ್ಯ' ಎಂದು ಮನಗಾಣಿ.
- ಪರೀಕ್ಷಾ ಕೊಠಡಿಗೆ ತೆರಳುವ ಮುನ್ನ ಹಾಗೂ ತೆರಳಿದ ನಂತರ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದಿರಿ.
- ನಿಮ್ಮ ಕ್ರಮಸಂಖ್ಯೆಯನ್ನು (ರಿಜಿಸ್ಟರ್ ನಂಬರ್) ಸರಿಯಾಗಿ, ಸರಿಯಾದ ಸ್ಥಳದಲ್ಲಿ ಬರೆಯಿರಿ.
- ಪ್ರಶ್ನೆಪತ್ರಿಕೆ ಕೈಗೆ ಸಿಕ್ಕೊಡನೇ ಉತ್ತರಿಸಬೇಡಿ. ಎಲ್ಲ ಪ್ರಶ್ನೆಗಳನ್ನೂ ಒಮ್ಮೆ ಸಂಪೂರ್ಣವಾಗಿ ಓದಿ ನಂತರ ಉತ್ತರಿಸಿ.
- ಅಕ್ಷರಗಳು, ಚಿತ್ರಗಳನ್ನು ಸುಂದರವಾಗಿರುವಂತೆ, ಚಿತ್ತು ಮಾಡದೇ ಅಚ್ಚುಕಟ್ಟಾಗಿ ಬರೆಯಿರಿ.
- ಸಾಲುಗಳು ನೇರವಾಗಿ, ಸಮಾನಾಂತರವಾಗಿ ಇರುವಂತೆ ಬರೆಯಿರಿ.
- ಯಾವ ಪ್ರಶ್ನೆಗೆ ನಿಖರವಾದ ಉತ್ತರ ಗೊತ್ತಿರುತ್ತದೆಯೋ ಅದೇ ಪ್ರಶ್ನೆಗೆ ಮೊದಲು ಉತ್ತರಿಸಿ. ನಿಖರವಾದ ಉತ್ತರ ಗೊತ್ತಿಲ್ಲದ ಪ್ರಶ್ನೆಗೆ ಕೊನೆಯಲ್ಲಿ ಅಥವಾ ಯಾವಾಗ ನಿಮಗೆ ಉತ್ತರ ನೆನಪಾಗುವುದೋ ಆಗ ಉತ್ತರಿಸಿ.
- ಅಕ್ಕಪಕ್ಕದವರ ಉತ್ತರಗಳನ್ನು ನೋಡಬೇಡಿ.
- ಯಾವ ಪ್ರಶ್ನೆಯನ್ನೂ ಉತ್ತರಿಸದೇ ಬಿಟ್ಟು ಬರಬೇಡಿ. ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿ.
- ನೀವು ಬರೆದಿರುವ ಉತ್ತರಗಳನ್ನು ಪುನಃ ಪರಿಶೀಲಿಸಿ.
- ಉತ್ತರ ಪತ್ರಿಕೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬಲವಾಗಿ ಕಟ್ಟಿ.
- ಒಂದು ವಿಷಯದ ಪರೀಕ್ಷೆ ಮುಗಿದ ಮೇಲೆ ಅದರ ಚಿಂತೆಯನ್ನು ಬಿಟ್ಟು ಮುಂದಿನ ವಿಷಯವನ್ನು ಅಭ್ಯಾಸ ಮಾಡಿ.

ಪೋಷಕರೇ ನಿಮಗೆ ತಿಳಿದಿರಲಿ

- ಪ್ರತಿ ಮಗುವೂ ವಿಶಿಷ್ಟ. ಇತರ ಮಕ್ಕಳೊಂದಿಗೆ ನಿಮ್ಮ ಮಕ್ಕಳನ್ನು ಹೋಲಿಸಬೇಡಿ.
- ನಿಮ್ಮ ಮಗುವಿನ ಭೌತಿಕ ಅಗತ್ಯಗಳು, ಮಾನಸಿಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಯತ್ನಿಸಿ.
- ಮಕ್ಕಳಿಗೆ ಸ್ವಲ್ಪವೂ ಇಷ್ಟವಿಲ್ಲದಾಗ ಅವರನ್ನು ಓದು ಎಂದು ಬಲವಂತ ಮಾಡಬೇಡಿ.
- ದಿನದ ನಿಶ್ಚಿತ ಸಮಯದಲ್ಲಿ ಓದು, ಬರಹ ಮಾಡಲೇಬೇಕಾದುದು ಅತ್ಯಂತ ಅವಶ್ಯ ಎನ್ನುವುದನ್ನು ಮನದಟ್ಟು ಮಾಡಿ.
- ಯಾವಾಗಲೂ ಮಕ್ಕಳೊಂದಿಗೆ ಸಕಾರಾತ್ಮಕವಾಗಿ ಮಾತನಾಡಿ. ನಕಾರಾತ್ಮಕವಾಗಿ ಆಡುವ ಮಾತು ದುಷ್ಪರಿಣಾಮ ಬೀರಬಹುದು.
- ಮಕ್ಕಳ ಓದಿನ ವಿಷಯದಲ್ಲಿ ಸಮಸ್ಯೆಗಳು ಬಂದಾಗ ಮಕ್ಕಳನ್ನೂ ಜೊತೆಗಿರಿಸಿಕೊಂಡು ಶಿಕ್ಷಕರನ್ನು ವೈಯಕ್ತಿಕವಾಗಿ ಭೇಟಿ ಮಾಡಿ.
- ಮಕ್ಕಳಿಗೆ 'ನಿಮ್ಮಲ್ಲಿ ಕಲಿಯುವ ಸಾಮರ್ಥ್ಯ ಇದೆ' ಎಂಬ ಆತ್ಮವಿಶ್ವಾಸ ತುಂಬಿ.
- ಪರೀಕ್ಷೆಯ ಸಮಯದಲ್ಲಿ ಹೆಚ್ಚು ಕಾಲ ಮಕ್ಕಳೊಂದಿಗಿರಿ.
- ತಂದೆ–ತಾಯಿ ಇಬ್ಬರೂ ಒಂದೇ ರೀತಿ ಮಾರ್ಗದರ್ಶನ ಕೊಡಿ.
- ಯಾವುದಾದರೂ ವಿಷಯದಲ್ಲಿ ನಿಮ್ಮ ಮಗ/ ಮಗಳು ಸರಿಯಾಗಿ ಉತ್ತರಿಸದಿದ್ದಲ್ಲಿ, ಮುಂದಿನ ಪರೀಕ್ಷೆಯಲ್ಲಿ ಸರಿಯಾಗಿ ಉತ್ತರಿಸುವುದಕ್ಕೆ ಉತ್ತೇಜಿಸಿ.

ವಿದ್ಯಾರ್ಥಿ ವೇತನ ಕೈಪಿಡಿ

ಲೋನ್ ಸ್ಕಾಲರ್‌ಷಿಪ್

ಜೆ.ಎನ್. ಟಾಟಾ ಎಂಡೌಮೆಂಟ್ ಸಂಸ್ಥೆ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಬಯಸುವ ಭಾರತೀಯ ವಿದ್ಯಾರ್ಥಿಗಳಿಗೆ ಲೋನ್ ಸ್ಕಾಲರ್‌ಷಿಪ್ ನೀಡಲಿದೆ.

ಅರ್ಹತೆ: ಭಾರತದಲ್ಲಿ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆಯಲ್ಲಿ ಪದವಿಯನ್ನು ಪೂರ್ಣಗೊಳಿಸಿದವರು ಅಥವಾ ಪದವಿ ಕೋರ್ಸ್‌ನ ಅಂತಿಮ ವರ್ಷದಲ್ಲಿ ಇರುವವರು ಅರ್ಜಿ ಸಲ್ಲಿಸಬಹುದು. ವಿದೇಶದಲ್ಲಿ ಸ್ನಾತಕೋತ್ತರ ಪದವಿ, ಡಾಕ್ಟರೇಟ್ ಮಾಡಲು ಇಚ್ಛಿಸುವವರು ಅರ್ಜಿ ಸಲ್ಲಿಕೆಗೆ ಅರ್ಹರು.

ಈಗಾಗಲೇ ವಿದೇಶದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವವರು ಸಹ ಮೊದಲ ವರ್ಷದ ಕೊನೆಯಲ್ಲಿ ಅಥವಾ ಎರಡನೇ ವರ್ಷದ ಆರಂಭದಲ್ಲಿ ಅರ್ಜಿ ಹಾಕಬಹುದು. ಅರ್ಜಿದಾರರು ಹಿಂದಿನ ಪದವಿ ಅಥವಾ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. 30 ಜೂನ್ 2026ಕ್ಕೆ ಅನ್ವಯವಾಗುವಂತೆ 45 ವರ್ಷದ ವಯೋಮಿತಿ ಮೀರಿರಬಾರದು.

ಆರ್ಥಿಕ ನೆರವು: ₹ 20 ಲಕ್ಷದವರೆಗೆ

ಅರ್ಜಿ ಸಲ್ಲಿಸಲು ಕೊನೇ ದಿನ: 15-03-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.

ಮಾಹಿತಿಗೆ: Short Url: www.b4s.in/praja/JNT10

ಯಂಗ್ ಇಂಡಿಯಾ ಫೆಲೋಷಿಪ್

ಅಶೋಕ ವಿಶ್ವವಿದ್ಯಾಲಯ 2026–27ನೇ ಸಾಲಿನ ಯಂಗ್ ಇಂಡಿಯಾ ಫೆಲೋಷಿಪ್ (ವೈಐಎಫ್) ನೀಡುತ್ತಿದೆ. ಒಂದು ವರ್ಷದ ಅವಧಿಯ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್ ಇದಾಗಿದ್ದು, ಸಾಮಾಜಿಕ ಜಾಗೃತಿ ಹೊಂದಿರುವ ಯುವ ನಾಯಕತ್ವ ವನ್ನು ಬೆಳೆಸುವ ಉದ್ದೇಶವನ್ನು ಹೊಂದಿದೆ.

ಅರ್ಹತೆ: ಯಾವುದೇ ಪದವಿ ಅಥವಾ ತತ್ಸಮಾನ ಶಿಕ್ಷಣ ಹೊಂದಿರುವವರು ಅರ್ಜಿ ಸಲ್ಲಿಸಬಹುದು. 2026ರ ಬೇಸಿಗೆಯ ವೇಳೆಗೆ ತಮ್ಮ ಪದವಿಯನ್ನು ಪೂರ್ಣಗೊಳಿಸಲಿರುವ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳೂ ಅರ್ಜಿ ಸಲ್ಲಿಸಲು ಅರ್ಹರು. ಸಂಬಂಧಿತ ಕೆಲಸದ ಅನುಭವ ಇದ್ದರೆ ಇನ್ನೂ ಉತ್ತಮ.

ಆರ್ಥಿಕ ಸೌಲಭ್ಯ: ಭಾಗಶಃ ಅಥವಾ ಸಂಪೂರ್ಣ ಫೆಲೋಷಿಪ್ ಸೌಲಭ್ಯ.

ಅರ್ಜಿ ಸಲ್ಲಿಸಲು ಕೊನೇ ದಿನ: 23-03-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: Short Url: www.b4s.in/praja/TYIF1 ❖

ಮುಂದೆ ಏನು ಓದಲಿ?



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• ನಾನು ಪಿಯು ಎರಡನೇ ವರ್ಷದಲ್ಲಿದ್ದೇನೆ. ನನ್ನ ತಂದೆಗೆ ನಾನು ಎಂಜಿನಿಯರಿಂಗ್ ಓದಬೇಕು ಅಂತ ಆಸೆ. ನನ್ನ ಅಮ್ಮ 'ನೀನು ಮೊದಲು ಡಾಕ್ಟರಾಗಬೇಕು' ಅನ್ನುತ್ತಿದ್ದಾರೆ. ಜೀವನದಲ್ಲಿ ಹಣ ಗಳಿಕೆ ಮುಖ್ಯ ಎನ್ನುವುದು ಅವರ ಒತ್ತಾಸೆ. ನನಗೆ ಅವೆರಡೂ ಇಷ್ಟ ಇಲ್ಲ. ಶಿಕ್ಷಕ ಅಥವಾ ವಕೀಲ ಆಗಬೇಕು ಎನ್ನುವುದು ನನ್ನಾಸೆ. ಇದರಿಂದ ಒತ್ತಡವಾಗುತ್ತಿದೆ, ಗೊಂದಲ ಕಾಡುತ್ತಿದೆ. ಏನು ಮಾಡಲಿ ಸರ್?

ಕಿರಣ್ ರಾಜ್, ಉಡುಪಿ

ನಿನ್ನ ವಯಸ್ಸಿನಲ್ಲಿ, ಮುಂದೆ ಹೀಗೆಯೇ ಬದುಕಬೇಕು ಎನ್ನುವುದರ ಬಗ್ಗೆ, ಇಂಥದ್ದನ್ನೇ ಕಲಿಯಬೇಕು ಎನ್ನುವುದರ ಬಗ್ಗೆ ತೀರಾ ಸ್ಪಷ್ಟತೆ ಇರುವುದು ಕಷ್ಟ. ಅದಕ್ಕಾಗಿಯೇ ಹಿರಿಯರ ಮಾರ್ಗದರ್ಶನದ ಅಗತ್ಯ ಇರುತ್ತದೆ. ಪಾಲಕರು ಹಾಗೂ ಶಿಕ್ಷಕರ ಪಾತ್ರ ಇಂಥ ಸಂದರ್ಭಗಳಲ್ಲಿ ಮಹತ್ವದ್ದಾಗಿರುತ್ತದೆ. ನೀನು ನಿನ್ನ ಮನಸ್ಸಿನ ತೊಳಲಾಟ, ನಿನ್ನ ಆಸೆ, ಆಲೋಚನೆಗಳ ಬಗ್ಗೆ ಮೊದಲು ನಿನ್ನ ಪಾಲಕರ ಹತ್ತಿರ, ನಂತರ ಶಿಕ್ಷಕರ ಹತ್ತಿರ ಮಾತನಾಡುವುದು ಒಳ್ಳೆಯದು. ಪಾಲಕರು ನಿನ್ನ ಮಾತನ್ನು ಕೇಳುವುದಿಲ್ಲ ಎಂದಾದಾಗ, ಮೆಚ್ಚಿನ ಶಿಕ್ಷಕರ ನೆರವನ್ನು ಪಡೆಯುವುದು ಉತ್ತಮ.

ನಿನ್ನ ಮನಸ್ಸಿನ ಮಾತುಗಳಿಗೆ ಕಿವಿಗೊಡು. ಶ್ರದ್ಧೆಯಿಂದ ನಿನ್ನ ಕೆಲಸವನ್ನು ಮಾಡು. ಜೀವನದಲ್ಲಿ ವಕೀಲನಾಗಲಿ, ಶಿಕ್ಷಕನಾಗಲಿ ಆಗುವುದು ಕಡಿಮೆಯದ್ದೇನಲ್ಲ. ಡಾಕ್ಟರಾದರೇ ಜಾಣ, ಲಾಯರಾದರೆ ಅಷ್ಟೇನೂ ಜಾಣನಲ್ಲ ಎನ್ನುವಂತಿಲ್ಲ. ಶಿಕ್ಷಕನಾದರೆ ಬಹಳ ಆಸ್ಥೆಯಿಂದ ಸಾವಿರಾರು ವಿದ್ಯಾರ್ಥಿಗಳ ಜೀವನವನ್ನು ನಿರ್ದೇಶಿಸಬಹುದು.

ಇನ್ನು, ಡಾಕ್ಟರಾದರೆ ಅಥವಾ ಎಂಜಿನಿಯರ್ ಆದರೆ ಸಾಕಷ್ಟು ಹಣ ಗಳಿಸಬಹುದು ಎನ್ನುವುದೂ ಸಂಪೂರ್ಣವಾದ ಸತ್ಯವಲ್ಲ. ಜೀವನದಲ್ಲಿ ಹಣವನ್ನು ಗಳಿಸುವ ಏಕಮಾತ್ರ ಉದ್ದೇಶದಿಂದ ಹೋದವರಲ್ಲಿ ಯಶಸ್ವಿಯಾದವರು ಕಡಿಮೆ. ಅದೇ, ಶ್ರದ್ಧೆಯಿಂದ ತನ್ನ ಪಾಡಿಗೆ ತನ್ನ ಕೆಲಸವನ್ನು ಮಾಡುತ್ತ ಇದ್ದವರು ಸೋತಿದ್ದನ್ನೂ ಕೇಳಲಿಲ್ಲ. ಜೀವನದಲ್ಲಿ ಶಕ್ತಿವಂತನೂ ಕರುಣಾಳುವೂ ಆಗಬೇಕು. ಅದು ಮುಖ್ಯ.

ಹಾಗಾಗಿ, ಈಗ ನೀನು ಬೇರೆ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ. ಪಿಯುವನ್ನು ಮನಸ್ಸಿಟ್ಟು ಓದು. ಪರೀಕ್ಷೆಯಲ್ಲಿ ಒಳ್ಳೆಯ ಫಲಿತಾಂಶ ಬರುತ್ತದೆ. ಆಮೇಲೆ ಮುಂದೆ ಏನನ್ನು ಓದಬೇಕು ಎನ್ನುವ ಬಗ್ಗೆ ಸಮಾಧಾನವಾಗಿ ಆಲೋಚನೆ ಮಾಡಲು ಸಮಯವಿದೆ. ಯಾರ ಆಸೆ ಈಡೇರುತ್ತದೆ ಎನ್ನುವುದನ್ನು ಆಗ ನೋಡಿದರಾಯಿತು, ಅಲ್ಲವೇ?

ಎಸ್‌ಎಸ್‌ಎಲ್‌ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

II ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ

1)ಮಹಲ್ವಾರಿ ಪದ್ಧತಿಯನ್ನು ಯಾರು ಜಾರಿಗೆ ತಂದರು?
ಉತ್ತರ:– ಆರ್ ಎಂ ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

2) ಹಿಟ್ಲರನು ಬೂದು ಅಂಗಿ ದಳವನ್ನು ಏಕೆ ಸಂಘಟಿಸಿದನು?
ಉತ್ತರ:– ಗಲಭೆ ಮಾಡಿ ಜನರನ್ನು ಹೆದರಿಸಲು ಬೂದು ಅಂಗಿದಳವನ್ನು ಸಂಘಟಿಸಿದನು.

3) ಯಾವ ರಾಜ್ಯದಲ್ಲಿ ಅತಿ ಕಡಿಮೆ ಅರಣ್ಯ ಕ್ಷೇತ್ರವಿದೆ?
ಉತ್ತರ:– ಹರಿಯಾಣ

4) ಐರೋಪ್ಯ ಒಕ್ಕೂಟದ ಕೇಂದ್ರ ಕಚೇರಿ ಎಲ್ಲಿದೆ?
ಉತ್ತರ:– ಬ್ರೂಸೇಲ್ಸ್

5) ಭಾರತದ ಸಂವಿಧಾನದ ಯಾವ ವಿಧಿಯು ಅಸ್ಪೃಶ್ಯತೆಯನ್ನು ನಿಷೇಧಿಸುತ್ತದೆ?
ಉತ್ತರ:– 17

6) ಭೂ ಕ್ಷೇತ್ರದ ದೃಷ್ಟಿಯಿಂದ ಇದು ಪ್ರಪಂಚದ ಎಷ್ಟನೇ ದೊಡ್ಡ ರಾಷ್ಟ್ರವಾಗಿದೆ?
ಉತ್ತರ:– ಏಳನೇ ದೊಡ್ಡ ರಾಷ್ಟ್ರವಾಗಿದೆ.

7) ಕೈಗಾ ವಿರೋಧಿ ಚಳವಳಿಯನ್ನು ಏಕೆ ಪ್ರಾರಂಭಿಸಲಾಯಿತು?
ಉತ್ತರ:– ಅಣುವಿಕಿರಣದಿಂದ ಆಗುವ ಪರಿಸರ ಮಾಲಿನ್ಯ ಭೀತಿ.

8) ದಸ್ತಕ್ ಅನ್ನು ಯಾರು ದುರುಪಯೋಗ ಪಡಿಸಿಕೊಳ್ಳತೊಡಗಿದರು?
ಉತ್ತರ:– ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ನೌಕರರು ತಮ್ಮ ಖಾಸಗಿ ವ್ಯಾಪಾರ–ವ್ಯವಹಾರಕ್ಕಾಗಿ ದುರುಪಯೋಗ ಪಡಿಸಿಕೊಳ್ಳತೊಡಗಿದರು

9) ಯಾವ ರಾಜ್ಯದಲ್ಲಿ ಅತಿ ಹೆಚ್ಚು ಅರಣ್ಯ ಕ್ಷೇತ್ರವಿದೆ?
ಉತ್ತರ:– ಮಧ್ಯಪ್ರದೇಶ

10) ಬೆಂಗಳೂರನ್ನು ಭಾರತದ ಸಿಲಿಕಾನ್ ಕಣಿವೆ ಎಂದು ಏಕೆ ಕರೆಯುತ್ತಾರೆ?
ಉತ್ತರ:– ಬೆಂಗಳೂರು ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿದೆ ಹೀಗಾಗಿ ಇದನ್ನು ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಯುತ್ತಾರೆ.

12) ಭಾರತದಲ್ಲಿ ಅರಣ್ಯ ಹೊಂದಿರುವ ಪ್ರದೇಶದಲ್ಲಿ ಕರ್ನಾಟಕದ ಸ್ಥಾನ ಏನು?
ಉತ್ತರ:– ಹದಿಮೂರು

13) ತೆರಿಗೆ ಎಂದರೇನು?
ಉತ್ತರ:– ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆಯೇ ತೆರಿಗೆಯಾಗಿದೆ.

14) 1953ರಲ್ಲಿ ಫಜಲ್ ಆಲಿ ಅಧ್ಯಕ್ಷತೆಯಲ್ಲಿ ಆಯೋಗವು ಏಕೆ ರಚನೆಯಾಯಿರು?
ಉತ್ತರ:– ರಾಜ್ಯಗಳನ್ನು ಪುನರ್ ವಿಂಗಡಿಸಲು

15) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?
ಉತ್ತರ:– ನೀಲಗಿರಿ ಬೆಟ್ಟ

16) ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಯಾರು?
ಉತ್ತರ:– ಅನಿಬೆಸೆಂಟ್ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಆಗಿದ್ದರು.

III ಕೆಳಗಿನ ಪ್ರತಿಯೊಂದು ಪ್ರಶ್ನೆಗೂ 2–4 ವಾಕ್ಯದಲ್ಲಿ ಉತ್ತರಿಸಿ

17) ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು ಎಲ್ಲಿ ಕಂಡು ಬರುತ್ತದೆ?
ಉತ್ತರ:– ಇಂಥ ಸಸ್ಯವರ್ಗವು 60–75 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತದೆ.

18) ಗಂಗಾ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ. ಏಕೆ?
ಉತ್ತರ:– ಗಂಗಾ ನದಿಮುಖಜ ಭೂಮಿಯಲ್ಲಿರುವ ಮ್ಯಾಂಗ್ರೋವ್ ಕಾಡುಗಳಲ್ಲಿ ಸುಂದರಿ ಎಂಬ ಮರ ವ್ಯಾಪಕವಾಗಿ ಹಂಚಿಕೆಯಾಗಿದೆ ಹೀಗಾಗಿ ಈ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ.

19) ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು, ಸ್ಪಷ್ಟೀಕರಿಸಿ
ಉತ್ತರ:– ಬಕ್ಸಾರ್ ಕದನದ ಪರಿಣಾಮ ಬಿಹಾರ, ಒಡಿಶಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್ ಕ್ಲೈವನು ದ್ವಿ–ಸರ್ಕಾರವನ್ನು ಜಾರಿಗೆ ತಂದನು. ಇದರ ಪ್ರಕಾರ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಂಡರು. ಈ ರೀತಿ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು

20) ಎಲೆ ಉದುರುವ ಮಾನ್ಸೂನ್ ಅರಣ್ಯಗಳಲ್ಲಿ ಬೆಳೆಯುವ ಪ್ರಮುಖ ಮರಗಳನ್ನು ಹೆಸರಿಸಿ
ಉತ್ತರ:– ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ತೇಗ, , ಶ್ರೀಗಂಧ, ಕೆಂದಾಳ, ತಪಸಿ ಮರ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ ಮೊದಲಾದವು

21) ತುಂಗಭದ್ರ ಯೋಜನೆಯಡಿ ಕರ್ನಾಟಕದಲ್ಲಿ ನಿರ್ಮಿಸಲಾದ ಅಣೆಕಟ್ಟುಗಳ ಬಗ್ಗೆ ಬರೆಯಿರಿ
ಉತ್ತರ:– ಅಣೆಕಟ್ಟೆಯನ್ನು ಕೃಷ್ಣಾ ನದಿಯ ಉಪ ನದಿಯಾದ ತುಂಗಭದ್ರ ನದಿಗೆ ಕರ್ನಾಟಕದ ಬಳ್ಳಾರಿ ಜಿಲ್ಲೆಗೆ ಸೇರಿದ ಹೊಸಪೇಟೆಯ ಬಳಿ 'ಮಲ್ಲಾಪುರಂ' ಎಂಬಲ್ಲಿ ನಿರ್ಮಿಸಲಾಗಿದೆ. ಇದರಿಂದ ನಿರ್ಮಾಣಗೊಂಡ ಜಲಾಶಯಕ್ಕೆ "ಪಂಪ ಸಾಗರ"

22) ಭಾರತದಲ್ಲಿರುವ ಪ್ರಮುಖ ಬಂದರುಗಳನ್ನು ಪಟ್ಟಿ ಮಾಡಿ
ಉತ್ತರ : ಭಾರತವು ಪೂರ್ವ ತೀರದ ಮತ್ತು ಪಶ್ಚಿಮ ತೀರದ ಬಂದರುಗಳನ್ನು ಹೊಂದಿದೆ.
ಪೂರ್ವತೀರದ ಬಂದರುಗಳು: ತೂತುಕುಡಿ, ಚೆನ್ನೈ, ವಿಶಾಖಪಟ್ಟಣ, ಪಾರಾದೀಪ್, ಹಾಲ್ದಿಯಾ, ಕಲ್ಕತ್ತಾ ಇತ್ಯಾದಿ.
ಪಶ್ಚಿಮ ತೀರದ ಬಂದರುಗಳು : ಕೊಚ್ಚಿನ್, ನವಮಂಗಳೂರು, ಮರ್ಮಗೋವಾ, ಮುಂಬೈ, ಕಾಂಡ್ಲಾ ಇತ್ಯಾದಿ

23) ಮೌನ ಕಣಿವೆ ಆಂದೋಲನವನ್ನು ಏಕೆ ಹಮ್ಮಿಕೊಳ್ಳಲಾಯಿತು?
ಉತ್ತರ:– ಮೌನ ಕಣಿವೆ ಆಂದೋಲನವನ್ನು (1) ಪರಿಸರ ನಾಶ ತಡೆಗಟ್ಟಲು (2) ಜೀವ ಮತ್ತು ಸಸ್ಯ ಸಂಕುಲ ಸಂರಕ್ಷಣೆಗಾಗಿ ಹಮ್ಮಿಕೊಳ್ಳಲಾಯಿತು

24) ಶಿಕ್ಷಣದ ಹಕ್ಕು ಕಾಯ್ದೆ–2009 ಅನ್ನು ಏಕೆ ಜಾರಿಗೆ ತರಲಾಯಿತು?
ಉತ್ತರ:– ಶಿಕ್ಷಣದ ಹಕ್ಕು ಕಾಯ್ದೆ–2009 ಅನ್ನು
(*) 6ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು
(*) ಖಾಸಗಿ ಶಾಲೆಗಳಲ್ಲಿ ಶೇ. 25ರಷ್ಟು ಸೀಟುಗಳನ್ನು ಅಗತ್ಯವುಳ್ಳ ಮಕ್ಕಳಿಗೆ ಮೀಸಲಿಡಲು ಜಾರಿಗೆ ತರಲಾಯಿತು

25) ಉತ್ಸಾಹಿ ಕೃಷಿಕರು ಅಳವಡಿಸಿಕೊಂಡ ಪರಿಸರ ಸ್ನೇಹಿ ಕೃಷಿ ವಿಧಾನವನ್ನು ತಿಳಿಸಿ
ಉತ್ತರ:– ಕೆಲವು ಉತ್ಸಾಹಿ ರೈತರು ಸಾವಯುವ ಕೃಷಿ, ಶೂನ್ಯ ಬಂಡವಾಳ ಕೃಷಿ ಮುಂತಾದ ಪರಿಸರ ಸ್ನೇಹಿ ಹಾಗೂ ಸುಸ್ಥಿರ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡು ಅನುಕೂಲ ಪಡೆಯುತ್ತಿದ್ದಾರೆ.

26) ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವು ಯಾವುವು?
ಉತ್ತರ:–

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

ಎಸ್‌ಎಸ್‌ಎಲ್‌ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾ ರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION: MODEL QUESTIONS

I. Pick the correct option among the four given options for ALL of the following questions:

6. In case of metals, with increase in temperature:
(a) the conductivity decreases.
(b) the average speed of conduction electrons decreases.
(c) the resistivity decreases.
(d) the number of conduction electrons increases.
Ans:- (a) the conductivity decreases.

2. A galvanometer can be converted into a voltmeter by connecting:
(a) a low resistance in series with it.
(b) a high resistance in parallel with it.
(c) a low resistance in parallel with it.
(d) a high resistance in series with it.
Ans:- (d) a high resistance in series with it.

3. A glass rod is rubbed with silk cloth. The charge acquired by glass rod is _________.
(A) negative (B) positive
(C) zero
(D) positive on one end and negative on the opposite end
Ans:- (B) positive

4. A spherical conductor of radius R is carrying a charge of +Q. The ratio of the electric potentials corresponding to a point on the surface of the conductor and a point at a distance $\frac{R}{2}$ from the centre of the conductor are in the ratio
(A) 1: 2 (B) 2: 1
(C) 1:1 (D) 4:1
Ans:- (C) 1:1

5. The resistivity of a metallic conductor _____________ with decrease in temperature.
(A) increases (B) decreases
(C) first increases and then decreases
(D) first decreases and then increases
Ans:- (B) decreases

6. The Lorentz force is the force on a charged particle moving in a region containing _____________.
(A) only electric field (B) only magnetic field
(C) both electric and magnetic fields
(D) only crossed electric and magnetic fields
Ans:- (C) both electric and magnetic fields

7. Below are the two statements related to magnetic field lines:
Statement-I : The magnetic field lines do not intersect.
Statement-II: The direction of magnetic field at a point is unique.
(A) Both the statements I and II are correct and II is the correct explanation for I
(B) Both the statements I and II are correct and II is not the correct explanation for I
(C) Statement I is wrong but the statement II is correct
(D) Statement I is correct but the statement II is wrong
Ans:- (A) Both the statements I and II are correct and II is the correct explanation for I


8. A straight conductor of length 'l' is moving with a velocity 'v' in the direction of uniform magnetic field of strength 'B'. The magnitude of emf induced between the ends of the conductor is
(A) Blv (B) $\frac{B/v}{2}$
(C) 0 (D) 2Blv
Ans:- (C) 0

9. The SI unit of magnetic flux is:
(A) $Wb\ m^{-1}$ (B) $T\ m^{-2}$
(C) weber (D) $Wb\ m^{-2}$
Ans:- (C) weber

10. The average power dissipated in an ac circuit is maximum if the ac source is connected :
(A) only to pure resistor
(B) only to pure inductor
(C) only to pure capacitor
(D) to a series combination of capacitor and Inductor
Ans:- (A) only to pure resistor

II. Fill in the blanks by choosing appropriate answer given in the bracket for ALL the following questions
(maximum, decrease, thermonuclear fusion, generator, increase, cell)
1. A convenient way to increase the current sensitivity of a galvanometer is to __________ the number of turns of the coil.
Ans:- **increase**
2. The device used to convert mechanical energy into electrical energy is called a _______________
Ans:- **generator**
3. If two waves coming from two coherent sources superpose at a point in phase, then the intensity of light at that point is ______________.
Ans:- **maximum**
4. The source of energy output in the interior of stars is ________________________.
Ans:- **thermonuclear fusion**
5. The width of depletion region of a pn-junction diode will_____________ on increasing the forward bias voltage.
Ans:- **decrease**

III. *Answer the following*
1 . Draw the electric field lines for a system of two positive point charges.
Ans:-



(Contd....)


ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಇನ್ನೋವಾ ಕಾರು

ಡಿವೈಎಸ್‌ಪಿ ಕಾರು ಅಪಘಾತ; ಇಬ್ಬರು ಸಾವು

ಚಿತ್ರದುರ್ಗ: ಮಹಾರಾಷ್ಟ್ರ ಕೊಲ್ಹಾಪುರದ ಎಸಿಬಿ ಡಿವೈಎಸ್‌ಪಿ ವೈಷ್ಣವಿ ಸುರೇಶ್ ಪಾಟೀಲ್ ಅವರಿದ್ದ ಇನ್ನೋವಾ ಕಾರು ಮತ್ತು ಲಾರಿ ನಡುವೆ ಭಾನುವಾರ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ನಗರ ಹೊರವಲಯದ ತಮಟಕಲ್ಲು ಬಳಿ ರಾಷ್ಟ್ರೀಯ ಹೆದ್ದಾರಿಯ ಸೇತುವೆ ಬಳಿ ಭಾನುವಾರ ಮುಂಜಾನೆ ಡಿಕ್ಕಿ ಸಂಭವಿಸಿದೆ. ವೈಷ್ಣವಿ ಅವರ ತಾಯಿ ಕಮಲಾ ಹರಿಬಾಬು (69), ಚಾಲಕ ರಾಕೇಶ್ (39) ಮೃತಪಟ್ಟರು.

ವೈಷ್ಣವಿ, ಅವರ ಸಂಬಂಧಿ ಕುಸುಮಾ ಪಾಟೀಲ್ ಹಾಗೂ ಪೊಲೀಸ್ ಕಾನ್‌ಸ್ಟೆಬಲ್ ದತ್ತಾತ್ರೇಯ ಪಾಟೀಲ್ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ವೈಷ್ಣವಿ ಅವರು ಕುಟುಂಬದ ಜೊತೆ ತಮಿಳುನಾಡು ಪ್ರವಾಸ ಮುಗಿಸಿ, ಕೊಲ್ಹಾಪುರಕ್ಕೆ ಮರಳುವಾಗ ಅವಘಡ ಸಂಭವಿಸಿದೆ. ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋದ್ನಾ ಯೋಜನೆ ಜಿಂದಾಲ್ ತೆಕ್ಕೆಗೆ

1,600 ಮೆ.ವಾ ಉತ್ಪಾದನೆ: ಪಿಪಿಪಿ ಮಾದರಿಯಲ್ಲಿ ಮೊದಲ ಪ್ರಯೋಗ

● ಎ.ಎಂ. ಸುರೇಶ

ಮುಖ್ಯಾಂಶಗಳು

- ರಾಜ್ಯದ ಹೊರಗೆ ಕೈಗೆತ್ತಿಕೊಳ್ಳುತ್ತಿರುವ ಮೊದಲ ಯೋಜನೆ
- 2008ರಲ್ಲೇ ಯೋಜನೆ ಜಾರಿ ಸಂಬಂಧ ಒಪ್ಪಂದ
- ಸುಮಾರು 18 ವರ್ಷಗಳ ಬಳಿಕ ಯೋಜನೆಗೆ ಸ್ಪಷ್ಟರೂಪ

ಬೆಂಗಳೂರು: ಸುಮಾರು 18 ವರ್ಷಗಳಿಂದ ನನೆಗುದಿಯಲ್ಲಿದ್ದ 1,600 ಮೆಗಾವಾಟ್ ಸಾಮರ್ಥ್ಯದ ಗೋದ್ನಾ ಶಾಖೋತ್ಪನ್ನ ವಿದ್ಯುತ್ ಯೋಜನೆಯನ್ನು ಜಿಂದಾಲ್ ಸೌತ್ ವೆಸ್ಟ್ (ಜೆಎಸ್‌ಡಬ್ಲ್ಯು) ಎನರ್ಜಿ ಕಂಪನಿ ಕೈಗೆತ್ತಿಕೊಳ್ಳಲಿದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಸದ್ಯದಲ್ಲೇ ಒಪ್ಪಂದ ಮಾಡಿಕೊಳ್ಳಲಿದೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವದ(ಪಿಪಿಪಿ) ಈ ಯೋಜನೆಯನ್ನು ಛತ್ತೀಸಗಢದ ಗೋದ್ನಾದಲ್ಲಿ ಕರ್ನಾಟಕ ಸರ್ಕಾರ ಆರಂಭಿಸುತ್ತಿದೆ. ಇದರ ಅನುಷ್ಠಾನದ ಹೊಣೆಯನ್ನು ಜೆಎಸ್‌ಡಬ್ಲ್ಯುಗೆ ನೀಡುವುದಕ್ಕೆ ಈ ತಿಂಗಳ 8ರಂದು ನಡೆದ ಕೆಪಿಸಿಎಲ್ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಈ ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಕೆಪಿಸಿಎಲ್ ಟೆಂಡರ್ ಕರೆದಿತ್ತು. ಇದರಲ್ಲಿ ಎರಡು ಕಂಪನಿಗಳು ಭಾಗವಹಿಸಿದ್ದವು. ಜೆಎಸ್‌ಡಬ್ಲ್ಯು ಕಡಿಮೆ ಬಿಡ್ ಮಾಡಿದ್ದ ಕಾರಣ, ಆ ಕಂಪನಿಗೆ ನೀಡಲು ಸಭೆಯ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿ ಸೂಚಿಸಿದರು ಎಂದು ಇಂಧನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಜೆಎಸ್‌ಡಬ್ಲ್ಯು ಎನರ್ಜಿ ಕಂಪನಿಯು ಒಂದು ಯೂನಿಟ್‌ಗೆ ₹4.05 ಹಾಗೂ ಡಿಬಿ ಪವರ್ ಲಿಮಿಟೆಡ್ ₹4.20 ದರ ನಿಗದಿ ಮಾಡುವಂತೆ



ಕೋರಿದ್ದವು. ಕಡಿಮೆ ದರ, ತಾಂತ್ರಿಕ ಸಾಮರ್ಥ್ಯ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಜೆಎಸ್‌ಡಬ್ಲ್ಯು ಆಯ್ಕೆ ಮಾಡಲಾಗಿದೆ.

‘ಯೋಜನೆ ಪೂರ್ಣಗೊಂಡ ಬಳಿಕ ಅದಕ್ಕೆ ಎಷ್ಟು ಹಣ ವೆಚ್ಚವಾಗಿದೆ, ಮಾರುಕಟ್ಟೆಯಲ್ಲಿ ಕಲ್ಲಿದ್ದಲು ದರ ಎಷ್ಟಿದೆ ಎಂಬುದನ್ನು ಆಧರಿಸಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಯೂನಿಟ್‌ಗೆ ಎಷ್ಟು ದರ ಎಂಬುದನ್ನು ನಿಗದಿ ಮಾಡಲಿದೆ. ಟೆಂಡರ್‌ನಲ್ಲಿ ಈಗ ನಿಗದಿ ಮಾಡಿರುವ ದರದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸ ಆದರೂ ಆಗಬಹುದು’ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಈ ಯೋಜನೆಗೆ ಸುಮಾರು ₹18 ಸಾವಿರ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಜೆಎಸ್‌ಡಬ್ಲ್ಯು ಶೇ 74ರಷ್ಟು ಹಾಗೂ ಕೆಪಿಸಿಎಲ್ ಶೇ 26ರಷ್ಟು ಮೊತ್ತವನ್ನು ಭರಿಸಲಿದೆ. ಯೋಜನೆ 45 ತಿಂಗಳಲ್ಲಿ ಪೂರ್ಣಗೊಳ್ಳಬಹುದು ಎಂದು ಅಂದಾಜಿಸಲಾಗಿದೆ.

ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ 2008ರಲ್ಲಿ ಛತ್ತೀಸಗಢ ಸರ್ಕಾರದೊಂದಿಗೆ ‘ಗೋದ್ನಾ ಯೋಜನೆ’ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಈ ಯೋಜನೆಗಾಗಿ 1,016 ಎಕರೆ ಖಾಸಗಿ ಜಮೀನು ಹಾಗೂ 160 ಎಕರೆ ಸರ್ಕಾರಿ ಜಮೀನನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕಾಗಿ ಸುಮಾರು ₹220 ಕೋಟಿ ವೆಚ್ಚವಾಗಿದೆ.

ಕಲ್ಲಿದ್ದಲು ಹಂಚಿಕೆ: ಗೋದ್ನಾದ ಸಮೀಪದಲ್ಲೇ ಎರಡು ಕಲ್ಲಿದ್ದಲು ಗಣಿಗಳನ್ನು ಕೇಂದ್ರ ಸರ್ಕಾರವು 2019ರಲ್ಲಿ ಕೆಪಿಸಿಎಲ್‌ಗೆ ಹಂಚಿಕೆ ಮಾಡಿದೆ. 1,600 ಮೆಗಾವಾಟ್ ವಿದ್ಯುತ್ ಉತ್ಪಾದನೆಗಾಗಿ ವರ್ಷಕ್ಕೆ 70 ಲಕ್ಷ ಟನ್ ಕಲ್ಲಿದ್ದಲು ಬೇಕಾಗುತ್ತದೆ. 21 ಕೋಟಿ ಟನ್ ಕಲ್ಲಿದ್ದಲು ಅಲ್ಲಿ ಲಭ್ಯವಿದ್ದು, 30 ವರ್ಷಗಳವರೆಗೆ ಬಳಸಬಹುದು ಎಂದು ಅಂದಾಜಿಸಲಾಗಿದೆ.

ಈ ಯೋಜನೆಗೆ ಅಗತ್ಯವಿರುವ ನೀರನ್ನು ಮಹಾನದಿಯಿಂದ ಬಳಸಿಕೊಳ್ಳಲಾಗುತ್ತದೆ. ನದಿಯಿಂದ ಗೋದ್ನಾಗೆ ನೀರು ತರಲು ಬ್ಯಾರೇಜ್ ನಿರ್ಮಾಣಕ್ಕಾಗಿ ₹64 ಕೋಟಿ ವೆಚ್ಚ ಮಾಡಲಾಗಿದೆ.

ವಿಳಂಬ ಯಾಕೆ?

ಭೂ ಸ್ವಾಧೀನ, ಕಲ್ಲಿದ್ದಲು ಗಣಿ ಹಂಚಿಕೆಯಲ್ಲಿ ಆದ ವಿಳಂಬ ಸೇರಿದಂತೆ ಹಲವು ಕಾರಣಗಳಿಂದ ಈ ಯೋಜನೆ ನನೆಗುದಿಯಲ್ಲಿತ್ತು. ಈಗ ಎಲ್ಲ ಅಡೆತಡೆಗಳು ನಿವಾರಣೆಯಾಗಿ, ಯೋಜನೆಗೆ ದಾರಿ ಸುಗಮವಾಗಿದೆ.

ಕಲ್ಲಿದ್ದಲು ಹಗರಣ ಬಯಲಿಗೆ ಬಂದ ನಂತರ, ಕೇಂದ್ರ ಸರ್ಕಾರ ಹೊಸದಾಗಿ ಕಲ್ಲಿದ್ದಲು ಗಣಿಗಳ ಹಂಚಿಕೆ ಮಾಡಲಿಲ್ಲ. ಹೀಗಾಗಿ ಕಲ್ಲಿದ್ದಲು ಹಂಚಿಕೆಗಾಗಿ 2019ರವರೆಗೂ ಕಾಯಬೇಕಾಯಿತು. ಕೋವಿಡ್‌ನಿಂದಾಗಿ 2–3 ವರ್ಷ ಯಾವುದೇ ಹೊಸ ಯೋಜನೆಗಳತ್ತ ಸರ್ಕಾರ ಗಮನಹರಿಸಲಿಲ್ಲ.

ಈಚೆಗೆ ವಿದ್ಯುತ್‌ಗೆ ಬೇಡಿಕೆ ಹೆಚ್ಚಾಗುತ್ತಿದ್ದು, ಭವಿಷ್ಯದಲ್ಲೂ ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರ ಮತ್ತಷ್ಟು ಹೆಚ್ಚಾಗಲಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಈ ಯೋಜನೆಗೆ ಮರು ಜೀವ ನೀಡಿದೆ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಫೆಬ್ರುವರಿಯಿಂದ ಹೊಸ ಪಡಿತರ ಚೀಟಿಗೆ ಅರ್ಜಿ: ಆಹಾರ ಸಚಿವ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಒಟ್ಟು ಜನಸಂಖ್ಯೆಯ ಶೇ 50ಕ್ಕಿಂತ ಅಧಿಕ ಬಿಪಿಎಲ್ ಕಾರ್ಡ್‌ಗಳು ಇರಬಾರದು ಎಂಬುದು ನಿಯಮ. ರಾಜ್ಯದಲ್ಲಿ ಶೇ 75ರಷ್ಟಿದೆ. ಮಹಾರಾಷ್ಟ್ರ ನಂತರ ಹೆಚ್ಚು ತೆರಿಗೆ ಪಾವತಿಸುವ ರಾಜ್ಯ ಕರ್ನಾಟಕ ಆಗಿದ್ದರೂ ಹೆಚ್ಚು ಬಿಪಿಎಲ್ ಕಾರ್ಡ್ ಇರುವುದು ಅಚ್ಚರಿತಂದಿದೆ’ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.


ಮುನಿಯಪ್ಪ

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅನರ್ಹ ಕಾರ್ಡ್‌ಗಳನ್ನು ಗುರುತಿಸಿ ಎಪಿಎಲ್‌ಗೆ ಬದಲಿಸುವ ಕಾರ್ಯ ನಡೆದಿದೆ. ಹಾಗೆಂದು ಹೊಸ ಅರ್ಜಿಗಳ ಸ್ವೀಕಾರವನ್ನು ನಿಲ್ಲಿಸಿಲ್ಲ’ ಎಂದು ಹೇಳಿದರು.

‘ವೈದ್ಯಕೀಯ ಕಾರಣಗಳಿಗೆ ಬಿಪಿಎಲ್ ಕಾರ್ಡ್ ಪಡೆಯುವವರಿಗೆ ಇಲಾಖೆಯ ಪೋರ್ಟಲ್ ಮುಕ್ತವಾಗಿರಿಸಿದಾಗ ಬೇರೆಯವರೂ ಅರ್ಜಿ ಹಾಕಿದ್ದು, ಅಂತಹ ಮೂರು ಲಕ್ಷ ಅರ್ಜಿಗಳ ಪರಿಶೀಲನೆ ನಡೆಯುತ್ತಿದೆ. ಫೆಬ್ರುವರಿ ತಿಂಗಳಿಂದ ಹೊಸ ಪಡಿತರ ಚೀಟಿಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗುತ್ತದೆ’ ಎಂದರು.

‘ಕೇಂದ್ರ ಸರ್ಕಾರ ಪ್ರತಿ ವ್ಯಕ್ತಿಗೆ 5 ಕೆ.ಜಿ ಅಕ್ಕಿ ಜೊತೆಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಬಿಪಿಎಲ್ ಕಾರ್ಡ್‌ದಾರರಿಗೆ 5 ಕೆ.ಜಿ ಅಕ್ಕಿ ನೀಡುತ್ತಿತ್ತು. ಅಕ್ಕಿ ಬದಲು ದಕ್ಷಿಣ ಕರ್ನಾಟಕದಲ್ಲಿ ರಾಗಿ, ಉತ್ತರ ಕರ್ನಾಟಕದಲ್ಲಿ ಜೋಳ, ತೊಗರಿ ಬೇಳೆ ನೀಡಲು ಮುಂದಾಗಿದ್ದೇವೆ’ ಎಂದರು.

‘ಆದಷ್ಟು ಶೀಘ್ರ ಟೆಂಡರ್ ಕರೆದು ಜೋಳ, ತೊಗರಿ, ರಾಗಿ ವಿತರಿಸಲಾಗುವುದು. ತೊಗರಿ ಖರೀದಿಗೆ ಗುಣಮಟ್ಟವೊಂದೇ ಮಾನದಂಡ. ಆದಾಗ್ಯೂ, ಕಲಬುರಗಿ ಭಾಗದಲ್ಲಿ ಬೆಳೆದ ತೊಗರಿ ಖರೀದಿಸುವಂತೆ ಗುತ್ತಿಗೆದಾರರಿಗೆ ಮೌಖಿಕವಾಗಿ ತಿಳಿಸುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಕ್ಷದವರು ತೀರ್ಮಾನ ಮಾಡುತ್ತಾರೆ: ಡಿ.ಕೆ.ಶಿವಕುಮಾರ್ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ಕುಟುಂಬದ ಹಿನ್ನೆಲೆ ಇರದಿದ್ದರೂ ಈ ಮಟ್ಟಕ್ಕೆ ಬೆಳೆದಿದ್ದೇನೆ. ಮುಂದೆಯೂ ನನ್ನ ಬಗ್ಗೆ ಪಕ್ಷದವರು ತೀರ್ಮಾನ ಮಾಡುತ್ತಾರೆ ಎಂಬ ನಂಬಿಕೆ, ಆತ್ಮ ವಿಶ್ವಾಸ ಇದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.


ಡಿ.ಕೆ. ಶಿವಕುಮಾರ್

ಇಲ್ಲಿನ ಅರಮನೆ ಮೈದಾನದಲ್ಲಿ ನಡೆದ ‘ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ’ದಲ್ಲಿ ಉದ್ಯಮಿಗಳ ಯಶಸ್ಸಿನ ಕುರಿತು ಮಾತನಾಡುವಾಗ ಪ್ರಾಸಂಗಿಕವಾಗಿ ರಾಜಕೀಯವನ್ನೂ ಪ್ರಸ್ತಾಪಿಸಿದರು.

‘ನಿಮಗೆ ಯಾರಾದರೂ ತೊಂದರೆ ಕೊಡುವವರು, ಮೋಸ ಮಾಡುವವರು ಇದ್ದರೆ, ಅವರು ನಿಮ್ಮ ಅಕ್ಕಪಕ್ಕದಲ್ಲಿ ಇರುವವರೇ ಆಗಿರುತ್ತಾರೆ. ಬೇರೆಯವರು ತೊಂದರೆ ಕೊಡಲ್ಲ. ನೀವು ಜಾಗರೂಕರಾಗಿ ಇರಬೇಕು’ ಎಂದು ಎಚ್ಚರಿಸಿದರು.

‘ಅಧಿವೇಶನದಲ್ಲಿ ಒಮ್ಮೆ ಯಡಿಯೂರಪ್ಪ ಅವರಿಗೆ ಯಶಸ್ಸಿನ ಬಗ್ಗೆ ಒಂದು ಮಾತು ಹೇಳಿದ್ದೆ. ನಾವು ಬದುಕಿನಲ್ಲಿ ಯಶಸ್ಸು ಸಾಧಿಸಬೇಕಾದರೆ ನಮ್ಮಲ್ಲಿ ಧರ್ಮರಾಯನ ಧರ್ಮತ್ವ, ಕರ್ಣನ ದಾನತ್ವ, ಅರ್ಜುನನ ಗುರಿ, ವಿದುರನ ನೀತಿ, ಭೀಮನ ಬಲ, ಕೃಷ್ಣನ ತಂತ್ರ ಇರಬೇಕು. ಆಗ ಯಶಸ್ಸು ಸಾಧಿಸಲು ಸಾಧ್ಯ ಎಂದು ಹೇಳಿದ್ದೆ’ ಎಂದರು.

‘ನಾನು ರಾಜಕೀಯವಾಗಿ ಅನೇಕ ಏಟು ತಿಂದಿದ್ದೇನೆ. ರಾಜಕೀಯ ಮಾಡಿ ಜೈಲಿಗೂ ಹಾಕಿಸಿದ್ದರು. ಪಕ್ಷಾತೀತವಾಗಿ, ಸಮುದಾಯತೀತವಾಗಿ ಜನ ನನಗೆ ಒಳ್ಳೆಯದು ಬಯಸುತ್ತಿದ್ದಾರೆ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲ ಆಗುವುದಿಲ್ಲ’ ಎಂದು ಹೇಳಿದರು.

‘ಬೇರೆಯವರಿಗಿಂತ ನಮ್ಮ ಸಮುದಾಯದ ಕೆಲವರು ಅಸೂಯೆಯಿಂದ ಟೀಕೆ ಮಾಡುತ್ತಿದ್ದಾರೆ. ಹಿಂದೆ, ಮುಂದೆ ಚಾಕು ಹಾಕುತ್ತಿದ್ದಾರೆ. ದಿನ ಬೆಳಗಾದರೆ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡುತ್ತಾರೆ. ರಾಜಕೀಯದಲ್ಲಿ ಇವೆಲ್ಲವೂ ಸಹಜ. ಇದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ. ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ನಾನು ಅವರ ಜತೆ ಎಷ್ಟು ಪ್ರಾಮಾಣಿಕವಾಗಿ ಇದ್ದೆ ಎಂಬುದು ಆತ್ಮಸಾಕ್ಷಿಗೆ ಗೊತ್ತು. ಆದರೂ ನನ್ನ ವಿರುದ್ಧ ಬೆನ್ನಿಗೆ ಚೂರಿ ಹಾಕಿದ ಆರೋಪ ಮಾಡಿದರು’ ಎಂದು ಬೇಸರ ವ್ಯಕ್ತಪಡಿಸಿದರು.



> **ಕುರ್ಚಿ ಕಾಳಗ ಎಲ್ಲಿದೆ... ಕಾಳಗವೇ ಇಲ್ಲ. ಬಿಜೆಪಿಯವರು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚಾರ ಮಾಡಿದ್ದಕ್ಕೆ ಮಾಧ್ಯಮದವರು ಸುಮ್ಮನೆ ಪ್ರಶ್ನೆ ಕೇಳುತ್ತೀರಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಪ್ರಶಸ್ತಿ ಪ್ರದಾನ

ಪ್ರಜಾವಾಣಿ ಚಿತ್ರ



ಧಾರವಾಡದ ಭಾರತೀಯ ಸಂಗೀತ ವಿದ್ಯಾಲಯದ ವತಿಯಿಂದ ಸೃಜನಾ ರಂಗಮಂದಿರದಲ್ಲಿ ಭಾನುವಾರ ನಡೆದ ಸಂಗೀತೋತ್ಸವದಲ್ಲಿ ಹಿಂದೂಸ್ತಾನಿ ಗಾಯಕ ಪಂಡಿತ್ ಶ್ರೀಪಾದ ಹೆಗಡೆ ಅವರಿಗೆ ‘ಸ್ವರ ಗಂಧರ್ವ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಾಗವೇಣಿ ಹೆಗಡೆ, ಪಂಡಿತ್ ಗಣಪತಿ ಭಟ್ ಹಾಸಣಗಿ, ವಿದ್ಯಾಲಯದ ಉಪಾಧ್ಯಕ್ಷ ಶಫಿಕ್ ಖಾನ್, ಅಧ್ಯಕ್ಷೆ ಡಾ.ಸೌಭಾಗ್ಯಾ ಕುಲಕರ್ಣಿ, ಭಾರತಿದೇವಿ ರಾಜಗುರು ಪಾಲ್ಗೊಂಡಿದ್ದರು

‘ರಾಜ್ಯದಲ್ಲಿ ತೃತೀಯ ರಂಗ ರಚನೆ ಫೆಬ್ರುವರಿ 8ಕ್ಕೆ ಹೆಸರು ಘೋಷಣೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳಿಗೆ ಪರ್ಯಾಯವಾಗಿ ರಾಜ್ಯದಲ್ಲಿ ತೃತೀಯ ರಂಗ ರಚಿಸಲಿದ್ದು, ಫೆ.8ರಂದು ಕಲಬುರಗಿ ವಿಭಾಗಮಟ್ಟದ ಸಮಾವೇಶದಲ್ಲಿ ಹೆಸರು ಘೋಷಿಸಲಾಗುವುದು’ ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಹೇಳಿದರು.


ಮಾರಸಂದ್ರ ಮುನಿಯಪ್ಪ

‘ರಾಜ್ಯದಲ್ಲಿ ಭ್ರಷ್ಟಾಚಾರ, ದೌರ್ಜನ್ಯ ಹೆಚ್ಚುತ್ತಿದೆ. ರಾಜಕೀಯ ಪಕ್ಷಗಳಿಂದ ಸುಧಾರಣೆ ಸಾಧ್ಯವಾಗಿಲ್ಲ. ಹೀಗಾಗಿ, ಬದಲಾವಣೆ ಅವಶ್ಯ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲಾಗುವುದು. ಮುಂದೆ ವಿಧಾನಸಭೆ ಚುನಾವಣೆಯಲ್ಲಿ ಕನಿಷ್ಠ 50 ಸ್ಥಾನ ಗೆಲ್ಲುವ ಗುರಿ ಇದೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಕಲಬುರಗಿ ಸಮಾವೇಶದಲ್ಲಿ ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ, ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮತ್ತು ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಳ್ಳುವರು’ ಎಂದು ತಿಳಿಸಿದರು.

ಹುಬ್ಬಳ್ಳಿಯಲ್ಲಿ ಅಹಿಂದ ಸಮಾವೇಶ 21ರಂದು: ಸಿದ್ದು ತೇಜಿ

ಹುಬ್ಬಳ್ಳಿ: ‘ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಬಾರದು ಎಂದು ಆಗ್ರಹಿಸಿ ಜ.21ರಂದು ನಗರದಲ್ಲಿ ಅಹಿಂದ ಸಮಾವೇಶ ಏರ್ಪಡಿಸಲಾಗಿದೆ’ ಎಂದು ಅಹಿಂದ ಸಂಘಟನೆಯ ಗೌರವ ಕಾರ್ಯದರ್ಶಿ ಸಿದ್ದು ತೇಜಿ ಹೇಳಿದರು.

‘ದಾವಣಗೆರೆ, ಮೈಸೂರು, ಚಿತ್ರದುರ್ಗದಲ್ಲೂ ಸಮಾವೇಶ ನಡೆಸಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಸಂದೇಶ ರವಾನಿಸಲಾಗುವುದು’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಸಿದ್ದರಾಮಯ್ಯ ಅವರನ್ನು ಮುಂದುವರಿಸುವ ಕುರಿತು ಕಾಂಗ್ರೆಸ್ ವರಿಷ್ಠರು ಸ್ಪಷ್ಟಪಡಿಸಿಲ್ಲ. ಹೀಗಾಗಿ, ಸಮಾವೇಶ ಅನಿವಾರ್ಯವಾಗಿದೆ’ ಎಂದರು.

ಮಹಿಳೆಗೆ ಮದ್ಯ ಕುಡಿಸಿ ಸಾಮೂಹಿಕ ಅತ್ಯಾಚಾರ

ಒಂದನೇ ಪುಟದಿಂದ...

ಏನಿದು ಘಟನೆ: ಆರೋಪಿಗಳಾದ ಶಿವಾನಂದ ಕಾನಾನ ಮತ್ತು ಗಣೇಶ ಗಿಡ್ಡನ್ನವರ ಜ. 9ರಂದು ರಾತ್ರಿ 12 ಗಂಟೆ ಸುಮಾರಿಗೆ ಊಟ ಕೊಡುವ ನೆಪದಲ್ಲಿ, ಮಹಿಳೆಯನ್ನು ನಗರದ ಇಂಡಿ ಪಂಪ್ ಬಳಿಯ ಅಂಬೇಡ್ಕರ್ ಮೈದಾನದಿಂದ ಆನಂದನಗರದ ಕುಷ್ಠ ರೋಗ ಆಸ್ಪತ್ರೆ ಬಳಿಯ ಅರಣ್ಯ ಪ್ರದೇಶಕ್ಕೆ ಆಟೊದಲ್ಲಿ ಕರೆದೊಯ್ದಿದ್ದರು. ನಂತರ ಅವರಿಗೆ ಮದ್ಯ ಕುಡಿಸಿ, ಹಲ್ಲೆ ನಡೆಸಿದ್ದೂ ಅಲ್ಲದೆ, ಅತ್ಯಾಚಾರ ಎಸಗಿದ್ದರು.

‘ಪ್ರದೀಪ ದೊಡಮನಿ ಎಂಬಾತ ಕೃತ್ಯವನ್ನು ವಿಡಿಯೊ ಮಾಡಿ ಹಾಗೂ ಫೋಟೊ ತೆಗೆದು, ಅವುಗಳನ್ನು ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಹಂಚಿಕೆ ಮಾಡಿದ್ದ. ಮಹಿಳೆ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.


ಶಿವಾನಂದ ಕಾನಾನ


ಗಣೇಶ ಗಿಡ್ಡನ್ನವರ


ಪ್ರದೀಪ ದೊಡಮನಿ

ಅತ್ಯಾಚಾರ, ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ವಿಡಿಯೊ ಹಂಚಿಕೆ, ಆರೋಪಿಗಳ ಮೇಲೆ ಸಾರ್ವಜನಿಕರು ಹಲ್ಲೆ ನಡೆಸಿದ ಬಗ್ಗೆ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ.

ತಲೆ ಕೂದಲು ಕತ್ತರಿಸಿ ಹಲ್ಲೆ

ಅತ್ಯಾಚಾರ ಕೃತ್ಯದ ಆರೋಪಿಗಳ ತಲೆ ಕೂದಲು ಕತ್ತರಿಸಿ, ಹಲ್ಲೆ ನಡೆಸಿದ ಪ್ರಕರಣ ಸಂಬಂಧ ಪೊಲೀಸರು ಶಿವಶಂಕರ ಕಾಲೊನಿಯ 30ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದರು. ಈ ವೇಳೆ ಠಾಣೆ ಬಳಿ ಸ್ಥಳೀಯರು ಮತ್ತು ಪೊಲೀಸರ ನಡುವೆ ವಾಗ್ವಾದ ನಡೆಯಿತು.

‘ಆರೋಪಿಗಳನ್ನು ಹಿಡಿದು ಕೊಟ್ಟಿದ್ದಕ್ಕೆ, ನಮ್ಮ ವಿರುದ್ಧವೇ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ’ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

‘ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಅತ್ಯಾಚಾರದ ವಿಡಿಯೊ ಹಂಚಿಕೆ ಆಗಿದ್ದನ್ನು ಗಮನಿಸಿದ, ಸ್ಥಳೀಯರು ಆರೋಪಿಗಳಾದ ಶಿವಾನಂದ ಮತ್ತು ಗಣೇಶ ಅವರ ತಲೆಕೂದಲು ಕತ್ತರಿಸಿ, ಹಲ್ಲೆ ನಡೆಸಿದ್ದರು. ಈ ಕುರಿತು ಶಿವಾನಂದ, ಸ್ಥಳೀಯರ ವಿರುದ್ಧ ದೂರು ನೀಡಿದ್ದರು. ಅಷ್ಟರಲ್ಲಿ ವಿಡಿಯೊ ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದೆವು ಎಂದು ಪೊಲೀಸರು ತಿಳಿಸಿದರು.

> **ಅತ್ಯಾಚಾರ ಪ್ರಕರಣ ಸಂಬಂಧ ಮೂವರನ್ನು ಬಂಧಿಸಲಾಗಿದೆ. ಆದರೆ, ಸ್ಥಳೀಯರು ಕಾನೂನು ಕೈಗೆ ತೆಗೆದುಕೊಂಡು ಆರೋಪಿಗಳ ಮೇಲೆ ಹಲ್ಲೆ ನಡೆಸಿದ್ದು ತಪ್ಪು**
> **ಎನ್. ಶಶಿಕುಮಾರ್,** ಪೊಲೀಸ್ ಕಮಿಷನರ್
> ಹು–ಧಾ ಮಹಾನಗರ

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

‘ವಿವರಣೆ ಕೇಳಿದರೆ ಕೊಡುವೆ’

ದ್ವೇಷ ಭಾಷಣ: ಆಕ್ಷೇಪಿಸಿಲ್ಲ, ಹಿಂದಕ್ಕೂ ಕಳುಹಿಸಿಲ್ಲ—ಸಿ.ಎಂ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ದ್ವೇಷ ಭಾಷಣ ತಡೆ ಮಸೂದೆಯನ್ನು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ತಿರಸ್ಕರಿಸಿಲ್ಲ, ಹಿಂದಕ್ಕೂ ಕಳುಹಿಸಿಲ್ಲ. ಆಕ್ಷೇಪಿಸಿಯೂ ಇಲ್ಲ. ರಾಜ್ಯಪಾಲರು ಬಯಸಿದರೆ ಮಸೂದೆ ಬಗ್ಗೆ ವಿವರಣೆ ಕೊಡುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಹೇಳಿದರು.

ಮಸೂದೆ ಕುರಿತು ಬಿಜೆಪಿ ಮುಖಂಡರು ರಾಜ್ಯಪಾಲರನ್ನು ಭೇಟಿಯಾದ ಕುರಿತ ಸುದ್ದಿಗಾರರ ಪ್ರಶ್ನೆಗೆ, ‘ರಾಜ್ಯಪಾಲರು ಯಾವಾಗ ಕರೆಯುತ್ತಾರೆ ನೋಡೋಣ’ ಎಂದರು.

ಬಳ್ಳಾರಿಯಿಂದ ಬಿಜೆಪಿ ಪಾದಯಾತ್ರೆ ಕುರಿತ ಪ್ರಶ್ನೆಗೆ, ‘ಪಾದಯಾತ್ರೆ ಮಾಡಲಿ. ಶಾಸಕ ಜನಾರ್ದನ ರೆಡ್ಡಿ, ಶ್ರೀರಾಮುಲು ಅಲ್ಲಿ ಸ್ಥಾನ ಕಳೆದುಕೊಂಡಿದ್ದರು. ಈಗ ಅಸೂಯೆಯಿಂದ ಮಾಡುತ್ತಿದ್ದಾರೆ’ ಎಂದರು. ‘ಹಿಂದೆ ನಾವು ಪಾದಯಾತ್ರೆ ಮಾಡಿದ್ದು ಒಳ್ಳೆ ವಿಚಾರಕ್ಕೆ. ರೆಡ್ಡಿ ಸಹೋದರರು ರಿಪಬ್ಲಿಕ್ ಆಫ್ ಬಳ್ಳಾರಿ ನಡೆಸುತ್ತಿದ್ದಾರೆ. ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಲೋಕಾಯುಕ್ತರು ವರದಿ ಕೊಟ್ಟಿದ್ದರು. ವಿಧಾನಸಭೆಯಲ್ಲಿ ರೆಡ್ಡಿ ಸಹೋದರರು ಮತ್ತು ಆಗಿನ ಸಿ.ಎಂ ಯಡಿಯೂರಪ್ಪ ನನ್ನ ಮೇಲೆ ಮುಗಿಬಿದ್ದಿದ್ದರು. ಅದಕ್ಕಾಗಿ ಪಾದಯಾತ್ರೆ ಮಾಡಿದ್ದೆವು’ ಎಂದರು.

‘ಬಿಜೆಪಿಯವರು ಏಕೆ ಪಾದಯಾತ್ರೆ ಮಾಡುತ್ತಿದ್ದಾರೆ. ವಾಲ್ಮೀಕಿ ಪ್ರತಿಮೆ ಉದ್ಘಾಟನೆ ಬ್ಯಾನರ್ ತೆಗೆದವರು ಯಾರು. ಬ್ಯಾನರ್ ತೆಗೆಯದೇ ಇದ್ದಿದ್ದರೆ ಗಲಾಟೆಗೆ ಪ್ರಚೋದನೆ ಎಲ್ಲಿ ಆಗುತ್ತಿತ್ತು’ ಎಂದು ಪ್ರಶ್ನಿಸಿದರು.

‘ನದಿಗೂ ಜೀವದ ಹಕ್ಕು ಕೊಡಿ’

ಒಂದನೇ ಪುಟದಿಂದ...

‘ಮುಖ್ಯಮಂತ್ರಿ ಅವರನ್ನು ಈ ಹಿಂದೆ ಭೇಟಿ ಮಾಡಿದ್ದ ಸಂದರ್ಭದಲ್ಲಿ, ನೀರಾವರಿ ಇಲಾಖೆ ತಜ್ಞರು, ಉನ್ನತ ಅಧಿಕಾರಿಗಳು, ಜನ ಪ್ರತಿನಿಧಿಗಳು ಹಾಗೂ ಬೇಡ್ತಿ- ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಪ್ರಮುಖರ ಸಭೆ ಏರ್ಪಡಿಸುವ ಆಶ್ವಾಸನೆ ನೀಡಿದ್ದರು. ಅದರಂತೆ ಈ ಸಭೆಯ ದಿನಾಂಕ ಆದಷ್ಟು ಬೇಗ ನಿಗದಿಪಡಿಸಬೇಕು’ ಎಂದು ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಎಂದು ಆಗ್ರಹಿಸಿದರು

‘ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ನಿಯೋಗ ಕೇಂದ್ರ ಪರಿಸರ-ಅರಣ್ಯ ಹಾಗೂ ನೀರಾವರಿ ಸಚಿವರನ್ನು ಭೇಟಿ ಮಾಡಲು ಉತ್ತರ ಕನ್ನಡ ಜಿಲ್ಲೆಯ ಸಂಸದರು ಹಾಗೂ ಎಲ್ಲ ಶಾಸಕರು ಶೀಘ್ರ ದಿನಾಂಕ ನಿಗದಿಪಡಿಸಬೇಕು. ಬೇಡ್ತಿ-ಅಘನಾಶಿನಿ ಕಣಿವೆಗಳಲ್ಲಿ ನದಿ ತಿರುವು ಯೋಜನೆಗಳ ಸ್ಥಳ ಸಮೀಕ್ಷೆಗೆ ಅರಣ್ಯ ಇಲಾಖೆ ಅನುಮತಿ ನೀಡಬಾರದು' ಎಂದು ಆಗ್ರಹಿಸಿದರು.

‘ಬೇಡ್ತಿ-ಅಘನಾಶಿನಿ ನದಿ ತೀರ ಪ್ರದೇಶದ ಜನರಿಗೆ ಅತಿ ಅವಶ್ಯವಾದ ನೀರಾವರಿ ವ್ಯವಸ್ಥೆ ಕಲ್ಪಿಸಲು ವಿಶೇಷ ಜನಸಹಭಾಗಿತ್ವದ ಕಿರು ನೀರಾವರಿ ಯೋಜನೆ ಪ್ರಕಟಿಸಬೇಕು’ ಎಂದು ನಿರ್ಣಯ ಕೈಗೊಳ್ಳಲಾಯಿತು.


ಶಿರಸಿಯಲ್ಲಿ ನದಿ ಜೋಡಣೆ ವಿರೋಧಿಸಿ ಭಾನುವಾರ ಏರ್ಪಡಿಸಿದ್ದ ಜನ ಸಮಾವೇಶವನ್ನು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಉದ್ಘಾಟಿಸಿದರು

> **ಸಮುದ್ರಕ್ಕೆ ನದಿ ನೀರು ಸೇರುವುದು ವ್ಯರ್ಥ ಎಂದು ಬಿಂಬಿಸಿ, ನದಿ ತಿರುವು ಯೋಜನೆಗಳನ್ನು ಜಾರಿಗೆ ತರಲು ಹೊರಟಿರುವುದು ಅತ್ಯಂತ ಮೂರ್ಖತನದ ನಿರ್ಧಾರ**
> **ಬಿ.ಎಂ.ಕುಮಾರಸ್ವಾಮಿ**
> ಪರಿಸರ ತಜ್ಞ

> **ದೇಶದಲ್ಲಿ ಹಲವು ನದಿ ತಿರುವು ಯೋಜನೆಗಳಿವೆ, ನಾವು ಅವುಗಳನ್ನೆಲ್ಲ ವಿರೋಧಿಸುತ್ತಿಲ್ಲ. ಆದರೆ ಪಶ್ಚಿಮ ಘಟ್ಟದ ಅಸ್ತಿತ್ವಕ್ಕೆ ಧಕ್ಕೆ ತರುವ ಯೋಜನೆಗಳಿಗೆ ನಮ್ಮ ವಿರೋಧವಿದೆ**
> **ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ**
> ಸ್ವರ್ಣವಲ್ಲೀ ಮಠ

ಈ ವೇಳೆ ನೆಲಮಾವು ಮಠದ ಮಾಧವಾನಂದ ಭಾರತೀ ಸ್ವಾಮೀಜಿ, ಸ್ವಾದಿ ಜೈನಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ, ಶಿರಳಗಿ ಚೈತನ್ಯ ರಾಜಾರಾಮ ಕ್ಷೇತ್ರದ ಬ್ರಹ್ಮಾನಂದ ಭಾರತೀ ಸ್ವಾಮೀಜಿ, ಜಡೆ ಸಂಸ್ಥಾನ ಮಠದ ಮಹಾಂತ ಸ್ವಾಮೀಜಿ, ಸಚಿವ ಮಂಕಾಳ ವೈದ್ಯ, ಶಾಸಕರಾದ ಭೀಮಣ್ಣ ನಾಯ್ಕ, ಶಿವರಾಮ ಹೆಬ್ಬಾರ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಇದ್ದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ನೋಂದಾಯಿತ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರವರ ಕಚೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ಪಶ್ಚಿಮ–1	ಬೆಂಜಮಂ/ಕಾನಿಅ(ಪ–1)/ತಾಂಅ/ಪಿಬಿ/5124/2025–26, ದಿ: 09.01.2026 (ಪ್ರವರ್ಗ 2ಎ ಗೆ ಮೀಸಲು)	1	ರೂ. 25,81,474/- ರೂ. 25,000/-	19.01.2026 ಸಂಜೆ 4.00 ಗಂಟೆವರೆಗೆ	20.01.2026 ಸಂಜೆ 4.30 ಗಂಟೆಯ ನಂತರ
2			2	ರೂ. 24,87,298 ರೂ. 25,000/-		
3		ಬೆಂಜಮಂ/ಕಾನಿಅ(ಪ–1)/ತಾಂಅ/ಪಿಬಿ/5124/2025–26, ದಿ: 09.01.2026	3	ರೂ. 26,96,442/- ರೂ. 53,950/-		
4			4	ರೂ. 32,57,984/- ರೂ. 65,200/-		
5		ಬೆಂಜಮಂ/ಕಾನಿಅ(ಪ–1)/ತಾಂಅ/ಪಿಬಿ/5124/2025–26, ದಿ: 09.01.2026 (ಪ್ರವರ್ಗ 2ಎ ಗೆ ಮೀಸಲು)	5	ರೂ. 50,39,024/- ರೂ. 50,400/-		
6		ಬೆಂಜಮಂ/ಕಾನಿಅ(ಪ–1)/ತಾಂಅ/ಪಿಬಿ/5124/2025–26, ದಿ: 09.01.2026 (ಪರಿಶಿಷ್ಟ ಜಾತಿಗೆ ಮೀಸಲು)	6	ರೂ. 28,02,776/- ರೂ. 28,100/-		
						ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ–1)
7	ಉತ್ತರ ಪಶ್ಚಿಮ–1	ಬೆಂಜಮಂ/ಕಾನಿಅ(ಉಪ–1)/ಪಿಬಿ/4318/2025–26, ದಿ: 09.01.2026 (ಪ್ರವರ್ಗ 2ಎ ಗೆ ಮೀಸಲು)	7	ರೂ. 26,47,639/- ರೂ. 26,700/-	19.01.2026 ಸಂಜೆ 5.00 ಗಂಟೆವರೆಗೆ	20.01.2026 ಸಂಜೆ 5.15 ಗಂಟೆಯ ನಂತರ
						ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ ಪಶ್ಚಿಮ–1)

ಮುಖ್ಯ ಅಭಿಯಂತರರವರ ಕಚೇರಿ (ಉತ್ತರ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
8	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/3256/2025–26, ದಿ: 08.01.2026	8	ರೂ. 16,46,852/- ರೂ. 41,200/-	20.01.2026 ಸಂಜೆ 5.00 ಗಂಟೆವರೆಗೆ	21.01.2026 ಸಂಜೆ 5.30 ಗಂಟೆಯ ನಂತರ
9		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/3258/2025–26, ದಿ: 08.01.2026	9	ರೂ. 78,46,196/- ರೂ. 1,57,000/-		
10		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/3260/2025–26, ದಿ: 08.01.2026	10	ರೂ. 23,22,459/- ರೂ. 50,500/-		
11		ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/3262/2025–26, ದಿ: 08.01.2026	11	ರೂ. 13,84,128/- ರೂ. 34,650/-		
						ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು. DIPR/CP/YC/4959/2025-26

ಸಾರ್ವಜನಿಕ ಪ್ರಕಟಣೆ

ದಿವಾಳಿ ಪ್ರಕ್ರಿಯೆಯಲ್ಲಿರುವ 'ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್' ಕಂಪನಿಗಾಗಿ 'ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮ್' ಅಡಿಯಲ್ಲಿ 'ಆಸಕ್ತಿಯ ಸೂಚನೆ' ಸಲ್ಲಿಕೆಗೆ ಆಹ್ವಾನ
ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 230 ಪ್ರಕಾರ

ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್ (ಕಾರ್ಪೊರೇಟ್ ಸಾಲಗಾರ) ಪ್ರಸ್ತುತ ದಿವಾಳಿತನ ಮತ್ತು ಪಾಪರುಗಿರಿ ಸಂಹಿತೆ, 2016ರ ನಿಬಂಧನೆಗಳ ಪ್ರಕಾರ ದಿವಾಳಿತನ ವ್ಯವಹರಣೆಗಳನ್ನು ಎದುರಿಸುತ್ತಿದೆ ಮತ್ತು ಈ ಸಂಬಂಧ, ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ, ಬೆಂಗಳೂರು ಇದರ 30.10.2025 ದಿನಾಂಕದ ಆದೇಶದ ಪ್ರಕಾರ ಈ ಕೆಳಗೆ ಸಹಿ ಮಾಡಿರುವವರು ಸಮಾಪಕ (ಲಿಕ್ವಿಡೇಟರ್) ಎಂದು ನೇಮಕಗೊಂಡಿದ್ದಾರೆ.
ಆಸಕ್ತರು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 230 ಅಡಿಯಲ್ಲಿ ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮನ್ನು ಸಲ್ಲಿಸಲು ತಮ್ಮ ಆಸಕ್ತಿಯ ಪ್ರಸ್ತಾಪವನ್ನು ಸಲ್ಲಿಸಬಹುದು ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಸಂಬಂಧಿತ ವಿವರಗಳು		
1.	ಕಾರ್ಪೊರೇಟ್ ಸಾಲಗಾರ ಕಂಪನಿಯ ಹೆಸರು	ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್
2.	ಕಾರ್ಪೊರೇಟ್ ಸಾಲಗಾರ ಕಂಪನಿ ರಚನೆಯಾದ ದಿನಾಂಕ	21ನೇ ಮಾರ್ಚ್ 2022
3.	ಯಾವ ಪ್ರಾಧಿಕಾರದ ಅನುಮತಿಯೊಂದಿಗೆ ಕಾರ್ಪೊರೇಟ್ ಸಾಲಗಾರ ಕಂಪನಿಯ ರಚನೆ/ನೋಂದಣಿ ಆಗಿದೆ	ಕಂಪನಿಗಳ ಕಾಯ್ದೆ 2013ರ ಅಡಿಯಲ್ಲಿ ನೋಂದಾಯಿಸಲಾಗಿದೆ ಕಂಪನಿಗಳ ರಿಜಿಸ್ಟ್ರಾರ್, ಕರ್ನಾಟಕ
4.	ಕಾರ್ಪೊರೇಟ್ ಗುರುತಿನ ಸಂಖ್ಯೆ (ಸಿಐಎನ್)	U51909KA2022PTC159010
5.	ಕಾರ್ಪೊರೇಟ್ ಸಾಲಗಾರ ಕಂಪನಿಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದರೆ) ವಿಳಾಸ	ನಂ. 1207/343, 9ನೇ ಮುಖ್ಯರಸ್ತೆ, 7ನೇ ವಲಯ, ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು– 560 102
6.	ಕಾರ್ಪೊರೇಟ್ ಸಾಲಗಾರ ಕಂಪನಿಯ ದಿವಾಳಿತನ ಪರಿಹಾರ ಪ್ರಕ್ರಿಯೆಯ ಪ್ರಾರಂಭವಾದ ದಿನಾಂಕ	30ನೇ ಅಕ್ಟೋಬರ್ 2025
7.	ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮ್ ಪ್ರಸ್ತಾಪಿಸುವ ಆಸಕ್ತಿಯ ಅಭಿವ್ಯಕ್ತಿ (EOI) ಗೆ ಆಹ್ವಾನ ನೀಡಿದ ದಿನಾಂಕ	12ನೇ ಜನವರಿ 2026
8.	(EOI) ಸ್ವೀಕರಿಸಲು ಕೊನೆಯ ದಿನಾಂಕ	27ನೇ ಜನವರಿ 2026
9.	ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮ್ ಸಲ್ಲಿಸಲು ಕೊನೆಯ ದಿನಾಂಕ	28ನೇ ಫೆಬ್ರವರಿ 2026
10.	ಲಿಕ್ವಿಡೇಟರಾಗಿ ಕಾರ್ಯನಿರ್ವಹಿಸುವ ದಿವಾಳಿತನ ವೃತ್ತಿಪರರ ಹೆಸರು ಮತ್ತು ನೋಂದಣಿ ಸಂಖ್ಯೆ	ಬೆಲೆಯೂರ್ ರೆಸೊಲ್ಯೂಶನ್ಸ್ ಪ್ರೈವೇಟ್ ಲಿಮಿಟೆಡ್, ಶ್ರೀ ರವೀಂದ್ರ ಬೆಳೆಯೂರ್ ಇವರಿಂದ ಪ್ರತಿನಿಧಿಸುತ್ತದೆ. ರಿ.ಸಂಖ್ಯೆ: IBBI Reg No: IBBI/IPE-0163/IPA-1/2023-24/50073
11.	ಪತ್ರವ್ಯವಹಾರಗಳಿಗಾಗಿ ಸಮಾಪಕರ ವಿಳಾಸ ಮತ್ತು ಇಮೇಲ್	ಬೆಲೆಯೂರ್ ರೆಸೊಲ್ಯೂಶನ್ಸ್ ಪ್ರೈವೇಟ್ ಲಿಮಿಟೆಡ್ 'ಶ್ರೀವತ್ಸ' ನಂ. 428, 19ನೇ ಬಿ ಕ್ರಾಸ್ ರೋಡ್, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 ದೂರವಾಣಿ: +91 80 26540193 ಇಮೇಲ್: cirp.shapos.farms@beleyur.com

ಟಿಪ್ಪಣಿ:
1. ಈ ಜಾಹೀರಾತಿನ ಮತ್ತು ಪ್ರಕ್ರಿಯೆ ದಾಖಲೆಯ ಯಾವುದೇ ಕರಾರುಗಳನ್ನು ಯಾವುದೇ ಕಾರಣ ಮತ್ತು ಯಾವುದೇ ಹೊಣೆಗಾರಿಕೆ ಇಲ್ಲದೆ ರದ್ದುಗೊಳಿಸುವ, ಅಥವಾ ತಿದ್ದುಪಡಿ ಮಾಡುವ ಹಕ್ಕನ್ನು ಸಮಾಪಕರು ಕಾಯ್ದಿರಿಸಿಕೊಂಡಿರುತ್ತಾರೆ.
2. ಯಾವುದೇ ಹಂತದಲ್ಲಿಯೂ, ಅಗತ್ಯವಿದ್ದರೆ, ಸೆಕ್ಷನ್ 230 ರ ಅಡಿಯಲ್ಲಿ ಸ್ಕೀಮ್ ಸಲ್ಲಿಕೆ ಆಹ್ವಾನವನ್ನು ಹಿಂಪಡೆಯುವ ಮತ್ತು/ಅಥವಾ ಅದರ ಯಾವುದೇ ಭಾಗವನ್ನು ಬದಲಿಸುವ ಅಥವಾ ಮಾರ್ಪಡಿಸುವ ಹಕ್ಕನ್ನು ಸಮಾಪಕರು ಕಾಯ್ದಿರಿಸಿಕೊಂಡಿರುತ್ತಾರೆ.
3. ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮನ್ನು ಪ್ರಸ್ತಾಪಿಸುವ ಅರ್ಜಿದಾರರು: ಅದು 'ಎಲ್ಲಿದ್ದರೆ ಅಲ್ಲೇ', 'ಹೇಗಿದ್ದರೆ ಹಾಗೇ', 'ಎಷ್ಟಿದೆಯೋ ಅಷ್ಟೇ' ಮತ್ತು 'ಯಾವುದೇ ಪರಿಹಾರವಿಲ್ಲ' ಎಂಬ ಆಧಾರದ ಮೇಲೆ ಪ್ರಸ್ತಾಪಿಸಬೇಕು.
4. ಸಮಾಪಕರು ಯಾವುದೇ ರೀತಿಯಲ್ಲೂ ಕಂಪನಿಯನ್ನು ಪ್ರತಿನಿಧಿಸುವುದಿಲ್ಲ ಅಥವಾ ಕಂಪನಿಗಾಗಿ ಯಾವುದೇ ವಾರಂಟಿ ನೀಡುವುದಿಲ್ಲ.
5. ಇದು ಆಫರ್ ಡಾಕ್ಯುಮೆಂಟ್ ಅಲ್ಲ ಮತ್ತು ಇದರಿಂದ ಯಾವುದೇ ಬದ್ಧತೆ ಉಂಟಾಗುವುದಿಲ್ಲ.

ದಿನಾಂಕ: 10.01.2026
ಸ್ಥಳ: ಬೆಂಗಳೂರು
ಸಹಿ/– (ರವೀಂದ್ರ ಬೆಳೆಯೂರ್)
ಶಾಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್‌ನ, ದಿವಾಳಿತನ ಪ್ರಕ್ರಿಯೆಯಲ್ಲಿನ ಲಿಕ್ವಿಡೇಟರ್

ಸಾರ್ವಜನಿಕ ಪ್ರಕಟಣೆ

ದಿವಾಳಿ ಪ್ರಕ್ರಿಯೆಯಲ್ಲಿರುವ 'ಎಸ್.ಎಸ್.ಜೆ.ವಿ. ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್' ಕಂಪನಿಗಾಗಿ 'ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮ್' ಅಡಿಯಲ್ಲಿ 'ಆಸಕ್ತಿಯ ಸೂಚನೆ' ಸಲ್ಲಿಕೆಗೆ ಆಹ್ವಾನ
ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 230 ಪ್ರಕಾರ

ಎಸ್.ಎಸ್.ಜೆ.ವಿ. ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ (ಕಾರ್ಪೊರೇಟ್ ಸಾಲಗಾರ) ಪ್ರಸ್ತುತ ದಿವಾಳಿತನ ಮತ್ತು ಪಾಪರುಗಿರಿ ಸಂಹಿತೆ, 2016ರ ನಿಬಂಧನೆಗಳ ಪ್ರಕಾರ ದಿವಾಳಿತನ ವ್ಯವಹರಣೆಗಳನ್ನು ಎದುರಿಸುತ್ತಿದೆ ಮತ್ತು ಈ ಸಂಬಂಧ, ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ, ಬೆಂಗಳೂರು ಇದರ 27.11.2025 ದಿನಾಂಕದ ಆದೇಶದ ಪ್ರಕಾರ ಈ ಕೆಳಗೆ ಸಹಿ ಮಾಡಿರುವವರು ಸಮಾಪಕ (ಲಿಕ್ವಿಡೇಟರ್) ಎಂದು ನೇಮಕಗೊಂಡಿದ್ದಾರೆ.
ಆಸಕ್ತರು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 230 ಅಡಿಯಲ್ಲಿ ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮನ್ನು ಸಲ್ಲಿಸಲು ತಮ್ಮ ಆಸಕ್ತಿಯ ಪ್ರಸ್ತಾಪವನ್ನು ಸಲ್ಲಿಸಬಹುದು ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಸಂಬಂಧಿತ ವಿವರಗಳು		
1.	ಕಾರ್ಪೊರೇಟ್ ಸಾಲಗಾರ ಕಂಪನಿಯ ಹೆಸರು	ಎಸ್.ಎಸ್.ಜೆ.ವಿ. ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್
2.	ಕಾರ್ಪೊರೇಟ್ ಸಾಲಗಾರ ಕಂಪನಿ ರಚನೆಯಾದ ದಿನಾಂಕ	10ನೇ ಆಗಸ್ಟ್, 1998
3.	ಯಾವ ಪ್ರಾಧಿಕಾರದ ಅನುಮತಿಯೊಂದಿಗೆ ಕಾರ್ಪೊರೇಟ್ ಸಾಲಗಾರ ಕಂಪನಿಯ ರಚನೆ/ನೋಂದಣಿ ಆಗಿದೆ	ಕಂಪನಿಗಳ ಕಾಯ್ದೆ 1956ರ ಅಡಿಯಲ್ಲಿ ನೋಂದಾಯಿಸಲಾಗಿದೆ ಕಂಪನಿಗಳ ರಿಜಿಸ್ಟ್ರಾರ್, ಕರ್ನಾಟಕ
4.	ಕಾರ್ಪೊರೇಟ್ ಗುರುತಿನ ಸಂಖ್ಯೆ (ಸಿಐಎನ್)	U45203KA1998PTC024063
5.	ಕಾರ್ಪೊರೇಟ್ ಸಾಲಗಾರ ಕಂಪನಿಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದರೆ) ವಿಳಾಸ	ನಂ. 21/6, ನೆಲ ಮಹಡಿ, ಕ್ರೇಗ್ ಪಾರ್ಕ್ ಲೇಔಟ್, ಎಂ.ಜಿ. ರಸ್ತೆ, ಬೆಂಗಳೂರು – 560 001.
6.	ಕಾರ್ಪೊರೇಟ್ ಸಾಲಗಾರ ಕಂಪನಿಯ ದಿವಾಳಿತನ ಪರಿಹಾರ ಪ್ರಕ್ರಿಯೆಯ ಪ್ರಾರಂಭವಾದ ದಿನಾಂಕ	27ನೇ ನವಂಬರ್ 2025
7.	ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮ್ ಪ್ರಸ್ತಾಪಿಸುವ ಆಸಕ್ತಿಯ ಅಭಿವ್ಯಕ್ತಿ (EOI) ಗೆ ಆಹ್ವಾನ ನೀಡಿದ ದಿನಾಂಕ	12ನೇ ಜನವರಿ 2026
8.	(EOI) ಸ್ವೀಕರಿಸಲು ಕೊನೆಯ ದಿನಾಂಕ	27ನೇ ಜನವರಿ 2026
9.	ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮ್ ಸಲ್ಲಿಸಲು ಕೊನೆಯ ದಿನಾಂಕ	28ನೇ ಫೆಬ್ರವರಿ 2026
10.	ಲಿಕ್ವಿಡೇಟರಾಗಿ ಕಾರ್ಯನಿರ್ವಹಿಸುವ ದಿವಾಳಿತನ ವೃತ್ತಿಪರರ ಹೆಸರು ಮತ್ತು ನೋಂದಣಿ ಸಂಖ್ಯೆ	ರವೀಂದ್ರ ಬೆಳೆಯೂರ್ Reg. No. IBBI/IPA-001/IP-P00189/2017-18/10368
11.	ಪತ್ರವ್ಯವಹಾರಗಳಿಗಾಗಿ ಸಮಾಪಕರ ವಿಳಾಸ ಮತ್ತು ಇಮೇಲ್	ನಂ. 428, 19ನೇ ಬಿ ಕ್ರಾಸ್ ರೋಡ್, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 ದೂರವಾಣಿ: +91 80 26540193 ಇಮೇಲ್: CIRP.SSJV@gmail.com

ಟಿಪ್ಪಣಿ:
1. ಈ ಜಾಹೀರಾತಿನ ಮತ್ತು ಪ್ರಕ್ರಿಯೆ ದಾಖಲೆಯ ಯಾವುದೇ ಕರಾರುಗಳನ್ನು ಯಾವುದೇ ಕಾರಣ ಮತ್ತು ಯಾವುದೇ ಹೊಣೆಗಾರಿಕೆ ಇಲ್ಲದೆ ರದ್ದುಗೊಳಿಸುವ, ಅಥವಾ ತಿದ್ದುಪಡಿ ಮಾಡುವ ಹಕ್ಕನ್ನು ಸಮಾಪಕರು ಕಾಯ್ದಿರಿಸಿಕೊಂಡಿರುತ್ತಾರೆ.
2. ಯಾವುದೇ ಹಂತದಲ್ಲಿಯೂ, ಅಗತ್ಯವಿದ್ದರೆ, ಸೆಕ್ಷನ್ 230 ರ ಅಡಿಯಲ್ಲಿ ಸ್ಕೀಮ್ ಸಲ್ಲಿಕೆ ಆಹ್ವಾನವನ್ನು ಹಿಂಪಡೆಯುವ ಮತ್ತು/ಅಥವಾ ಅದರ ಯಾವುದೇ ಭಾಗವನ್ನು ಬದಲಿಸುವ ಅಥವಾ ಮಾರ್ಪಡಿಸುವ ಹಕ್ಕನ್ನು ಸಮಾಪಕರು ಕಾಯ್ದಿರಿಸಿಕೊಂಡಿರುತ್ತಾರೆ.
3. ಕಾಂಪ್ರಮೈಸ್ ಅಥವಾ ಅರೇಂಜ್ಮೆಂಟ್ ಸ್ಕೀಮನ್ನು ಪ್ರಸ್ತಾಪಿಸುವ ಅರ್ಜಿದಾರರು: ಅದು 'ಎಲ್ಲಿದ್ದರೆ ಅಲ್ಲೇ', 'ಹೇಗಿದ್ದರೆ ಹಾಗೇ', 'ಎಷ್ಟಿದೆಯೋ ಅಷ್ಟೇ' ಮತ್ತು 'ಯಾವುದೇ ಪರಿಹಾರವಿಲ್ಲ' ಎಂಬ ಆಧಾರದ ಮೇಲೆ ಪ್ರಸ್ತಾಪಿಸಬೇಕು.
4. ಸಮಾಪಕರು ಯಾವುದೇ ರೀತಿಯಲ್ಲೂ ಕಂಪನಿಯನ್ನು ಪ್ರತಿನಿಧಿಸುವುದಿಲ್ಲ ಅಥವಾ ಕಂಪನಿಗಾಗಿ ಯಾವುದೇ ವಾರಂಟಿ ನೀಡುವುದಿಲ್ಲ.
5. ಇದು ಆಫರ್ ಡಾಕ್ಯುಮೆಂಟ್ ಅಲ್ಲ ಮತ್ತು ಇದರಿಂದ ಯಾವುದೇ ಬದ್ಧತೆ ಉಂಟಾಗುವುದಿಲ್ಲ.

ದಿನಾಂಕ: 10.01.2026
ಸ್ಥಳ: ಬೆಂಗಳೂರು
ಸಹಿ/– (ರವೀಂದ್ರ ಬೆಳೆಯೂರ್)
ಎಸ್.ಎಸ್.ಜೆ.ವಿ. ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ, ದಿವಾಳಿತನ ಪ್ರಕ್ರಿಯೆಯಲ್ಲಿನ ಲಿಕ್ವಿಡೇಟರ್

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಈಗ ಸದ್ಯ ಇರೋ ಜಾತಿಗಳೆರಡೇ ಎರಡು: ದುಡ್ಡಿರೋವ್ರು, ದುಡ್ಡಿಲ್ಲೋರು ಅಂತ.

–ಟಿ.ಪಿ. ಕೈಲಾಸಂ

ಸಂಪಾದಕೀಯ

ಐ-ಪ್ಯಾಕ್: ಇ.ಡಿ. ದಾಳಿ ನಿರೀಕ್ಷಿತ ಮಮತಾ ಪ್ರತಿಕ್ರಿಯೆ ಅನಿರೀಕ್ಷಿತ

ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಗಳು ಸನ್ನಿಹಿತವಾಗಿರುವ ಸಮಯದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ.) ರಂಗಪ್ರವೇಶಿಸಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಹಾಗೂ ಕೇಂದ್ರ ತನಿಖಾದಳದ ನಡುವೆ ಸಂಘರ್ಷ ಆರಂಭಗೊಂಡಿದ್ದು, ಮುಂದಿನ ದಿನಗಳಲ್ಲಿ ಆ ತಿಕ್ಕಾಟ ತೀವ್ರ ಸ್ವರೂಪ ಪಡೆಯಲಿದೆ. ಕಳೆದ ವಾರ ನಡೆದ ನಾಟಕೀಯ ಬೆಳವಣಿಗೆಯಲ್ಲಿ, ಕೋಲ್ಕತ್ತದಲ್ಲಿನ 'ಇಂಡಿಯನ್ ಪೊಲಿಟಿಕಲ್ ಆ್ಯಕ್ಷನ್ ಕಮಿಟಿ' (ಐ-ಪ್ಯಾಕ್) ಕಚೇರಿಯ ಮೇಲೆ 'ಇ.ಡಿ.' ದಾಳಿ ನಡೆಸಿತು. ಮುಂಬರುವ ಚುನಾವಣೆಯಲ್ಲಿ ಟಿಎಂಸಿ ಅನುಸರಿಸಬೇಕಾದ ಕಾರ್ಯತಂತ್ರಗಳಿಗೆ ಸಂಬಂಧಿಸಿದಂತೆ ಐ-ಪ್ಯಾಕ್ ಸಲಹೆಗಳನ್ನು ನೀಡುತ್ತಿದೆ. ದಾಳಿಯ ಸಂದರ್ಭದಲ್ಲಿ ಮಧ್ಯಪ್ರವೇಶಿಸಿರುವ ಮಮತಾ ಬ್ಯಾನರ್ಜಿ, 'ಸೂಕ್ಷ್ಮ' ಎಂದು ಹೇಳಲಾಗಿರುವ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಕೆಲವು ಕಡತಗಳನ್ನೂ ಕೊಂಡೊಯ್ದಿದ್ದಾರೆ. ಪಕ್ಷದ ಕಾರ್ಯತಂತ್ರಕ್ಕೆ ಸಂಬಂಧಿಸಿದ ವಿವರಗಳು ಹಾಗೂ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಅಳಿಸಿಹಾಕುತ್ತಿರುವ ಮತದಾರರ ವಿವರಗಳನ್ನು ಒಳಗೊಂಡ ಮಾಹಿತಿಯು ಆ ಕಡತಗಳಲ್ಲಿದೆ ಎಂದು ಮಮತಾ ಹೇಳಿದ್ದಾರೆ. ಪ್ರಜಾಪ್ರಭುತ್ವದ ಮೇಲಿನ ದಾಳಿ ಎಂದು ಇ.ಡಿ. ಕಾರ್ಯಾಚರಣೆಯನ್ನು ವಿಶ್ಲೇಷಿಸಿರುವ ಅವರು, ಕೇಂದ್ರ ಸರ್ಕಾರ ಮತ್ತು ಇ.ಡಿ. ವಿರುದ್ಧ ಪ್ರತಿಭಟನಾ ಮೆರವಣಿಗೆಯನ್ನು ಮುನ್ನಡೆಸಿದ್ದಾರೆ. ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಿವಾಸದವರೆಗೂ ಟಿಎಂಸಿ ಬೆಂಬಲಿಗರು ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ಪ್ರಸ್ತುತ, ನೆರವಿಗಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವ ಇ.ಡಿ., ತನ್ನ ಕಾರ್ಯಾಚರಣೆಗೆ ಟಿಎಂಸಿ ಅಡ್ಡಿ ಉಂಟುಮಾಡುತ್ತಿದೆ ಎಂದು ಆಪಾದಿಸಿದೆ. ವಿಚಾರಣೆ ಸಂದರ್ಭದಲ್ಲಿ ತನ್ನ ನಿಲುವನ್ನೂ ಆಲಿಸುವಂತೆ ಟಿಎಂಸಿ ಕೂಡ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ದಾಳಿಗೆ ಸಂಬಂಧಿಸಿದಂತೆ ಇ.ಡಿ.ಯ ಅಪರಿಚಿತ ಅಧಿಕಾರಿಗಳು ಹಾಗೂ ಸಿಆರ್‌ಪಿಎಫ್ ಸಿಬ್ಬಂದಿಯ ವಿರುದ್ಧ ಮಮತಾ ಅವರು ದಾಖಲಿಸಿರುವ ದೂರಿನ ಹಿನ್ನೆಲೆಯಲ್ಲಿ ಪೊಲೀಸ್ ತನಿಖೆಯೂ ನಡೆಯುತ್ತಿದೆ.



ಪಶ್ಚಿಮ ಬಂಗಾಳದಲ್ಲಿನ ಜಾರಿ ನಿರ್ದೇಶನಾಲಯದ ದಾಳಿಯ ಹಿಂದೆ ರಾಜಕೀಯ ಉದ್ದೇಶಗಳಿರುವ ಶಂಕೆ ಸಹಜವಾದುದು. ಆದರೆ, ಆ ದಾಳಿಗೆ ಮಮತಾ ಬ್ಯಾನರ್ಜಿ ಪ್ರತಿಕ್ರಿಯೆ ಹಿಂದೆಂದೂ ಘಟಿಸದೆ ಇರುವಂತಹದ್ದು.

ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ದಾಳಿ ನಡೆದಿದೆ ಎಂದು ಇ.ಡಿ. ಹೇಳುತ್ತಿದ್ದರೂ, ಕಾರ್ಯಾಚರಣೆ ನಡೆದಿರುವ ಸಮಯ ಅನುಮಾನಕ್ಕೆ ಕಾರಣವಾಗುವಂತಿದೆ. ಕಠಿಣ ನಿಬಂಧನೆಗಳನ್ನು ಹೊಂದಿರುವ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಶೋಧ ನಡೆಸಲಾಗಿದೆ. ಆದರೆ, ಇ.ಡಿ.ಯನ್ನು ಬಳಸಿಕೊಂಡು ತನ್ನ ಚುನಾವಣಾ ಪ್ರಚಾರಕ್ಕೆ ಅಡ್ಡಿ ಉಂಟುಮಾಡಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಮಮತಾ ಆಪಾದಿಸಿದ್ದಾರೆ. ಟಿಎಂಸಿ ಮತ್ತು ರಾಜ್ಯ ಸರ್ಕಾರಕ್ಕೆ ಮುಜುಗರ ಉಂಟುಮಾಡುವ ಹಾಗೂ ಚುನಾವಣೆಗೆ ಸಂಬಂಧಿಸಿದ ಪಕ್ಷದ ಕಾರ್ಯತಂತ್ರವನ್ನು ತಿಳಿದುಕೊಳ್ಳುವ ಉದ್ದೇಶದಿಂದ ವರ್ಷಗಳ ಹಿಂದಿನ ಪ್ರಕರಣಕ್ಕೆ ಚುನಾವಣೆಗಳು ಸನ್ನಿಹಿತವಾಗಿರುವ ಸಂದರ್ಭದಲ್ಲಿ ಜೀವ ನೀಡಲಾಗಿದೆ ಎಂದೂ ದೂರಿದ್ದಾರೆ.

ತನಿಖಾ ಸಂಸ್ಥೆಯ ದುರುಪಯೋಗ ನಡೆದಿದೆ ಎನ್ನುವ ಟಿಎಂಸಿ ಆರೋಪ ನಿರಾಧಾರವಾದುದೇನೂ ಅಲ್ಲ. ಚುನಾವಣೆ ಅಥವಾ ರಾಜಕೀಯ ಉದ್ದೇಶಗಳಿಗಾಗಿ ತನಿಖಾ ಸಂಸ್ಥೆಗಳು ಬಳಕೆ ಆಗಿರುವ ಸುದೀರ್ಘ ಇತಿಹಾಸವೇ ಇದೆ. ಹಿಂದಿನ ಸರ್ಕಾರಗಳಿಂದಲೂ ಈ ದುರುಪಯೋಗ ನಡೆದಿದೆ. ಆದರೆ, ಈಗಿನ ಸರ್ಕಾರ ವಿರೋಧ ಪಕ್ಷಗಳ ನಾಯಕರನ್ನು ಹತ್ತಿಕ್ಕಲು, ಮುಖ್ಯವಾಗಿ ಆ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿನ ನಾಯಕರ ವಿರುದ್ಧ ತನ್ನ ನಿಯಂತ್ರಣದಲ್ಲಿರುವ ತನಿಖಾ ಸಂಸ್ಥೆಗಳನ್ನು ಇನ್ನಿಲ್ಲದಂತೆ ಬಳಸುತ್ತಿದೆ. ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ಎಲ್ಲ ರಾಜ್ಯಗಳಲ್ಲೂ, ವಿಧಾನಸಭಾ ಚುನಾವಣೆಗೆ ಮೊದಲು ಆ ಪಕ್ಷಗಳ ನಾಯಕರಿಗೆ ಕಿರುಕುಳ ನೀಡಲಾಗಿದೆ. ತನಿಖೆಗೆ ಒಳಗಾದವರಿಗೆ ತಮ್ಮ ನಿರಪರಾಧಿತ್ವವನ್ನು ಸಾಬೀತುಪಡಿಸುವ ಅವಕಾಶ ಇದ್ದೇಇದೆ ಎಂದು ವಾದಿಸಬಹುದಾದರೂ, ಈ ಪ್ರಕರಣಗಳು ವರ್ಷಗಟ್ಟಲೆ ಮುಂದುವರಿಯುವುದನ್ನು ಗಮನಿಸಬೇಕು. ಇಂಥ ಪ್ರಕರಣಗಳಲ್ಲಿ ಶಿಕ್ಷೆ ಆಗಿರುವ ಪ್ರಮಾಣವೂ ಕಡಿಮೆ. ಈ ಹಿನ್ನೆಲೆಯಲ್ಲಿಯೇ ಐ-ಪ್ಯಾಕ್ ಮೇಲಿನ ಇ.ಡಿ. ದಾಳಿಯನ್ನು ಗಮನಿಸಬೇಕಾಗಿದೆ. ಪ್ರಸಕ್ತ ದಾಳಿಗೆ ಸಂಬಂಧಿಸಿದಂತೆ, ಮಮತಾ ಬ್ಯಾನರ್ಜಿ ಅವರ ಪ್ರತಿಕ್ರಿಯೆ ಅಸಾಮಾನ್ಯ ಹಾಗೂ ಹಿಂದೆಂದೂ ನಡೆದಿರದಂತಹದ್ದು. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದ ಸಂಸ್ಥೆಯೊಂದು ನಡೆಸುವ ದಾಳಿಗೆ ಮುಖ್ಯಮಂತ್ರಿಯೊಬ್ಬರು ಅಡ್ಡಿಪಡಿಸಿರುವ ವಿದ್ಯಮಾನ, ರಾಜಕೀಯ ಮತ್ತು ಕಾನೂನಿಗೆ ಸಂಬಂಧಿಸಿದ ವಿಷಯಗಳು ಮಾತ್ರವಲ್ಲದೆ ಸಾಂವಿಧಾನಿಕ ಸಂಗತಿಗಳನ್ನೂ ಒಳಗೊಂಡಿದೆ.

ವಿಘ್ನ ಸಂತೋಷ



ಭಾರತದ ಆರ್ಥಿಕ ವ್ಯವಸ್ಥೆ ಹಿಂಜರಿಕೆ ಕಾಣುತ್ತದೆ. ಲಕ್ಷಾಂತರ ಉದ್ಯೋಗಗಳ ನಷ್ಟವಾಗುತ್ತದೆ. ದೇಶ ಆರ್ಥಿಕ ಬಿಕ್ಕಟ್ಟು ಎದುರಿಸುತ್ತದೆ ಎಂಬ ಭವಿಷ್ಯ ಹೇಳುತ್ತಿರುವ ಹೆಚ್ಚಿನ ಹೇಳಿಕೆಗಳಲ್ಲಿ ಕಳವಳಕಾರಿ ಭಾವನೆಗಿಂತ ಒಂದು ರೀತಿಯ ವಿಘ್ನ ಸಂತೋಷದ ಭಾವನೆ ಯಾಕೆ ಕಾಣಿಸುತ್ತದೆ!?

ಕಿರಣ್ ಕೊಡ್ಲಾಡಿ, 'ಎಕ್ಸ್'ನಿಂದ

ಕಿಡಿನುಡಿ



ಬಿಜೆಪಿಯವರು ಪಾದಯಾತ್ರೆ ಮಾಡುವ ಉದ್ದೇಶವಾದರೂ ಏನು? ಬಳ್ಳಾರಿಯಲ್ಲಿ ವಾಲ್ಮೀಕಿ ಪ್ರತಿಮೆ ಉದ್ಘಾಟನೆಯ ಬ್ಯಾನರ್ ಹಾಕಿದ್ದನ್ನು ತೆಗೆದವರು ಯಾರು? ಅದನ್ನು ತೆಗೆಯಬೇಕಾದ ಅಗತ್ಯವೇನಿತ್ತು? ಬ್ಯಾನರ್ ತೆಗೆಯದೇ ಇದ್ದಿದ್ದರೆ ಪ್ರಚೋದನೆ ಎಲ್ಲಿ ಆಗುತ್ತಿತ್ತು?

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 12-1-2001

• ಉದ್ಯಮಿ ಸುಬ್ಬರಾಜು ಕೊಲೆ: ಆರೋಪಿಗಳ ಬಂಧನ

ಬೆಂಗಳೂರು, ಜ. 11– ನಗರದ ರಿಯಲ್ ಎಸ್ಟೇಟ್ ಉದ್ಯಮಿ ಸುಬ್ಬರಾಜು ಅವರನ್ನು ಗುಂಡಿಕ್ಕಿ ಕೊಂದ ಪ್ರಕರಣದ ಇಬ್ಬರು ಪ್ರಮುಖ ಆರೋಪಿಗಳನ್ನು ಮುಂಬೈನಲ್ಲಿ ವಶಕ್ಕೆ ತೆಗೆದುಕೊಂಡು ಬಂಧಿಸುವಲ್ಲಿ ನಗರ ಪೊಲೀಸರು ಯಶಸ್ವಿಯಾಗಿದ್ದಾರೆ.

ಬಂಧನಕ್ಕೊಳಗಾಗಿರುವ ಸೈಯದ್ ಹಾಗೂ ಆರೀಫ್ ಭೂಗತ ಜಗತ್ತಿನ ಮುತ್ತಪ್ಪ ರೈ ಹಾಗೂ ಆತನ ಬಲಗೈ ಬಂಟ ಬನ್ನಂಜೆ ರಾಜನ ಆದೇಶದಂತೆ ಈ ಕೊಲೆ ಯೋಜಿಸಿದ್ದು, ಬಾಡಿಗೆ ಹಂತಕರ ಸಹಾಯದಿಂದ ಕೊಲೆ ಮಾಡಿಸಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

• ಗುಜರಾತ್‌ಗೆ ರಾಜ್ಯದ ಮೆಕ್ಕೆಜೋಳ

ನವದೆಹಲಿ, ಜ. 11– ಕರ್ನಾಟಕದಿಂದ ನಾಲ್ಕು ಲಕ್ಷ ಕ್ವಿಂಟಲ್ ಮೆಕ್ಕೆಜೋಳವನ್ನು ಗುಜರಾತ್ ಸರ್ಕಾರ ಖರೀದಿ ಮಾಡಲಿದೆ.

ಮುಂದಿನ ಎಂಟು ತಿಂಗಳ ಅವಧಿಯಲ್ಲಿ ಈ ಖರೀದಿ ನಡೆಯಲಿದ್ದು, ಮೊದಲ ಹಂತದಲ್ಲಿ 50 ಸಾವಿರ ಕ್ವಿಂಟಲ್ ಮೆಕ್ಕೆಜೋಳವನ್ನು ಖರೀದಿಸಲು ಗುಜರಾತ್ ರಾಜ್ಯದ ಮುಖ್ಯ ಕಾರ್ಯದರ್ಶಿ ಪಿ.ಕೆ. ಲಹರಿ ಇಂದು ಸಮ್ಮತಿ ಸೂಚಿಸಿದರು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಖಾತೆಯ ರಾಜ್ಯ ಸಚಿವ ಡಿ.ಬಿ. ಇನಾಂದಾರ್ ಅವರು ಇಂದು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

75 ವರ್ಷಗಳ ಹಿಂದೆ

ಶುಕ್ರವಾರ, 12-1-1951

• ಕಾಮನ್‌ವೆಲ್ತ್ ಸಲಹೆಗಳಿಗೆ ಅಮೆರಿಕ ಒಪ್ಪಿಗೆ

ಲೇಕ್‌ಸಕ್ಸಸ್, ಜ. 11– ದೂರಪ್ರಾಚ್ಯದ ಸಮಸ್ಯಾ ಪರಿಹಾರಾರ್ಥವಾಗಿ ಬ್ರಿಟನ್, ಅಮೆರಿಕ, ರಷ್ಯಾ ಮತ್ತು ಕೆಂಪುಚೀಣ ರಾಷ್ಟ್ರಗಳು ಸಭೆ ಸೇರಿ ಮಾತುಕತೆ ನಡೆಸಬೇಕೆಂದು ಲಂಡನ್ನಿನಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ಮಾಡಿರುವ ನೂತನ ಸಲಹೆಗೆ ಅಮೆರಿಕವು ಅನುಕೂಲಪ್ರದ ರೀತಿಯಲ್ಲಿ ಉತ್ತರವಿತ್ತಿದೆಯೆಂದು ಪಿಟಿಐ ಪ್ರತಿನಿಧಿ ವರದಿ ಮಾಡಿದ್ದಾರೆ.

ಕಾಮನ್‌ವೆಲ್ತ್ ಪ್ರಧಾನಿಗಳಿಂದ ಸೂಚಿಸಲ್ಪಟ್ಟ ಈ ನೂತನ ಯೋಜನೆಯು ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಇಂದು ಪರಿಶೀಲಿಸಲ್ಪಡುವ ಸಂಭವವಿದೆ.

ಎಲ್ಲ ಧರ್ಮಗಳ 'ವಿವೇಕ'



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಕೆಲವರ ವಿಚಾರಧಾರೆಗೆ ಚಾರಿತ್ರಿಕ ಮಹತ್ವ ಇರುತ್ತದೆ. ಇನ್ನು ಕೆಲವರ ವಿಚಾರಧಾರೆಗೆ ಚಾರಿತ್ರಿಕ ಮಹತ್ವದ ಜೊತೆಜೊತೆಗೇ ಸಮಕಾಲೀನ ಪ್ರಸ್ತುತತೆಯೂ ಇರುತ್ತದೆ. ಈ ಪ್ರಸ್ತುತತೆಗೆ ಎರಡು ಕಾರಣಗಳು: ಒಂದು, ಅಂಥವರ ವಿಚಾರಧಾರೆಯಲ್ಲಿರುವ ದರ್ಶನಾತ್ಮಕ ಹಾಗೂ ಸಾರ್ವತ್ರಿಕ ಸತ್ಯದ ಸಂಗತಿಗಳು. ಎರಡು, ಅಂದಿನ ವಾಸ್ತವಗಳಿಗೆ ಹೋಲುವ ಸಾಮಾಜಿಕ ವಾತಾವರಣ ಇಂದಿನ ದಿನಮಾನದಲ್ಲೂ ಇರುವುದು. ವಿವೇಕಾನಂದರಂತಹ ದಾರ್ಶನಿಕರು ಎರಡು ಕಾರಣಗಳಿಂದಲೂ ಪ್ರಸ್ತುತರಾಗುತ್ತಾರೆ. ತಮ್ಮ ಆಧ್ಯಾತ್ಮಿಕ ಚಿಂತನೆಯ ಜೊತೆಜೊತೆಗೇ ಸಾಮಾಜಿಕ ಕಾಳಜಿಯ ಕರುಳ ಚಿಂತನೆಯಲ್ಲಿ ತೊಡಗುವ ಮೂಲಕ ವಿವೇಕಾನಂದರು ಸಮಕಾಲೀನರಾಗುತ್ತಾರೆ.

ಅಧ್ಯಾತ್ಮದ ಆಕಾಶಯಾನದಲ್ಲಿ ಸಂಭ್ರಮಿಸದೆ ಭೂಮಿಯ ಸಂಕಟಕ್ಕೆ ಸ್ಪಂದಿಸಿದ್ದು, ಪ್ರತಿಕ್ರಿಯಿಸಿದ್ದು, ಬದಲಾವಣೆ ಬಯಸಿದ್ದು ಇವರ ವ್ಯಕ್ತಿತ್ವದ ವಿಶೇಷ. 163 ವರ್ಷಗಳ ಹಿಂದೆ ಜನಿಸಿದ (ಜ.1,1863) ವಿವೇಕಾನಂದರನ್ನು ನೆನಪಿಸಿಕೊಳ್ಳಲು, ಧರ್ಮಕ್ಕೆ ಸಮಾನತೆಯ ಆಯಾಮ ಒದಗಿಸಿದ್ದು ಕೂಡ ಒಂದು ಮುಖ್ಯ ಕಾರಣ. ವಿವೇಕಾನಂದರು ಧರ್ಮದ ವಿಚಾರ ಮಾತಾಡುವಾಗ ಬಳಸುವ ಪರಿಭಾಷೆಯು ಧರ್ಮ ಮತ್ತು ಸಮಾಜಗಳನ್ನು ಒಟ್ಟಿಗೇ ಇಟ್ಟು ನೋಡುವ ಚಿಂತನೆಯ ಗತಿಬಿಂಬವಾಗಿದೆ. ಆ 'ಗತಿಬಿಂಬ'ದಲ್ಲಿ ಇಂದಿನ ಗಾಂಧಿ, ಅಂಬೇಡ್ಕರ್, ನೆಹರೂ, ಕುವೆಂಪು ಮುಂತಾದವರು ಕಾಣಿಸುವುದು ಸಮಕಾಲೀನ ಪ್ರಸ್ತುತತೆಯ ಸಂಕೇತವಾಗಿದೆ.

ಗಾಂಧೀಜಿಯವರು ವಿವೇಕಾನಂದರಂತೆಯೇ ಹಿಂದೂ ಧರ್ಮವನ್ನು ನಂಬಿಕೆಯ ನೆಲೆಯಾಗಿಸಿಕೊಂಡಿದ್ದವರು. ಆರಂಭದ ದಿನಗಳಲ್ಲಿದ್ದ ತಮ್ಮ ಜಡ ಸಾಮಾಜಿಕ ಚಿಂತನೆಗಳನ್ನು ತೊಡೆದು ಹೊರಬಂದವರು. ತನ್ನ ಎಲ್ಲ ಭಯಾನಕತೆಗಳಿಂದ ನಮಗೆ ಇವತ್ತು ಕಾಣಿಸುತ್ತಿರುವ ಜಾತಿಯನ್ನು ಶಾಸ್ತ್ರಗಳು ಪುರಸ್ಕರಿಸುವುದಾದರೆ, ನಾನು ನನ್ನನ್ನು ಹಿಂದೂವೆಂದು ಕರೆದುಕೊಂಡು ಅದರಲ್ಲಿ ಉಳಿಯಲಾರೆ ಎಂದು ಒಬ್ಬ ಪತ್ರಿಕಾ ವರದಿಗಾರರಿಗೆ ಸ್ಪಷ್ಟವಾಗಿ ಹೇಳಿದವರು(1936). ಎಲ್ಲಧರ್ಮಗಳನ್ನುಸಮದೃಷ್ಟಿಯಿಂದ ನೋಡಬೇಕು ಎಂದು ಪ್ರತಿಪಾದಿಸಿದವರು. ಇಬ್ಬರೂ ಧಾರ್ಮಿಕ ಸಹಿಷ್ಣುತೆಯ ಪ್ರತಿಪಾದಕರು ಮತ್ತು ಹಿಂದೂ ಧರ್ಮದ ಒಳ ವಿಮರ್ಶಕರು. ಪ್ರಪಂಚದ ಯಾವ ಧರ್ಮವೂ ಹಿಂದೂ ಧರ್ಮದಷ್ಟು ಭವ್ಯವಾಣಿಯಲ್ಲಿ ಮನುಷ್ಯತ್ವದ ಘನತೆಯನ್ನು ಬೋಧಿಸುವುದಿಲ್ಲ ಎಂದು ಮೆಚ್ಚುವ ವಿವೇಕಾನಂದರು ಅದೇ ಉಸಿರಿನಲ್ಲಿ ದೀನ ದಲಿತರ ಕುತ್ತಿಗೆಯನ್ನು ಹಿಂದೂ ಧರ್ಮದಲ್ಲಿ ಕ್ರೂರವಾಗಿ ತುಳಿಯಲಾಗುತ್ತಿದೆಯೆಂಬ ಅಂಶವನ್ನೂ ಹೇಳುತ್ತಾರೆ. ಅಂತೆಯೇ ತಪ್ಪು ಹಿಂದೂ ಧರ್ಮದ್ದಲ್ಲ, ಅಲ್ಲಿರುವ ಸಂಪ್ರದಾಯ ಶರಣರದು; ಪುರೋಹಿತರದು. ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಎಂದು ನಾನಾ ರೀತಿಯ ಕ್ರೂರ ವಿಧಾನಗಳನ್ನು ಸೃಷ್ಟಿಸುವ ಠಕ್ಕರದು ಎಂದು ನೇರವಾಗಿ ನುಡಿದಿದ್ದಾರೆ (ವಿವೇಕಾನಂದರ ಕೃತಿಶ್ರೇಣಿ, ಸಂಪುಟ-6).

ವಿವೇಕಾನಂದರು ಅಸ್ಪೃಶ್ಯತೆ ಹಾಗೂ ಜಾತಿ ವ್ಯವಸ್ಥೆಯನ್ನು ಸ್ಪಷ್ಟವಾಗಿ ವಿರೋಧಿಸಿದ್ದಾರೆ. ನಮ್ಮ ದೇಶದಲ್ಲಿ ಯಾರಾದರೂ ಕೆಳಜಾತಿಯಲ್ಲಿ ಹುಟ್ಟಿದರೆ ಆಯಿತು; ಅವರಿಗೆ ಉಳಿಗಾಲವಿಲ್ಲ. ನಾವು ಅವರನ್ನು ಮುಟ್ಟುವುದಿಲ್ಲ, ಅವರ ಸಂಗವನ್ನು ನಿರಾಕರಿಸುತ್ತೇವೆ. ಎಂತಹ ದಬ್ಬಾಳಿಕೆಯಿದು (ಕೃತಿಶ್ರೇಣಿ, ಸಂಪುಟ-13) ಎಂದು ವಿಷಾದ ಮತ್ತು ನೋವಿನಿಂದ ನುಡಿದಿದ್ದಾರೆ. ನಮ್ಮ ದೇಶ ಬದುಕಿರುವುದೇ ದೀನರ ಜೋಪಡಿಗಳಲ್ಲಿ ಎಂಬುದನ್ನು ನೆನಪಿಡಿ. ಆದರೆ, ಅವರಿಗೆ ಯಾರೂ ಸಹಾಯ ಮಾಡುತ್ತಿಲ್ಲ, ಪ್ರಾಣ ಹೋದರೂ ಸರಿ, ದೀನ ದಲಿತರಿಗೆ ದಯೆ ತೋರುವುದು ನಮ್ಮ ಗುರಿ. ದೀನ ದಲಿತರ ಮನೆಯ ಬಾಗಿಲಿಗೆ ನೆಮ್ಮದಿ, ನೀತಿ, ಧರ್ಮ ಬರುವಂತೆ ಮಾಡುವೆನು. ಹೀಗೆ ನಾನು ಮಾಡುತ್ತೇನೆ; ಇಲ್ಲವೇ ಮಡಿಯುತ್ತೇನೆ (ಕೃತಿಶ್ರೇಣಿ, ಸಂ.-6) ಎಂದು ಘೋಷಿಸಿದ್ದಾರೆ.

> ಹಿಂದೂ ಧರ್ಮದ ಶ್ರೇಷ್ಠ ಪ್ರತಿನಿಧಿಗಳಲ್ಲಿ ಒಬ್ಬರಾದ ವಿವೇಕಾನಂದರು, ಧರ್ಮವನ್ನು ಜೀವಪರವಾಗಿ ಕಂಡವರು. ಹಿಂದೂ ಧರ್ಮದ ಔನ್ನತ್ಯವನ್ನು ಎತ್ತಿ ತೋರಿಸುತ್ತಲೇ, ಅದರ ಭಾಗವಾಗಿರುವ ದೀನ ದಲಿತರ ಶೋಷಣೆಯನ್ನು ಖಂಡಿಸಿದವರು. ವಿವೇಕಾನಂದರ ವಿಚಾರಸರಣಿ ಗಾಂಧಿ, ಅಂಬೇಡ್ಕರ್, ಕುವೆಂಪು ಅವರಲ್ಲೂ ಮುಂದುವರಿದಿದೆ.

ವಿವೇಕಾನಂದರ ಅಂದಿನ ಈ ಎಲ್ಲ ಮನದಾಳದ ಮಾತುಗಳನ್ನು ಗಮನಿಸಿದಾಗ, ಇಂದಿನ ಅಂಬೇಡ್ಕರ್ ಅವರ ವಿಚಾರಧಾರೆಯ ಮಹತ್ವ ಮತ್ತಷ್ಟು ಮನವರಿಕೆ ಆಗುತ್ತದೆ. ಅಸ್ಪೃಶ್ಯತೆ ವಿರೋಧಿಯಾದ ಹೋರಾಟವನ್ನು ಕಟ್ಟಿ ತಮ್ಮ ಚಿಂತನೆಯಲ್ಲಿ ಮಹಿಳೆಯರು, ಕಾರ್ಮಿಕರು ಮತ್ತು ಬಡವರ ಪರವಾದ ಪ್ರತಿಪಾದನೆಯನ್ನು ಅಂತರ್ಗತ ಮಾಡಿಕೊಂಡು, ಅಂತಃಕರಣಪೂರ್ವಕ ಪ್ರತಿರೋಧದ ಪ್ರತೀಕವಾದ ಅಂಬೇಡ್ಕರ್ ಅವರ ವಿವೇಕ ಮಾನವೀಯವಾದುದು. 'ಧರ್ಮ ಇರುವುದು ಮನುಷ್ಯರಿಗಾಗಿ; ಮನುಷ್ಯರಿರುವುದು ಧರ್ಮಕ್ಕಾಗಿ ಅಲ್ಲ' ಎಂಬ ಅಂಬೇಡ್ಕರ್ ಅವರ ಅಭಿಪ್ರಾಯ ಸದಾ ಮಾನ್ಯವಾದುದು. ಹಿಂದೂ ಧರ್ಮದಾಚೆಗೆ ನಿಂತ ಅಂಬೇಡ್ಕರ್ ಅವರ ದೀನ ದಲಿತರ ಪರವಾದ ವಿಚಾರಧಾರೆ ಮತ್ತು ಹಿಂದೂ ಧರ್ಮದ ಒಳಗಿದ್ದೇ ದೀನ ದಲಿತರ ಪರ ದನಿಯೆತ್ತಿದ ವಿವೇಕಾನಂದರ ವಿಚಾರಧಾರೆಯನ್ನು ಅಕಡೆಮಿಕ್ ದೃಷ್ಟಿಯಿಂದ ಅಧ್ಯಯನ ಮಾಡಬಹುದು.

ಅಂಬೇಡ್ಕರ್ ಅವರು ಬುದ್ಧ ಗುರುವಿನ ಅನುಯಾಯಿಗಳೆಂದು ಜಗತ್ತಿಗೇ ಗೊತ್ತು. ವಿವೇಕಾನಂದರಿಗೂ, ಬುದ್ಧ ಗುರುವಿನ ಬಗ್ಗೆ ಅಪಾರ ಗೌರವ. ಬುದ್ಧ, ವೇದಕ್ಕಾಗಲಿ, ಜಾತಿಗಾಗಲಿ, ಪುರೋಹಿತರಿಗಾಗಲಿ, ಆಚಾರಕ್ಕಾಗಲಿ ಬಾಗಲಿಲ್ಲ... ಸತ್ಯಾನ್ವೇಷಣೆಯಲ್ಲಿ ಇಂತಹ ದಿಟ್ಟತನ ಮತ್ತು ಸರ್ವಜನರ ಮೇಲೆ ಪ್ರೀತಿ ಇದ್ದಂತಹ ಇನ್ನೊಬ್ಬ ವ್ಯಕ್ತಿಯನ್ನು ಪ್ರಪಂಚ ಮತ್ತೆಂದೂ ಕಂಡಿಲ್ಲ ಎಂದು ವಿವೇಕಾನಂದರು ಪ್ರಶಂಸಿಸಿದ್ದಾರೆ (ಕೃತಿಶ್ರೇಣಿ, ಸಂಪುಟ-8).

ವಿವೇಕಾನಂದರು ಸಮಾಜದ ವೈವಿಧ್ಯಕ್ಕೆ ಬೆಲೆ ಕೊಟ್ಟವರು. ಅಂತೆಯೇ ಧಾರ್ಮಿಕ ಸಹಿಷ್ಣುತೆಯ ಪ್ರತಿಪಾದಕರು. 1893ರ ಸೆಪ್ಟೆಂಬರ್ 11ರಂದು ಚಿಕಾಗೋದ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಮೊದಲ ಭಾಷಣದಲ್ಲಿ ವಿವೇಕಾನಂದರು ನಮ್ಮ ದೇಶದ ಮತ್ತು ಧರ್ಮದ ಬಗ್ಗೆ ಹೇಳಿದ ಮಾತುಗಳು ಇಂದಿಗೂ ಅನುಸರಣೀಯ ಆದರ್ಶವನ್ನು ಒಳಗೊಂಡಿವೆ. ಅವರ ನುಡಿಗಳು ಹೀಗಿವೆ: 'ಧಾರ್ಮಿಕ ಸಹನೆಯನ್ನು ಎಲ್ಲಾ ಧರ್ಮಗಳೂ ಸ್ವೀಕಾರಯೋಗ್ಯ ಎಂಬುದನ್ನು ಜಗತ್ತಿಗೆ ಬೋಧಿಸಿದ ಧರ್ಮಕ್ಕೆ ಸೇರಿದವನು ನಾನು ಎಂಬ ಹೆಮ್ಮೆ ನನ್ನದು. ಪರಧರ್ಮ ಸಹಿಷ್ಣುತೆಯಲ್ಲಿ ನಮಗೆ ನಂಬಿಕೆ ಉಂಟು. ಅಷ್ಟೇ ಅಲ್ಲ, ಎಲ್ಲಾ ಧರ್ಮಗಳೂ ಸತ್ಯ ಎಂಬುದನ್ನು ನಾವು ಒಪ್ಪುತ್ತೇವೆ. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ, ಎಲ್ಲ ಧರ್ಮಗಳಲ್ಲಿ, ಯಾರು ಯಾರು ಹಿಂಸೆಗೆ ಒಳಗಾದರೂ, ಅವರಿಗೆಲ್ಲ ಆಶ್ರಯವನ್ನು ನೀಡಿದ ದೇಶಕ್ಕೆ ಸೇರಿದವನು ನಾನು ಎಂಬ ಹೆಮ್ಮೆ ನನ್ನದು'. ವಿವೇಕಾನಂದರ ಅಂದಿನ ಈ ನುಡಿಗಳನ್ನು ಇಂದಿನ ವಿವೇಕವಾಗಿ ಹೃದಯಸ್ಥ ಮಾಡಿಕೊಂಡರೆ ಧಾರ್ಮಿಕ ಮೂಲಭೂತವಾದಕ್ಕೆ ಅವಕಾಶವೇ ಇರುವುದಿಲ್ಲ.

ವಿವೇಕಾನಂದರ ಈ ಹೆಮ್ಮೆಯ ನುಡಿಗಳ ಜೊತೆಗೆ ಅವರಂತೆಯೇ ವೈವಿಧ್ಯಕ್ಕೆ ಬದ್ಧರಾದ ನೆಹರೂ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಹೇಳಿದ ಮಾತುಗಳನ್ನು ಗಮನಿಸಬಹುದು. 'ನಾವು ಯಾವುದೇ ಧರ್ಮಕ್ಕೆ ಸೇರಿರಲಿ, ನಾವೆಲ್ಲರೂ ಸಮಾನ ಹಕ್ಕು, ಸೌಕರ್ಯ ಮತ್ತು ಕರ್ತವ್ಯದಿಂದ ಕೂಡಿದ ಭಾರತದ ಮಕ್ಕಳು... ಭಾರತವು ಅನೇಕ ಧರ್ಮಗಳಿಂದ ಕೂಡಿದ ರಾಷ್ಟ್ರವಾಗಿದೆ. ನಾವೆಲ್ಲ ಒಬ್ಬರನ್ನೊಬ್ಬರು ಅರಿತುಕೊಂಡು ಪರಸ್ಪರರ ನಂಬಿಕೆ, ಧರ್ಮಗಳಿಗೆ ಬೆಲೆ ಕೊಟ್ಟು ಶಾಂತಿಯಿಂದ ಸಹಬಾಳ್ವೆ ಮಾಡಬೇಕು' ಎನ್ನುವುದು ನೆಹರೂ ನುಡಿ.

ವಿವೇಕಾನಂದರು ಶಿಕ್ಷಣ ಸ್ವಾಮ್ಯದ ವಿಷಯಕ್ಕೆ ಬಂದಾಗ ಬ್ರಾಹ್ಮಣರನ್ನು ಟೀಕಿಸಿದರೂ ಅವರ ದೃಷ್ಟಿಕೋನದಲ್ಲಿ ಇದ್ದದ್ದು ಒಟ್ಟು ಪುರೋಹಿತಶಾಹಿ ಮನೋಧರ್ಮದ ವಿರೋಧವೇ ಹೊರತು ಜಾತಿ ವಿರೋಧ ಅಲ್ಲ. ಕುವೆಂಪು ಅವರು ತಮ್ಮ ಬಗ್ಗೆ ಬ್ರಾಹ್ಮಣ ವಿರೋಧಿ ಎಂಬ ತಪ್ಪು ತಿಳಿವಳಿಕೆ ಮೂಡಿದಾಗ ಸ್ಪಷ್ಟನೆ ನೀಡಿ, 'ವರ್ಣಾಶ್ರಮದ ವಿಷಯ ಬಂದಾಗ ಅನಿವಾರ್ಯವಾಗಿ ಬ್ರಾಹ್ಮಣ ಜಾತಿಯ ಪ್ರಸ್ತಾಪ ಮಾಡುತ್ತೇನೆಯೇ ಹೊರತು ನಾನು ಯಾವುದೇ ಜಾತಿಯ ವಿರೋಧಿಯಲ್ಲ. ಯಾಕೆಂದರೆ ನನಗೆ ಜಾತಿಯೇ ಇಲ್ಲ' ಎನ್ನುತ್ತಾರೆ. 'ಪುರೋಹಿತಶಾಹಿಯು ಎಲ್ಲಾ ಧರ್ಮಗಳಲ್ಲೂ ಇದೆ' ಎಂದು ಪ್ರತಿಪಾದಿಸಿದ್ದಾರೆ. ಇಲ್ಲಿ ಇಬ್ಬರ ವೈಚಾರಿಕ ಸೌಮ್ಯತೆಯನ್ನು ಗಮನಿಸಬಹುದು.

ವಿವೇಕಾನಂದರು ಹೇಳಿದ ಇನ್ನೊಂದು ಮಾತು ಮುಖ್ಯವಾದುದು: 'ಧರ್ಮವು ದೇವಸ್ಥಾನ ಕಟ್ಟುವುದರಲ್ಲಿ ಇಲ್ಲ ಅಥವಾ ಸಾಮಾಜಿಕ ಪೂಜೆಗೆ ಹೋಗುವುದರಲ್ಲಿಯೂ ಇಲ್ಲ...' ಧರ್ಮವೆಂದರೆ ಸಾಕ್ಷಾತ್ಕಾರ ಎಂಬ ಅವರ ನುಡಿಗಳನ್ನು ಗಮನಿಸಿದಾಗ 12ನೇ ಶತಮಾನದಲ್ಲೇ ಬಸವಣ್ಣನವರು 'ದೇಹವೇ ದೇಗುಲ', 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದು ಪ್ರತಿಪಾದಿಸಿದ ಹೊಸ ಪರಿಕಲ್ಪನೆ ನೆನಪಾಗುತ್ತದೆ. ಅಂತೆಯೇ ಕುವೆಂಪು ಅವರು 'ಜಲಗಾರ' ನಾಟಕದಲ್ಲಿ ದೇಗುಲ ಮತ್ತು ದೇವರನ್ನು ಹೃದಯಕ್ಕೆ ತಂದದ್ದು ಗಮನೀಯವಾಗುತ್ತದೆ.

ಧಾರ್ಮಿಕಸಾಮರಸ್ಯಕುರಿತಂತೆವಿವೇಕಾನಂದರು ದೃಢದನಿಯಲ್ಲಿ ಪ್ರತಿಪಾದಿಸಿದ ವಿಚಾರಧಾರೆಯು ಎಂದೆಂದಿಗೂ ಪ್ರಸ್ತುತವಾದುದು: 'ನಾವು ಮಾನವವರ್ಗವನ್ನು ಎಲ್ಲಿ ವೇದಗಳು, ಬೈಬಲ್, ಕುರಾನ್ ಇಲ್ಲವೋ ಅಲ್ಲಿಗೆ ಕರೆದೊಯ್ಯಬೇಕು. ಆದರೂ ಕೂಡ ವೇದ, ಬೈಬಲ್, ಕುರಾನ್‌ಗಳ ಐಕ್ಯತೆಯಿಂದ ಇದನ್ನು ಸಾಧಿಸಬೇಕಾಗಿದೆ. ನಮ್ಮ ಮಾತೃಭೂಮಿಯಲ್ಲಿ ಹಿಂದೂ, ಮುಸಲ್ಮಾನ ಧರ್ಮಗಳು ಒಂದಾಗಿರಬೇಕು. (ಹಿಂದೂ) ವೇದಾಂತದ ಮೆದುಳು, ಇಸ್ಲಾಮಿನ ದೇಹ – ಇದೊಂದೇ ನಮ್ಮ ಪುರೋಗಮನಕ್ಕೆ ಹಾದಿ' (ಕೃತಿಶ್ರೇಣಿ, ಸಂಪುಟ-7). ವಿವೇಕಾನಂದರ ಆಶಯ ಹಿಂದೂಗಳಿಗಷ್ಟೇ ಅಲ್ಲ, ಎಲ್ಲ ಧರ್ಮೀಯರಿಗೂ ಅರ್ಥವಾಗಬೇಕು.

ವಿವೇಕಾನಂದರು ಸರ್ವಧರ್ಮ ಸಮ್ಮೇಳನದ ಕೊನೆಯ ದಿನ, 1893ರ ಸೆಪ್ಟೆಂಬರ್ 27ರಂದು ನೀಡಿದ ಉಪನ್ಯಾಸದ ಕೊನೆಯಲ್ಲಿ ಹೇಳಿದ್ದು: 'ಸಂಘರ್ಷವಲ್ಲ, ಸೌಹಾರ್ದ; ವಿನಾಶವಲ್ಲ, ಸ್ವೀಕಾರ; ದ್ವೇಷವಲ್ಲ, ಸಾಮರಸ್ಯ ಮತ್ತು ಶಾಂತಿ'. ಎಲ್ಲ ಧರ್ಮಗಳಿಗೆ ವಿವೇಕಾನಂದರ ಈ ಆಶಯ ಅರ್ಥವಾಗಬೇಕು; ಎಲ್ಲ ಧರ್ಮಗಳಲ್ಲೂ 'ವಿವೇಕಾನಂದರು' ಇರಬೇಕು.



ವಾಚಕರ ವಾಣಿ

ಪುರಂದರದಾಸರ ಆರಾಧನೆ ಏಕಿಲ್ಲ?

ಕರ್ನಾಟಕ ಸಂಗೀತದ ಪಿತಾಮಹ ಪುರಂದರದಾಸರ ಆರಾಧನೆಗೆ ಕರ್ನಾಟಕ ಸಂಗೀತಗಾರರು ಅಷ್ಟು ಉತ್ಸಾಹ ತೋರಿಸುತ್ತಿಲ್ಲ. ಆದರೆ, ತ್ಯಾಗರಾಜರ ಆರಾಧನೆ ಮಾತ್ರ ವೈಭವದಿಂದ ನಡೆಯುತ್ತದೆ. ಪುರಂದರದಾಸರು ಮರಾಠಿ ಅಭಂಗಕಾರರಿಗೆ ಅಷ್ಟೇಕೆ ಸ್ವತಃ ತ್ಯಾಗರಾಜರಿಗೇ ಸ್ಫೂರ್ತಿ. ಕರ್ನಾಟಕ ಸಂಗೀತದ ಅದ್ವಿತೀಯರಾದ ತ್ಯಾಗರಾಜ-ಕನಕರನ್ನು ನಿರ್ಲಕ್ಷಿಸಲು ತಮಿಳುನಾಡಿನ ಕಲಾವಿದರ ಪ್ರಭಾವವೂ ಕಾರಣವಿರಬಹುದು. ಏಕೆಂದರೆ, ಈಗಲೂ ನೃತ್ಯ ಸಂಗೀತಗಳಲ್ಲಿ ಕನ್ನಡದ ಕೃತಿಗಳನ್ನು ಅಡುಗೆಯಲ್ಲಿ ಕರಿಬೇವಿನ ಸೊಪ್ಪಿನಂತೆ ಬಳಸಲಾಗುತ್ತಿದೆ. ತಮಿಳು ಮತ್ತು ತೆಲುಗು ಶಾಸ್ತ್ರೀಯ ಕಲೆಗಳಲ್ಲಿ ಅಧಿಕೃತ ಭಾಷೆಯಾಗಿಬಿಟ್ಟಿವೆ. ಹಿತ್ತಲ ಗಿಡ ಮದ್ದಲ್ಲವೇ?

ಮಧುಸೂದನ್ ಬಿ.ಎಸ್., ಬೆಂಗಳೂರು

ಸ್ವಾಧೀನಾನುಭವ: ನಿಯಮ ಸಡಿಲಿಸಿ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೆಲ ಸೇರಿ ಎರಡು ಅಂತಸ್ತು ಅಥವಾ ಸ್ಟಿಲ್ಟ್ ಸೇರಿ ಮೂರು ಅಂತಸ್ತಿನವರೆಗಿನ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರ (ಒಸಿ) ಪಡೆಯುವ ಬಗ್ಗೆ ಸರ್ಕಾರ ರಿಯಾಯಿತಿ ನೀಡಿದೆ. ಆದರೆ, ಈಗಾಗಲೇ ಕೆಲವರು ಮೂರ್ನಾಲ್ಕು ಅಂತಸ್ತುಗಳ ಕಟ್ಟಡ ನಿರ್ಮಿಸಿದ್ದಾರೆ. ಸರ್ಕಾರದ ಆದೇಶದಂತೆ ಇಂತಹ ಕಟ್ಟಡವನ್ನು ನೆಲಸಮಗೊಳಿಸಬೇಕೇ; ಇದಕ್ಕೆ ಪರಿಹಾರ ಇಲ್ಲವೇ ಎಂದು ಚಿಂತೆಗೀಡಾಗಿದ್ದಾರೆ. ಹೆಚ್ಚುವರಿ ಅಂತಸ್ತುಗಳಿಗೆ ಸೂಕ್ತ ಎನಿಸುವ ದಂಡ ವಿಧಿಸಿ ಸಕ್ರಮಕ್ಕೆ ಅವಕಾಶ ಕಲ್ಪಿಸಲು ಸರ್ಕಾರ ನಿರ್ಧರಿಸಬೇಕಿದೆ. ಹೊಸದಾಗಿ ನಿರ್ಮಿಸುವ ಕಟ್ಟಡಗಳಿಗೆ ಈ ಆದೇಶ ಅನ್ವಯಿಸುವುದು ಒಳ್ಳೆಯದು.

ಚಂದ್ರಮೌಳಿ ಸ್ವಾಮಿ, ಆನೇಕಲ್

ಬೀದಿನಾಯಿ: ನೈಜ ಸಮಸ್ಯೆ ಪರಿಹರಿಸಿ

ಬೀದಿನಾಯಿಗಳ ನಿಯಂತ್ರಣಕ್ಕೆ ನಿರ್ಲಕ್ಷ್ಯವಹಿಸಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಚಾಟಿ ಬೀಸಿದೆ. ಆದರೆ, ನಿಯಂತ್ರಣಕ್ಕೂ ಮೊದಲು ಅವುಗಳ ಬೆಳವಣಿಗೆಯ ಮೂಲ ಕಾರಣವನ್ನು ಪತ್ತೆಹಚ್ಚಬೇಕಿದೆ. ಈ ಹಿಂದೆ ನಗರ, ಪಟ್ಟಣ ಪ್ರದೇಶದಲ್ಲಿ ಮಾಂಸದ ಅಂಗಡಿಗಳಿಗೆ ಪ್ರತ್ಯೇಕ ಸ್ಥಳವಿತ್ತು. ಆ ಅಂಗಡಿಗಳು ಈಗ ಕಿರಾಣಿ ಅಂಗಡಿಗಳ ಸಾಲಿನಲ್ಲಿ ಸೇರಿಕೊಂಡಿವೆ. ಇದರಿಂದ ಮಾಂಸದ ತ್ಯಾಜ್ಯ ನಾಯಿಗಳಿಗೆ ಸುಲಭ ಆಹಾರವಾಗಿದೆ. ಮಾಂಸದ ರುಚಿ ಹತ್ತಿಸಿಕೊಂಡಿರುವ ನಾಯಿಗಳು ಜನಸಾಮಾನ್ಯರ ಮೇಲೂ ದಾಳಿ ಮಾಡುತ್ತಿವೆ. ನಾಯಿಗಳನ್ನು ತಪ್ಪಿಸಲು ಹೋಗಿ ಎಷ್ಟೋ ದ್ವಿಚಕ್ರ ವಾಹನ ಸವಾರರು ಅಪಘಾತಕ್ಕೀಡಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಮೊದಲಿನಂತೆ ಪ್ರತ್ಯೇಕ ಮಾಂಸದ ಮಾರುಕಟ್ಟೆ ಕಲ್ಪಿಸಿದರೆ ನಾಯಿಗಳ ಹಾವಳಿ ಸ್ವಲ್ಪಮಟ್ಟಿಗಾದರೂ ನಿಯಂತ್ರಣಕ್ಕೆ ಬರಲಿದೆ.

ಗುರುರಾಜ ಅಂಗಡಿ, ಮುನಿರಾಬಾದ್

ಸುಂಕ ನೀತಿ: ಭಾರತಕ್ಕೆ ಅಪಾಯ ತಪ್ಪಿದ್ದಲ್ಲ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಾಗತಿಕವಾಗಿ ನಿರಂಕುಶ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ರಷ್ಯಾವನ್ನು ಆರ್ಥಿಕವಾಗಿ ದುರ್ಬಲಗೊಳಿಸಲು ಮತ್ತು ಆ ದೇಶಕ್ಕೆ ಬರುತ್ತಿರುವ ಆದಾಯದ ಮೂಲಕ್ಕೆ ಕತ್ತರಿ ಹಾಕಲು ಭಾರತದ ಮೇಲೆ ಸುಂಕಾಸ್ತ್ರ ಪ್ರಯೋಗಕ್ಕೆ ಮುಂದಾಗಿದ್ದಾರೆ. ಇದರಿಂದ ಭಾರತದ ವ್ಯಾಪಾರ ವಹಿವಾಟಿಗೆ ಅಪಾಯ ತಪ್ಪಿದ್ದಲ್ಲ. ದೇಶದ ತೈಲ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲದ ಆಮದು ನಿಲ್ಲಿಸಿದರೆ ಪೆಟ್ರೋಲ್, ಡೀಸೆಲ್ ಪೂರೈಕೆ ಮತ್ತು ಬೆಲೆಯಲ್ಲಿ ಏರಿಳಿತವಾಗಲಿದೆ. ಭಾರತದ ಆರ್ಥಿಕತೆ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯಲಿದೆ. ಹಣದುಬ್ಬರದ ಏರಿಕೆಯನ್ನೂ ತಳ್ಳಿ ಹಾಕುವಂತಿಲ್ಲ. ಟ್ರಂಪ್ ದಿನಕ್ಕೊಂದು ಹೇಳಿಕೆ ನೀಡಿದರೂ ಕೇಂದ್ರ ಸರ್ಕಾರದ ನಡೆಯಲ್ಲಿ ಸ್ಪಷ್ಟತೆಯಿಲ್ಲದಿರುವುದು ದುರದೃಷ್ಟಕರ.

ನಿರ್ಮಲ ನಾಗೇಶ್, ಕಲಬುರಗಿ

ಕಾಲೇಜಿಗೆ ಹೋರಾಟ: ಜನತಂತ್ರಕ್ಕೆ ಜಯ

ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ನಿರ್ಮಿಸಬೇಕೆಂದು ಆಗ್ರಹಿಸಿ ಸತತ 115 ದಿನಗಳವರೆಗೆ ನಡೆದ ಹೋರಾಟವು ಮುಖ್ಯಮಂತ್ರಿ ಅವರಿಂದ ಅಧಿಕೃತ ಘೋಷಣೆಯೊಂದಿಗೆ ಅಂತ್ಯ ಕಂಡಿದೆ. ಬರದ ನಾಡಿಗೆ ಆರೋಗ್ಯ ಭದ್ರತೆ ಖಾತರಿಯಾಗುವ ಭರವಸೆ ಇಮ್ಮಡಿಗೊಂಡಿದೆ. 'ಹೇಳದಿರು ಹೋರಾಡಿ ಫಲವಿಲ್ಲವೆಂದು' ಎಂಬ ಬಿ.ಎಂ. ಶ್ರೀಕಂಠಯ್ಯ ಅವರ ಮಾತು ಮತ್ತೊಮ್ಮೆ ಸಾಬೀತಾಗಿದೆ. ಪಿಪಿಪಿ ಪೆಡಂಭೂತ ದೂರಸರಿದು ಜನರ ದುಡ್ಡಲ್ಲಿ ವೈದ್ಯಕೀಯ ಶಿಕ್ಷಣ ಓದುವ ಮತ್ತು ವೈದ್ಯೋಪಚಾರ ಪಡೆಯುವ ವ್ಯವಸ್ಥೆಗೆ ಜಯ ಸಿಕ್ಕಿದೆ. ಪ್ರಭುತ್ವಕ್ಕೆ ಇಷ್ಟವಿಲ್ಲದ ಸಮಯದಲ್ಲಿ ಜನರ ಆಶೋತ್ತರವೊಂದು ಹೋರಾಟದ ಮೂಲಕ ಸಾರ್ವಜನಿಕ ನೀತಿಯಾಗ ಹೊರಟಿರುವುದು ಪ್ರಜಾತಂತ್ರಕ್ಕೆ ಸಂದ ಗೆಲುವು.

ಮಾದಪ್ಪ ಎಸ್. ಕಠಾರಿ, ವಿಜಯಪುರ

ಶಾಲಾ ಆವರಣದಲ್ಲೇ ತಂಬಾಕು ಘಾಟು

ಸಮಾಜದಲ್ಲಿ ಕಾನೂನುಗಳು ಕೇವಲ ಕಡತಗಳಿಗೆ ಸೀಮಿತವಾಗಿವೆ ಎನ್ನುವುದಕ್ಕೆ ಕೊಪ್ಟಾ ಕಾಯ್ದೆಯ ಉಲ್ಲಂಘನೆಯೇ ಸಾಕ್ಷಿ. ಇತ್ತೀಚಿನ ವರದಿಗಳ ಪ್ರಕಾರ, ಭಾರತದಲ್ಲಿ ಪ್ರತಿದಿನ ಸುಮಾರು 3,700 ಭಾರತೀಯರು ತಂಬಾಕು ಸೇವನೆಯಿಂದ ಮೃತಪಡುತ್ತಿದ್ದಾರೆ. ಆದರೆ, ಆಡಳಿತ ವ್ಯವಸ್ಥೆಯು ಕುಂಭಕರ್ಣ ನಿದ್ರೆಯಲ್ಲಿದೆ. ಕಾಯ್ದೆ ಪ್ರಕಾರ 21 ವರ್ಷದೊಳಗಿನ ಯುವಕರಿಗೆ ಸಿಗರೇಟ್ ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧ.

ವಾಸ್ತವದಲ್ಲಿ, ಶಾಲಾ-ಕಾಲೇಜಿನ 100 ಗಜಗಳ ವ್ಯಾಪ್ತಿಯಲ್ಲಿರುವ ಅಂಗಡಿಗಳೇ ಯುವಜನತೆಗೆ ಈ ವ್ಯಸನದ ಮೊದಲ ದ್ವಾರಗಳಾಗಿವೆ. ಇಂತಹ ವ್ಯಾಪಾರಿಗಳಿಗೆ ಕೇವಲ ₹200 ದಂಡ ವಿಧಿಸುವುದು ವ್ಯವಸ್ಥೆಯ ಅಣಕವಾಗಿದೆ. ಹಣದಾಸೆಗೆ ಯುವಪೀಳಿಗೆಯನ್ನು ಬಲಿ ಕೊಡುತ್ತಿರುವ ವ್ಯಾಪಾರಿಗಳ ಪರವಾನಗಿಯನ್ನು ಶಾಶ್ವತವಾಗಿ ರದ್ದುಗೊಳಿಸಬೇಕಿದೆ.

ವಿಜಯಕುಮಾರ ಎಚ್.ಕೆ., ರಾಯಚೂರು

ಚುರುಮುರಿ



ದುಡ್ಡೇ ದೊಡ್ಡಣ್ಣ

• ಸುಮಂಗಲಾ

'ಗೆಲುವು ಗೆಲುವು ಗೆಲುವು... ಒಂದರ ಮೇಲೊಂದು ಗೆಲುವು' ಎಂದು ಬೆಕ್ಕಣ್ಣ ರಾಗವಾಗಿ ಹಾಡುತ್ತಿತ್ತು.

'ಏನಲೇ... ಬೆಳಗ್ಗೆಯೇ ವಿಜಯಗೀತೆ ಹಾಡಾಕೆ ಹತ್ತೀ!' ಎಂದೆ ಅಚ್ಚರಿಯಿಂದ.

'ನಾನಲ್ಲ... ಟ್ರಂಪಣ್ಣ ಹಾಡಾಕೆ ಹತ್ಯಾನೆ!' ಎಂದಿತು.

'ವೆನೆಜುವೆಲಾ ಆಯಿತು... ಈಗ ಗ್ರೀನ್‌ಲ್ಯಾಂಡೂ ನಮ್ಮದು ಅಂತಾನ. ನಾಳೆ ಇನ್ಯಾವ ಲ್ಯಾಂಡು ತಮ್ಮದು ಅಂತಾನೋ ಯಾರಿಗ್ಗೊತ್ತು' ಕುದಿಯುತ್ತ ಹೇಳಿದೆ.

'ಒಟ್ಟು ನೊಬೆಲ್ ಶಾಂತಿ ಕಪ್ಪು ತನಗ ಕೊಡೂತನಕ ಒಂದರ ಮೇಲೊಂದು ಗೆಲುವು ಸಾಧಿಸಬೇಕಂತ ನಿರ್ಧಾರ ಮಾಡ್ಯಾನೆ. ಅಂವಾ ಒಂದಿನ ನೊಬೆಲ್ ಫೌಂಡೇಶನ್ ಅನ್ನೇ ಎತ್ತಾಕಂಡು ಹೋದರೂ ಆಶ್ಚರ್ಯ ಇಲ್ಲ!' ಬೆಕ್ಕಣ್ಣ ಕಣಿ ಹೇಳಿತು.

'ಅದೊಂದು ಬಾಕಿ! ಭಾರತ-ಪಾಕ್ ಯುದ್ಧ ನಿಲ್ಲಿಸಿದ್ದೇ ತಾನು ಅಂತ ಕಳೆದ ಮೇ ತಿಂಗಳಿಂದ 70ಕ್ಕೂ ಹೆಚ್ಚು ಸಲ ಅಂವಾ ಹೇಳ್ಯಾನೆ. ಮೋದಿಮಾಮಾರು ಎದೆಗಾರಿಕೆಯಿಂದ ಉತ್ತರ ಕೊಡೂದು ಬಿಟ್ಟು, ಎದಕ್ಕ ಗಪ್ ಅದಾರೆ?' ಅಂತ ಕೇಳಿದೆ.

'ಯಾರಿಗೆ, ಯಾವಾಗ, ಹೆಂಗೆ ಉತ್ತರ ಕೊಡಬಕು ಅಂತ ನಮ್ ಮೋದಿಮಾಮಾರಿಗೆ ಗೊತ್ತೈತಿ. ಅದಕ್ಕೇ ಗಪ್ ಅದಾರೆ!' ಬೆಕ್ಕಣ್ಣ ಮೀಸೆ ತಿರುವಿತು.

'ಟ್ರಂಪಣ್ಣನ ಅತಿಕ್ರಮಣ ತಪ್ಪು ಅಂತ ಸಣ್ಣಪುಟ್ಟ ದೇಶಗಳೂ ಖಂಡಿಸ್ಯಾರೆ. ಮೋದಿ ಮಾಮಾರಿಗೆ ಟ್ರಂಪಣ್ಣನ್ನ ಖಂಡಿಸೂ ಧೈರ್ಯ ಇಲ್ಲೇನು?'

'ಕಾಲಿಗೆ ಬಿದ್ದು ಕಾಲುಂಗರ ಬಿಚ್ಚಿಕೊ ಅಂತ ಗಾದೇನೆ ಐತಲ್ಲ... ಅದಕ್ಕೇ ಗಪ್ ಅದಾರೆ.' ಬೆಕ್ಕಣ್ಣ ಮತ್ತೆ ಸಮರ್ಥಿಸಿಕೊಂಡಿತು.

'ಅಮೆರಿಕದ ಮಂದಿ ಭಯಂಕರ ಎಜುಕೇಟೆಡ್, ಡೆಮೆಕ್ರಾಟಿಕ್ ಅಂತಾರೆ... ಅಲ್ಲೀ ಮಂದಿನೂ ಹುಚ್‌ಪ್ಯಾಲಿ ಹಂಗೆ ಬಡಬಡಿಸೋ ಅಧ್ಯಕ್ಷನ್ನ ಹೆಂಗ ತಡಕೊಂಡಾರೆ ಅಂತ!'

'ದುಡ್ಡಿದ್ದವನೇ ದೊಡ್ಡಣ್ಣ, ಬಲವಿದ್ದವನೇ ಬಾಳಿಯಾನು ಇಂಥ ಗಾದೆ ಮಾತುಗಳನ್ನು ಅಲ್ಲಿಯ ಮಂದಿ ಅರೆದು ಕುಡಿದಾರೆ. ಟ್ರಂಪಣ್ಣ ಹಿಂಗೆಲ್ಲ ಅತಿಕ್ರಮಣ ಮಾಡೂದು ತಮ್ಮ ಒಳಿತಿಗಾಗಿಯೇ ಅಂತ ಗಪ್ ಅದಾರೆ' ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ಸಂಗತ

ಬಿಫೆಸ್: ನಿಂತಲ್ಲೇ ನಿಂತಿರುವ ಸಿನಿತೇರು

ಒಂದೂವರೆ ದಶಕದ ನಂತರವೂ ಬೆಂಗಳೂರು ಸಿನಿಮೋತ್ಸವ ಗೊಂದಲಗಳಿಂದ ಹೊರಬಂದಿಲ್ಲ. ವೃತ್ತಿಪರತೆ, ದೂರದೃಷ್ಟಿ ಕೊರತೆಯಿಂದ ಚಿತ್ರೋತ್ಸವ ಬಳಲುತ್ತಿದೆ.

• ಎಂ. ನಾಗರಾಜ ಶೆಟ್ಟಿ

'ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು' ಎನ್ನುವ ಗಾದೆ ಕರ್ನಾಟಕ ಚಲನಚಿತ್ರ ಅಕಾಡೆಮಿಗೆ ಚೆನ್ನಾಗಿ ಒಪ್ಪುತ್ತದೆ. ವರ್ಷವಿಡೀ ನಿದ್ರಾವಸ್ಥೆಯಲ್ಲಿರುವ ಅಕಾಡೆಮಿ, ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಮಯದಲ್ಲಿ ನಿದ್ದೆಯಿಂದ ಎಚ್ಚರಗೊಂಡಂತೆ ಜಾಗೃತಗೊಳ್ಳುತ್ತದೆ. ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು 2011ರಿಂದ ನಡೆಸುವ ಹೊಣೆಗಾರಿಕೆಯನ್ನು ವಹಿಸಿಕೊಂಡ ಅಕಾಡೆಮಿಗೆ ಇದೊಂದು ವರ್ಷಾವಧಿ ಆಚರಣೆ.

ಬೆಂಗಳೂರು ಚಲನಚಿತ್ರೋತ್ಸವಕ್ಕೆ ಮೊದಲಿನಿಂದಲೂ ವಿವಾದಗಳ ನಂಟು. ಚಿತ್ರೋತ್ಸವವನ್ನು ಚಲನಚಿತ್ರ ಅಕಾಡೆಮಿ ವಹಿಸಿಕೊಳ್ಳುವ ಮೊದಲು, ಸುಚಿತ್ರಾ ಫಿಲ್ಮ್ ಸೊಸೈಟಿ ಚಿತ್ರೋತ್ಸವಗಳನ್ನು ನಡೆಸುತ್ತಿತ್ತು. ಆ ಬಳಿಕವೂ ಕೆಲವು ವರ್ಷಗಳ ಕಾಲ ಮಾತೃಸಂಸ್ಥೆಯ ನೆರಳಿನಲ್ಲಿಯೇ ಚಿತ್ರೋತ್ಸವಗಳು ನಡೆಯುತ್ತಿದ್ದವು. ಈಗಲೂ ಆ ನೆರಳು ಸ್ವಲ್ಪಮಟ್ಟಿಗೆ ಇದ್ದೇಇದೆ.

ಅಂತರರಾಷ್ಟ್ರೀಯ ಚಿತ್ರೋತ್ಸವಗಳ ಆಯೋಜನೆಗೆ ದಿನ ನಿಗದಿ ಮಾಡುವ 'ಅಂತರರಾಷ್ಟ್ರೀಯ ಚಲನಚಿತ್ರ ನಿರ್ಮಾಪಕರ ಸಂಘಗಳ ಒಕ್ಕೂಟ' (ಎಫ್‌ಐಎಪಿಫ್) ನಿರ್ದೇಶನದ ಅನುಸಾರ ನಿರ್ದಿಷ್ಟ ದಿನ, ತಿಂಗಳಲ್ಲಿ ಚಲನಚಿತ್ರೋತ್ಸವಗಳನ್ನು ನಡೆಸಬೇಕು. ಆದರೆ ಈವರೆಗೂ ಚಿತ್ರೋತ್ಸವಕ್ಕೆ ಕಾಯಂ ದಿನ ನಿಗದಿಪಡಿಸಲು ಸಾಧ್ಯವಾಗಿಲ್ಲ. ಡಿಸೆಂಬರ್, ಜನವರಿ, ಫೆಬ್ರುವರಿ, ಮಾರ್ಚ್– ಹೀಗೆ ಬೇರೆ ಬೇರೆ ತಿಂಗಳುಗಳಲ್ಲಿ, ಸರ್ಕಾರದ ಮರ್ಜಿ ಮತ್ತು ಅಕಾಡೆಮಿ ಎಚ್ಚರಗೊಂಡಿರುವ ಸಮಯವನ್ನು ಅನುಸರಿಸಿ ಚಿತ್ರೋತ್ಸವ ನಡೆಸುತ್ತಾ ಬರಲಾಗಿದೆ. ಪ್ರತಿ ವರ್ಷವೂ ಈ ತಿಂಗಳೇ, ಈ ದಿನವೇ ಕಾಯಂ ಎಂದು ಅಕಾಡೆಮಿ ಹೇಳುತ್ತಲೇ ಬಂದಿದೆ. ಈ ಬಾರಿಯೂ ಹಳೆಯ ಹೇಳಿಕೆಯನ್ನೇ ಪುನರುಚ್ಚರಿಸಲಾಗಿದೆ.



ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳುವ ಸಿನಿಮಾಗಳ ಆಯ್ಕೆ ಹಾಗೂ ಪ್ರಶಸ್ತಿಗಳು ಬಹಳ ಸಲ ಟೀಕೆಗೆ ಗುರಿಯಾಗಿವೆ. ಹಲವು ಚಿತ್ರೋತ್ಸವಗಳಲ್ಲಿ ಪುರಸ್ಕಾರ ಪಡೆದಿರುವ ನಟೇಶ್ ಹೆಗ್ಡೆ ನಿರ್ದೇಶನದ 'ಪೆದ್ರೊ' ಮತ್ತು ಕೇಸರಿ ಹರವು ಅವರ ರೈತ ಸತ್ಯಾಗ್ರಹ ಸಾಕ್ಷ್ಯಚಿತ್ರದ ಪ್ರದರ್ಶನಕ್ಕೆ ಅವಕಾಶ ನಿರಾಕರಿಸಲಾಗಿತ್ತು. ದಲಿತರ ಮೇಲಿನ ದೌರ್ಜನ್ಯವನ್ನು ಹೇಳುವ 'ಪಾಲಾರ್' ಚಿತ್ರವನ್ನು ಪ್ರತಿಭಟನೆಯ ನಂತರ ಪ್ರದರ್ಶಿಸಲಾಯಿತು. ಕೋವಿಡ್ ಕಾಲದ ದುರಂತವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ 'ಫೋಟೋ'ಗೆ ನೆಪದ ಮಾತ್ರದ ಪ್ರಶಸ್ತಿಯಷ್ಟೇ ದೊರಕಿತು. ಇದೇ ತಾರತಮ್ಯವನ್ನು ರಾಷ್ಟ್ರೀಯ, ಅಂತರರಾಷ್ಟ್ರೀಯ ಸಿನಿಮಾಗಳ ಆಯ್ಕೆಯಲ್ಲೂ ಕಾಣಬಹುದು. ಕನ್ನಡ ಸಿನಿಮಾಗಳ ಆಯ್ಕೆಗೆ ಸಂಬಂಧಿಸಿದಂತೆಯೂ ಆಕ್ಷೇಪಗಳು ನಿರಂತರವಾಗಿವೆ. ಅತ್ಯುತ್ತಮ ಚಿತ್ರಗಳನ್ನು ಪ್ರಾಥಮಿಕ ಹಂತದಲ್ಲೇ ಹೊರಗಿಟ್ಟಿರುವ ಉದಾಹರಣೆಗಳೂ ಇವೆ.

ಹಲವು ವರ್ಷಗಳಿಂದ ಕೆಲವೇ ವ್ಯಕ್ತಿಗಳನ್ನು ಕಲಾ ನಿರ್ದೇಶಕರಾಗಿ ಆರಿಸುವುದು ಆಕ್ಷೇಪಗಳಿಗೆ ಕಾರಣ ಆಗಿತ್ತು. ಪ್ರತಿ ಸಲವೂ ಒಬ್ಬರೇ ನೇತೃತ್ವ ವಹಿಸುವುದು ಸರಿಯಲ್ಲ ಎಂದು ಕೆಲವರ ವಾದ. ಈ ಬಾರಿ ಹೊಸ, ಯುವ ಕಲಾ ನಿರ್ದೇಶಕರನ್ನು ಆಯ್ಕೆ ಮಾಡಲಾಗಿದೆ; ಹೊಸಬರ ಸಮಿತಿಯನ್ನೂ ರಚಿಸಲಾಗಿದೆ. ಅದರ ಫಲಶ್ರುತಿಯನ್ನು ಕಾದು ನೋಡಬೇಕಾಗಿದೆ.

ಈ ವರ್ಷ ಹೊಸ ವಿವಾದವೊಂದು ಹುಟ್ಟಿಕೊಂಡಿದೆ. ಕೆಲವು ವರ್ಷಗಳಿಂದ ಬೆಂಗಳೂರು ಚಲನಚಿತ್ರೋತ್ಸವ ಒರಾಯನ್ ಮಾಲ್‌ನಲ್ಲಿ ನಡೆಯುತ್ತಿತ್ತು. ಸಿನಿಮಾ ಪ್ರೇಮಿಗಳು ಕೂಡ ಆ ಪರಿಸರಕ್ಕೆ ಹೊಂದಿಕೊಂಡಿದ್ದರು. ಈ ವರ್ಷ ಏಕಾಏಕಿ 'ಸಾಧು'ವಾದ ಯಾವ ಕಾರಣವನ್ನೂ ನೀಡದೆ ಲುಲು ಮಾಲ್‌ಗೆ ಬದಲಾಯಿಸಲಾಗಿದೆ. ಈ ಬದಲಾವಣೆಯಿಂದ ಅನನುಕೂಲವೇ ಹೆಚ್ಚು. ಲುಲು ಮಾಲ್‌ಗಿಂತ ಒರಾಯನ್ ಮಾಲ್‌ಗೆ ಬಸ್ ಹಾಗೂ ಮೆಟ್ರೊ ಸಂಪರ್ಕ ಸುಲಭ. ಒರಾಯನ್‌ಗೆ ಹೋಲಿಸಿದರೆ ಲುಲು ಮಾಲ್‌ನಲ್ಲಿ ಆಸನಗಳು ಕಡಿಮೆ. ಹೆಚ್ಚುವರಿಯಾಗಿ ಒಂದು ದಿನದ ಪ್ರದರ್ಶನ ಮಾಡುವುದರಿಂದ ಈ ಕೊರತೆಯನ್ನು ನೀಗಲಾಗುತ್ತಿದೆ ಎಂದು ಸಮಜಾಯಿಷಿ ನೀಡಿದರೂ, ಹೆಚ್ಚು ಜನ ನೋಡಲು ಬಯಸುವ ಸಿನಿಮಾಕ್ಕೆ ವ್ಯವಸ್ಥೆಯನ್ನು ಮಾಡುವುದಾದರೂ ಹೇಗೆ?

ಈವರೆಗಿನ ಚಿತ್ರೋತ್ಸವಗಳನ್ನು ಗಮನಿಸಿದರೆ ಪ್ರೇಕ್ಷಕರ ಸಂಖ್ಯೆ ಹೆಚ್ಚುತ್ತಾ ಹೋಗಿದೆ. ಸೌಲಭ್ಯಗಳನ್ನು ಕಲ್ಪಿಸುವುದೂ ಅಷ್ಟೇ ಮುಖ್ಯ. ಗೋವಾ ಮತ್ತು ಕೇರಳ ಫಿಲ್ಮ್ ಫೆಸ್ಟಿವಲ್‌ಗಳಲ್ಲಿ ಸಿನಿಮಾಕರ್ತರಿಗೆ ಸರಿಯಾದ ವ್ಯವಸ್ಥೆ ಇದೆ. ಸಿನಿಮಾ ಆಸಕ್ತರು ಆಯ್ಕೆಯಾಗುವ ಸಿನಿಮಾಗಳ ಗುಣಮಟ್ಟವನ್ನೂ ಪರಿಶೀಲಿಸುತ್ತಾರೆ. ಸಣ್ಣ ರಾಜ್ಯವಾದ ಕೇರಳದಲ್ಲಿ ನಡೆಯುವ ಫಿಲ್ಮ್ ಫೆಸ್ಟಿವಲ್ ಅಲ್ಪಾವಧಿಯಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮನ್ನಣೆ ಪಡೆದಿದೆ. ಆದರೆ, ಹೆಚ್ಚು ಸಂಪನ್ಮೂಲ ಹೊಂದಿರುವ ಕರ್ನಾಟಕದಲ್ಲಿ ಚಲನಚಿತ್ರೋತ್ಸವ ದೂರದೃಷ್ಟಿ ಕೊರತೆ ಹಾಗೂ ದಿನಾಂಕ-ಜಾಗಗಳ ಅಸ್ಪಷ್ಟತೆಯಿಂದಾಗಿ ಜಾಗತಿಕ ಗಮನವನ್ನು ಸೆಳೆಯಲು ವಿಫಲವಾಗಿದೆ.

ಹಾಗೆ ನೋಡಿದರೆ, ಚಿತ್ರೋತ್ಸವ ಸಂಘಟನೆಯ ಮಾತೃಸಂಸ್ಥೆ ವಾರ್ತಾ ಇಲಾಖೆ. ಅದರ ನೆರಳಿನಲ್ಲಿ ತನಗಿರುವ ಒಂದಷ್ಟು ಹೊಣೆಗಾರಿಕೆಯನ್ನು ಅಕಾಡೆಮಿ ಸಮರ್ಥವಾಗಿ ನಿಭಾಯಿಸದೆ ಹೋದರೆ ಅಕಾಡೆಮಿ ಅಸ್ತಿತ್ವಕ್ಕೆ ಅರ್ಥವೇ ಇಲ್ಲದಂತಾಗುತ್ತದೆ.


ಕೇರಳ ಫಿಲ್ಮ್ ಫೆಸ್ಟಿವಲ್ ಮುಗಿದ ಬಳಿಕ ಅಲ್ಲಿ ಪ್ರದರ್ಶಿತವಾದ ಕೆಲವು ಚಿತ್ರಗಳನ್ನು ತ್ರಿಶೂರ್, ಎರ್ನಾಕುಲಂಗಳಲ್ಲಿ ತೋರಿಸಲಾಗುತ್ತದೆ. ಕರ್ನಾಟಕದಲ್ಲಿಯೂ ಅಂತಹ ವ್ಯವಸ್ಥೆಯನ್ನು ಮಾಡಿ, ಆಯ್ದ ಜಿಲ್ಲಾ ಕೇಂದ್ರಗಳಲ್ಲಿ ಮಿನಿ ಚಿತ್ರೋತ್ಸವಗಳನ್ನು ನಡೆಸಬಹುದು. ಆ ಮೂಲಕ ಒಳ್ಳೆಯ ಸಿನಿಮಾಗಳ ಬಗ್ಗೆ ಜನರ ಅಭಿರುಚಿಯನ್ನೂ, ಯುವ ತಂತ್ರಜ್ಞರಿಗೆ ಸಿನಿಮಾ ಅರಿವು ಮೂಡಿಸುವ ಪ್ರಯತ್ನ ಮಾಡಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ದೇವಪ್ರಭುತ್ವ’ದ ವಿರುದ್ಧ ಪ್ರತಿಭಟನೆ ತೀವ್ರ; ಪ್ರಮುಖ ನಗರಗಳಲ್ಲಿ ಹಿಂಸಾಚಾರ



ಇರಾನ್ ಪ್ರಕ್ಷುಬ್ಧಗೊಂಡಿದೆ. ಆಯತೊಲ್ಲಾ ಖಮೇನಿ ಅವರ ನಾಯಕತ್ವದ ವಿರುದ್ಧ ಜನ ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಜನವಿರೋಧ ತೀವ್ರಗೊಳ್ಳುತ್ತಿದ್ದಂತೆಯೇ ಸರ್ಕಾರ ಪ್ರತಿಭಟನೆಗಳನ್ನು ಹತ್ತಿಕ್ಕುವ ಕ್ರಮಕ್ಕೆ ಮುಂದಾಗಿದೆ. ಇದರ ನಡುವೆಯೇ, ಇರಾನ್ ಸ್ವಾತಂತ್ರ್ಯ ಬಯಸುತ್ತಿದ್ದು, ನೆರವು ನೀಡಲು ತಾವು ಸಿದ್ಧ ಎಂದು ಅಮೆರಿಕ ಹೇಳಿದೆ. ಆದರೆ, ದೇಶದಲ್ಲಿನ ಗಲಭೆಗಳಿಗೆ ಅಮೆರಿಕವೇ ಕಾರಣ ಎಂದು ಇರಾನ್ ಆರೋಪಿಸಿದ್ದು, ಪ್ರತಿದಾಳಿಯ ಎಚ್ಚರಿಕೆ ನೀಡಿದೆ. ಸರ್ವಾಧಿಕಾರ, ಮಾನವ ಹಕ್ಕುಗಳ ನಿರಂತರ ದಮನದ ವಿರುದ್ಧ ಜನರ ಸಿಟ್ಟು ಸ್ಫೋಟಗೊಂಡಿದ್ದು, ಇದು ದೇಶದಲ್ಲಿ ಎಂಥ ಪರಿಣಾಮಗಳಿಗೆ ಎಡೆಮಾಡಿಕೊಡುತ್ತದೆ ಎನ್ನುವುದು ಅನಿಶ್ಚಿತವಾಗಿದೆ


ಆಯತೊಲ್ಲಾ ಖಮೇನಿ

ಇರಾನ್: ಖಮೇನಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಇರಾನ್‌ನಲ್ಲಿ ಪ್ರತಿಭಟನೆಗಳು ತೀವ್ರಗೊಂಡಿವೆ. ಹಣದುಬ್ಬರ, ಜೀವನ ವೆಚ್ಚ ಏರುತ್ತಿರುವುದರ ವಿರುದ್ಧ ಸಣ್ಣಮಟ್ಟದಲ್ಲಿ ಆರಂಭವಾದ ಪ್ರತಿಭಟನೆಗಳು ಆಂದೋಲನದ ಸ್ವರೂಪ ಪಡೆಯುತ್ತಿವೆ. ಪ್ರತಿಭಟನಕಾರರು ಬೃಹತ್ ರ‍್ಯಾಲಿಗಳನ್ನು ನಡೆಸುತ್ತಿದ್ದು, ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಖಮೇನಿ ಆಡಳಿತಕ್ಕೆ ತಲೆನೋವಾಗಿದೆ.

ವಿದ್ಯುತ್ ಕಡಿತ, ಇಂಟರ್ನೆಟ್ ಕಡಿತ ಸೇರಿದಂತೆ ಪ್ರತಿಭಟನೆಗಳನ್ನು ಹತ್ತಿಕ್ಕಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರೂ ಪ್ರತಿಭಟನೆ ಕಡಿಮೆಯಾಗುತ್ತಿಲ್ಲ. ರಾಜಧಾನಿ ಟೆಹರಾನ್, ಮಶಾದ್ ಸೇರಿದಂತೆ ದೇಶದ ಎಲ್ಲಾ 31 ಪ್ರಾಂತ್ಯದಲ್ಲೂ ಪ್ರತಿಭಟನೆಗಳು ನಡೆಯುತ್ತಿದ್ದು, 100ಕ್ಕೂ ಹೆಚ್ಚಿನ ನಗರಗಳಿಗೆ ಹಬ್ಬಿದೆ. ಪ್ರಮುಖ ನಗರಗಳಲ್ಲಿ ಹಿಂಸಾಚಾರಗಳು ನಡೆದಿವೆ. ಸರ್ಕಾರವು ಪೊಲೀಸರ ಮೂಲಕ ದಮನಕ್ಕೆ ಮುಂದಾಗಿದೆ. ಪ್ರತಿಭಟನಕಾರರಿಗೆ ಗುಂಡಿಕ್ಕಲಾಗುತ್ತಿದೆ. ಹಲವು ತಿಂಗಳಿನಿಂದ ಪ್ರತಿಭಟನೆಗಳು ನಡೆಯುತ್ತಿದ್ದರೂ, ಎರಡು ವಾರಗಳಿಂದ ಅವು ತೀವ್ರಗೊಂಡಿವೆ. ಇತ್ತೀಚಿನ ತಿಂಗಳುಗಳಲ್ಲಿ ಸಾವಿರಾರು ಮಂದಿ ಸತ್ತು, 30,000ಕ್ಕೂ ಹೆಚ್ಚು ಮಂದಿ ಬಂಧನಕ್ಕೊಳಗಾಗಿದ್ದಾರೆ ಎಂದು ಅಮೆರಿಕ ಬೆಂಬಲಿತ ಸೆಂಟರ್ ಫಾರ್ ಹ್ಯೂಮನ್ ರೈಟ್ಸ್ ಇನ್ ಇರಾನ್ (ಸಿಎಚ್‌ಆರ್‌ಐ) ಹೇಳಿದೆ. ಇರಾನ್‌ನಲ್ಲಿ ಹತ್ಯಾಕಾಂಡ ನಡೆಯುತ್ತಿದ್ದು, ಇದನ್ನು ತಡೆಯುವ ಪ್ರಯತ್ನಗಳು ಜಾಗತಿಕ ಮಟ್ಟದಲ್ಲಿ ನಡೆಯಬೇಕು ಎಂದು ಅದು ಕರೆ ನೀಡಿದೆ.

ಬಹುತೇಕ ಶಿಯಾಗಳೇ ಇರುವ ಇರಾನ್‌ನಲ್ಲಿರುವುದು ಧಾರ್ಮಿಕ ಪ್ರಭುತ್ವ. ಸರ್ವೋಚ್ಚ ನಾಯಕ ಆಯತೊಲ್ಲಾ ಖಮೇನಿ ಒಬ್ಬ ಧರ್ಮಗುರು. ಮೊದಲ ಬಾರಿಗೆ ಜನರು ದೇವಪ್ರಭುತ್ವದ (ದೇವರ ಹೆಸರಿನಲ್ಲಿ ನಡೆಸಲಾಗುವ ಆಡಳಿತ) ವಿರುದ್ಧ ದೊಡ್ಡ ಮಟ್ಟದಲ್ಲಿ ಬೀದಿಗಿಳಿದಿದ್ದಾರೆ. ರಾಜಕೀಯ ಸ್ವಾತಂತ್ರ್ಯದ ಕೊರತೆ, ಆರ್ಥಿಕತೆಯ ಕುಸಿತ, ಭ್ರಷ್ಟಾಚಾರ ಪ್ರತಿಭಟನೆಗೆ ಕಾರಣಗಳು ಎನ್ನಲಾಗುತ್ತಿದ್ದು, ಸರ್ಕಾರ ಕಿತ್ತೊಗೆಯುವುದೇ ತಮ್ಮ ಗುರಿ ಎಂದು ಪ್ರತಿಭಟನಕಾರರು ಘೋಷಿಸಿದ್ದಾರೆ.

ಇರಾನ್ ಹಿಂದೆಂದೂ ಇಲ್ಲದ ರೀತಿಯಲ್ಲಿ ಸ್ವಾತಂತ್ರ್ಯವನ್ನು ಬಯಸುತ್ತಿದ್ದು, ಅದರ ಬೆಂಬಲಕ್ಕೆ ಸಿದ್ಧ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅವರು ಇರಾನ್ ಮೇಲೆ ಸೇನಾ ದಾಳಿಯ ಸಾಧ್ಯತೆ ಬಗ್ಗೆಯೂ ಪರಿಶೀಲಿಸುತ್ತಿದ್ದಾರೆ ಎಂದು ಅಮೆರಿಕದ ಮಾಧ್ಯಮಗಳು ವರದಿ ಮಾಡಿವೆ.

ಖಮೇನಿ ಅವರು ಪ್ರತಿಭಟನಕಾರರನ್ನು ದೊಂಬಿಕೋರರು ಎಂದಿದ್ದು, ಅಮೆರಿಕವನ್ನು ಮೆಚ್ಚಿಸಲು ಪ್ರತಿಭಟನೆಗೆ ಇಳಿದಿದ್ದಾರೆ ಎಂದು ವ್ಯಾಖ್ಯಾನಿಸಿದ್ದಾರೆ. ಪ್ರತಿಭಟನೆಗಳಿಗೆ ಅಮೆರಿಕ ಮತ್ತು ಇಸ್ರೇಲ್ ಕಾರಣ ಎಂದಿದ್ದಾರೆ. ಪ್ರತಿಭಟನೆಯನ್ನು ದೈವವಿರೋಧಿ ಕ್ರಿಯೆ ಎಂದು ಪರಿಗಣಿಸಿ, ಮರಣದಂಡನೆ ವಿಧಿಸುವುದಾಗಿ ಅಟಾರ್ನಿ ಜನರಲ್ ಪ್ರಕಟಿಸಿದ್ದಾರೆ.

ಮಹಿಳೆಯರ ಹಕ್ಕುಗಳು, ಜೀವಿಸುವ ಹಕ್ಕು, ಸ್ವಾತಂತ್ರ್ಯಕ್ಕಾಗಿ ಯುವಕ ಯುವತಿಯರು 2022ರಲ್ಲಿ ನಡೆಸಿದ್ದ ಪ್ರತಿಭಟನೆಗಳಿಗಿಂತಲೂ ಪ್ರಸ್ತುತ ನಡೆಯುತ್ತಿರುವ ಪ್ರತಿಭಟನೆಗಳು ತೀವ್ರ ಸ್ವರೂಪದ್ದಾಗಿವೆ. ನೇಪಾಳ, ಬಾಂಗ್ಲಾದಂತೆಯೇ ಇಲ್ಲಿಯೂ ಸರ್ಕಾರ ಪತನಗೊಳ್ಳುವುದೇ ಎನ್ನುವ ಚರ್ಚೆಗಳು ನಡೆಯುತ್ತಿವೆ. ಪ್ರತಿಭಟನಕಾರರ ಕೈ ಮೇಲಾದರೆ, ರಷ್ಯಾಕ್ಕೆ ಪಲಾಯನ ಮಾಡಲು ಖಮೇನಿ ಸಿದ್ಧತೆ ನಡೆಸಿದ್ದಾರೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಆಧಾರ: ಎಎಫ್‌ಪಿ, ರಾಯಿಟರ್ಸ್, ಬಿಬಿಸಿ, ಸಿಎನ್‌ಎನ್

46 ವರ್ಷಗಳಿಂದ ‘ದೇವಪ್ರಭುತ್ವ’

ಇರಾನಿನಲ್ಲಿ 1979ರಲ್ಲಿ ಇಸ್ಲಾಂ ಕ್ರಾಂತಿ ನಡೆದು ‘ದೇವಪ್ರಭುತ್ವ’ ಸ್ಥಾಪನೆಗೊಂಡ ನಂತರ ಇಲ್ಲಿಯವರೆಗೂ ಅದೇ ವ್ಯವಸ್ಥೆ ಜಾರಿಯಲ್ಲಿದೆ. ಧರ್ಮಗುರು, ರಾಜಕಾರಣಿ ರುಹೊಲ್ಲಾ ಖೊಮೇನಿ ನೇತೃತ್ವದಲ್ಲಿ ನಡೆದ ಕ್ರಾಂತಿಯಲ್ಲಿ ಅಲ್ಲಿದ್ದ ರಾಜರ ಆಡಳಿತ ಕೊನೆಗೊಂಡಿತು. ಅಂದಿನಿಂದ ಇರಾನ್, ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಆಯಿತು. ಆಡಳಿತದಲ್ಲಿ ಅಧ್ಯಕ್ಷೀಯ ವ್ಯವಸ್ಥೆ (ಅಧ್ಯಕ್ಷೀಯ ಚುನಾವಣೆ ನಡೆಯುತ್ತದೆ) ಇದ್ದರೂ ‘ಆಯತೊಲ್ಲಾ’ ಎಂಬ ಧಾರ್ಮಿಕ ಪದವಿ ಹೊಂದಿರುವ ಪರಮೋಚ್ಚ ನಾಯಕನ ನೇತೃತ್ವದಲ್ಲಿ ಆಡಳಿತ ನಡೆಯುತ್ತದೆ. ರುಹೊಲ್ಲಾ ಖೊಮೇನಿ ಅವರು 1989ರ ಜೂನ್ 3ರಂದು ನಿಧನರಾದ ಬಳಿಕ ಈಗಿನ ಆಯತೊಲ್ಲಾ ಖಮೇನಿ (ಸೈಯದ್ ಅಲಿ ಹುಸೈನಿ ಖಮೇನಿ) ಅವರು ಇರಾನಿನ ಪರಮೋಚ್ಚ ನಾಯಕರಾಗಿದ್ದಾರೆ. 36 ವರ್ಷಗಳಿಂದ ಅವರೇ ಇರಾನಿನ ಆಡಳಿತ ವ್ಯವಹಾರ ನೋಡಿಕೊಳ್ಳುತ್ತಿದ್ದಾರೆ.

1979ರಲ್ಲಿ ದೇವಪ್ರಭುತ್ವವಾದಿ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ರುಹೊಲ್ಲಾ ಖಮೇನಿ ಅವರು ಇಸ್ಲಾಂ ಧಾರ್ಮಿಕ ನಿಯಮಗಳ ಆಧಾರದಲ್ಲಿ ಜನರ ಮೇಲೆ, ವಿಶೇಷವಾಗಿ ಮಹಿಳೆಯರ ಮೇಲೆ ನಿರ್ಬಂಧಗಳನ್ನು ಹೇರಲು ಆರಂಭಿಸಿದರು. ಅಧಿಕಾರಕ್ಕೆ ಬಂದ ಎರಡೇ ವಾರಗಳಲ್ಲಿ ಮಹಿಳೆಯರು ಹಿಜಾಬ್ ಧರಿಸುವುದನ್ನು ಅಲ್ಲಿ ಕಡ್ಡಾಯಗೊಳಿಸಲಾಯಿತು. ಆಗಲೂ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರು. ಆನಂತರವೂ ಆಡಳಿತದ ಜನವಿರೋಧಿ ನೀತಿಗಳನ್ನು ಜನರು ವಿರೋಧಿಸುತ್ತಲೇ ಇದ್ದಾರೆ. ಆದರೆ, ಆಡಳಿತ ಅವುಗಳನ್ನೆಲ್ಲ ವ್ಯವಸ್ಥಿತವಾಗಿ ಹತ್ತಿಕ್ಕುತ್ತಾ ಬಂದಿದೆ.

9.2 ಕೋಟಿ ಇರಾನ್‌ನ ಜನಸಂಖ್ಯೆ	**31** ಇರಾನಿನಲ್ಲಿರುವ ಪ್ರಾಂತ್ಯಗಳು. ಎಲ್ಲಾ ಪ್ರಾಂತ್ಯಗಳಲ್ಲೂ ಹಿಂಸಾತ್ಮಕ ಪ್ರತಿಭಟನೆ ನಡೆಯುತ್ತಿದೆ
100 ಪ್ರತಿಭಟನೆ ನಡೆಯುತ್ತಿರುವ ನಗರಗಳು	
535ಕ್ಕೂ ಹೆಚ್ಚು 14 ದಿನಗಳ ಪ್ರತಿಭಟನೆಯಲ್ಲಿ ಮೃತಪಟ್ಟವರ ಅಂದಾಜು ಸಂಖ್ಯೆ	**10,600**ಕ್ಕೂ ಹೆಚ್ಚು ಸರ್ಕಾರ ಬಂಧಿಸಿರುವ ಪ್ರತಿಭಟನಕಾರರು



ಇರಾನಿನಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ಜರ್ಮನಿಯ ಬರ್ಲಿನ್‌ನಲ್ಲಿ ಜನರು ಬೆಂಬಲಿಸಿದರು. ಹಲವು ದೇಶಗಳಲ್ಲಿ ಪ್ರತಿಭಟನೆಗೆ ಬೆಂಬಲ ವ್ಯಕ್ತವಾಗಿದೆ ಎಪಿ ಚಿತ್ರ


ಹೋರಾಟಕ್ಕೆ ರಾಜವಂಶಸ್ಥನ ಬೆಂಬಲ


ಮೊಹಮ್ಮದ್ ರೆಝಾ ಪಹ್ಲವಿ

ಪರ್ಷಿಯಾ ಎಂದು ಕರೆಯುತ್ತಿದ್ದ ಇರಾನ್‌ನಲ್ಲಿ ಹಿಂದೆ ಇದ್ದುದು ರಾಜರ ಆಡಳಿತ. 1979ರಲ್ಲಿ ಇಸ್ಲಾಂ ಕ್ರಾಂತಿ ನಡೆದಾಗ ಇರಾನ್‌ನ ಶಾ (ದೊರೆ) ಆಗಿದ್ದವರು, ಮೊಹಮ್ಮದ್ ರೆಝಾ ಪಹ್ಲವಿ. ಅಮೆರಿಕ ಸೇರಿದಂತೆ ಪಶ್ಚಿಮದ ದೇಶಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಅವರು ಅಧಿಕಾರ ಕಳೆದುಕೊಂಡ ನಂತರ ಈಜಿಪ್ಟ್‌ನಲ್ಲಿ ಆಶ್ರಯ ಪಡೆದು, ಕ್ಯಾನ್ಸರ್‌ನಿಂದ ಮೃತಪಟ್ಟರು. ಅವರ ಮಗ, ಅಮೆರಿಕದ ವಾಷಿಂಗ್ಟನ್‌ನಲ್ಲಿ ನೆಲಸಿರುವ ರೆಝಾ ಪಹ್ಲವಿ ಅವರು ತಮ್ಮ ದೇಶದಲ್ಲಿ ಪ್ರತಿಭಟನೆ ನಡೆದಾಗಲೆಲ್ಲ, ಹೋರಾಟಗಾರರನ್ನು ಬೆಂಬಲಿಸಿದ್ದಾರೆ. ಈ ಬಾರಿಯೂ ಚಳವಳಿಯನ್ನು ಇನ್ನಷ್ಟು ತೀವ್ರಗೊಳಿಸುವಂತೆ ಕರೆ ನೀಡಿದ್ದಾರೆ.

ದೇಶದಲ್ಲಿ ಕ್ರಾಂತಿ ಸಂಭವಿಸುವಾಗ ಪಹ್ಲವಿ ಅವರಿಗೆ 17 ವರ್ಷ. ಪೈಲಟ್ ತರಬೇತಿಗಾಗಿ ಅವರು ಅಮೆರಿಕದ ಟೆಕ್ಸಾಸ್‌ಗೆ ತೆರಳಿದ್ದರು. ಆ ಬಳಿಕ ಅವರಿಗೆ ಸ್ವದೇಶಕ್ಕೆ ಹಿಂದಿರುಗಲು ಆಗಿಲ್ಲ. ಅಮೆರಿಕದಲ್ಲೇ ವಾಸಿಸುತ್ತಿದ್ದಾರೆ. 65 ವರ್ಷದ ಪಹ್ಲವಿ ಅವರು ಮತ್ತೆ ಇರಾನ್‌ಗೆ ತೆರಳಿ ಅಲ್ಲಿನ ರಾಜಕೀಯ, ದೇಶದ ಆಡಳಿತದ ಭಾಗವಾಗುವ ಆಶಯವನ್ನು ಹೊಂದಿದ್ದಾರೆ. ಆದರೆ, ಅಲ್ಲಿನ ಆಡಳಿತ ಅದಕ್ಕೆ ಈವರೆಗೆ ಅವಕಾಶ ನೀಡಿಲ್ಲ. ಈಗ ಅಮೆರಿಕದಿಂದಲೇ ತಮ್ಮ ಬೆಂಬಲಿಗರಿಗೆ ಸಂದೇಶ ನೀಡುತ್ತಿರುವ ಅವರು, ಇರಾನ್‌ನಲ್ಲಿ ಬದಲಾವಣೆ ಬಯಸಿ ಜನರು ನಡೆಸುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸಿದ್ದಾರೆ.

‘ಇರಾನ್‌ನಲ್ಲಿರುವ ಇಸ್ಲಾಮಿಕ್ ರಿಪಬ್ಲಿಕ್ ಅನ್ನು ಸಂಪೂರ್ಣವಾಗಿ ಕಿತ್ತೊಗೆದು, ಅದು ಮಂಡಿಯೂರುವಂತೆ ಮಾಡುತ್ತೇವೆ’ ಎಂದು ಅವರು ಇತ್ತೀಚೆಗೆ ‘ಎಕ್ಸ್’ನಲ್ಲಿ ಮಾಡಿರುವ ವಿಡಿಯೊ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಈಗಿನ ಸರ್ಕಾರ ಪತನಹೊಂದಿ, ಹೊಸ ಆಡಳಿತ ಬಂದರೆ, ಅದರ ನೇತೃತ್ವ ವಹಿಸಲು ತಾವು ಸಿದ್ಧವಿರುವುದಾಗಿ ಅವರು ಘೋಷಿಸಿದ್ದಾರೆ. ದಶಕಗಳಿಂದ ತವರಿನಿಂದ ದೂರ ಇರುವ ಪಹ್ಲವಿ ಅವರನ್ನು ಯಾವ ಪ್ರಮಾಣದಲ್ಲಿ ಜನರು ಬೆಂಬಲಿಸಲಿದ್ದಾರೆ ಎಂದು ಹೇಳುವುದು ಕಷ್ಟ. ಪ್ರತಿಭಟನೆ ನಡೆಸುತ್ತಿರುವವರಲ್ಲಿ ಕೆಲವರು ಅವರ ಪರವಾಗಿ ಘೋಷಣೆಗಳನ್ನು ಕೂಗುತ್ತಿದ್ದಾರೆ. ಆದರೆ, ಪ್ರತಿಭಟನಕಾರರಲ್ಲಿ ಮುಂದಿನ ಸರ್ಕಾರ/ಆಡಳಿತದ ಸ್ವರೂಪದ ಬಗ್ಗೆ ಭಿನ್ನ ಭಿನ್ನ ನಿಲುವುಗಳಿವೆ.


ರೆಝಾ ಪಹ್ಲವಿ

2022 ರ ಪ್ರತಿಭಟನೆಯ ನೆನಪು

1979ರ ನಂತರ ಇರಾನ್‌ನಲ್ಲಿ ಆಡಳಿತದ ವಿರುದ್ಧ ಜನರು ಆಗಾಗ ಪ್ರತಿಭಟನೆ ನಡೆಸಿದ ನಿದರ್ಶನಗಳು ಹಲವು (2009, 2017, 2019) ಇವೆ. ಆದರೆ, ಅವು ದೊಡ್ಡ ಪ್ರಮಾಣದಲ್ಲಿರಲಿಲ್ಲ. 2022ರಲ್ಲಿ ಯುವತಿಯೊಬ್ಬಳ ಸಾವನ್ನು ಖಂಡಿಸಿ ದೇಶದಾದ್ಯಂತ ಜನರು ಬೀದಿಗಿಳಿದು ಹೋರಾಟ ನಡೆಸಿದ್ದರು. ಈಗಿನ ಹೋರಾಟ ಅದನ್ನೂ ಮೀರಿಸಿದೆ.


2022ರ ಸೆಪ್ಟೆಂಬರ್‌ನಲ್ಲಿ ಖುರ್ದಿಷ್ ಪ್ರಾಂತ್ಯದ ಮಹ್ಸಾ ಅಮಿನಿ ಎಂಬ ಯುವತಿ ಇರಾನ್ ರಾಜಧಾನಿ ಟೆಹರಾನ್‌ಗೆ ಸೆಪ್ಟೆಂಬರ್ 13ರಂದು ಬಂದಿದ್ದಳು. ಆಕೆ ಹಿಜಾಬ್ ಧರಿಸಿರಲಿಲ್ಲ. ಆದರೆ, ಇರಾನ್‌ನಲ್ಲಿರುವ ವಸ್ತ್ರಸಂಹಿತೆಯ ಪ್ರಕಾರ ಮಹಿಳೆಯರು ಹಿಜಾಬ್ ಧರಿಸುವುದು ಕಡ್ಡಾಯ. ಇರಾನ್ ಸರ್ಕಾರ ನಿಯೋಜಿಸಿರುವ ಧಾರ್ಮಿಕ ನೈತಿಕ ಪೊಲೀಸರು ಅಮಿನಿಯನ್ನು ಬಂಧಿಸಿದ್ದರು. ಈ ವೇಳೆ ಆಕೆಯ ಮೇಲೆ ಅವರು ತೀವ್ರ ಹಲ್ಲೆ ನಡೆಸಿದ್ದರು ಎಂದು ಆರೋಪಿಸಲಾಗಿತ್ತು. ಪೊಲೀಸ್ ವಶದಲ್ಲಿದ್ದ ಆಕೆ ಕುಸಿದು ಬಿದ್ದಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೆಪ್ಟೆಂಬರ್ 16ರಂದು ಆಕೆ ಮೃತಪಟ್ಟಿದ್ದಳು.

ಯುವತಿಯ ಸಾವಿಗೆ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಸಾವಿನಲ್ಲಿ ತನ್ನ ಪಾತ್ರ ಇಲ್ಲ ಎಂದು ಇರಾನ್ ಸರ್ಕಾರ ಹೇಳಿತ್ತು. ಆದರೆ, ಜನರು ಬೀದಿಗಿಳಿದು ಹಲವು ದಿನಗಳ ಕಾಲ ಪ್ರತಿಭಟನೆ ನಡೆಸಿದ್ದರು. ದೈಹಿಕವಾಗಿ ಹಲ್ಲೆ ನಡೆಸಿದ್ದು, ಯುವತಿಯ ಸಾವಿಗೆ ಕಾರಣವಾಗಿತ್ತು. ಇದಕ್ಕೆ ಇರಾನ್ ಸರ್ಕಾರವೇ ಹೊಣೆ ಎಂದು ವಿಶ್ವಸಂಸ್ಥೆ 2024ರಲ್ಲಿ ಹೇಳಿತ್ತು.



ರಾಷ್ಟ್ರೀಯ

ಕೇರಳಕ್ಕೆ ಅಪಾಯದ ಮುನ್ಸೂಚನೆ: ಶಾ ಎಚ್ಚರಿಕೆ


ಅಮಿತ್ ಶಾ

ತಿರುವನಂತಪುರ (ಪಿಟಿಐ): ‘ಈಗ ಕೇರಳದ ಕಾನೂನು ಸುವ್ಯವಸ್ಥೆ ಸಮರ್ಪಕವಾಗಿದ್ದು, ಪರಿಸ್ಥಿತಿ ಶಾಂತವಾಗಿದೆ ಎಂಬಂತೆ ಕಾಣಿಸುತ್ತಿರಬಹುದು. ಆದರೆ, ಭವಿಷ್ಯದಲ್ಲಿ ಅಪಾಯಕಾರಿ ಆಗುವಂತಹ ಹಲವು ಬೆದರಿಕೆಗಳು ನಿಧಾನವಾಗಿ ಹೊರಹೊಮ್ಮುತ್ತಿವೆ. ಅಂತಹವುಗಳನ್ನು ಗುರುತಿಸಿ, ತೊಡೆದು ಹಾಕಬೇಕಾದದು ಸರ್ಕಾರದ ಜವಾಬ್ದಾರಿ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಎಚ್ಚರಿಸಿದರು.

ಇಲ್ಲಿ ಆಯೋಜಿಸಿದ್ದ ಸಮಾವೇಶವೊಂದರಲ್ಲಿ ಮಾತನಾಡಿದ ಅವರು, ಪಿಎಫ್‌ಐ, ಜಮಾತ್–ಎ–ಇಸ್ಲಾಮಿಯಂತಹ ಸಂಘಟನೆಗಳು, ಎಸ್‌ಡಿಪಿಐನಂತಹ ರಾಜಕೀಯ ಪಕ್ಷಗಳ ಪಾತ್ರವನ್ನು ಪ್ರಶ್ನಿಸುವ ಜೊತೆಗೆ, ಅವುಗಳು ಜನರನ್ನು ನಿಜವಾಗಿಯೂ ಸುರಕ್ಷಿತವಾಗಿ ಇಡಬಹುದೇ?’ ಎಂದರು. ‘ಇಂಥ ಸಂಘಟನೆಗಳು, ರಾಜಕೀಯ ಪಕ್ಷಗಳಿಂದ ಕೇರಳ ಸುರಕ್ಷಿತವಾಗಿರಲು ಸಾಧ್ಯವೇ’ ಎಂದೂ ಪ್ರಶ್ನಿಸಿದರು.

‘ಸಹಬಾಳ್ವೆಯಲ್ಲಿ ನಂಬಿಕೆಯಿಲ್ಲದವರಿಂದ ಏಕತೆಯನ್ನು ಹೇಗೆ ಖಚಿತಪಡಿಸಿಕೊಳ್ಳಲು ಸಾಧ್ಯ’ ಎಂದು ಕೇಳಿದ ಶಾ, ‘ತೆರೆಯ ಹಿಂದೆ ಕಾರ್ಯನಿರ್ವಹಿಸುತ್ತಿರುವ ಕಾಣದ ಅಪಾಯಗಳನ್ನು ಗುರುತಿಸುವ ಮೂಲಕ ಕೇರಳವನ್ನು ಸುರಕ್ಷಿತವಾಗಿಡಬಹುದು. ಇಲ್ಲಿ ಅಭಿವೃದ್ಧಿ ಜೊತೆಗೆ ಸುರಕ್ಷತೆಯೂ ಬಹಳ ಮುಖ್ಯ’ ಎಂದರು.

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಮೇಲಿನ ನಿಷೇಧವನ್ನು ಉಲ್ಲೇಖಿಸಿದ ಅವರು, ಸ್ಥಳೀಯ ಪಕ್ಷಗಳಾದ ಎಲ್‌ಡಿಎಫ್ ಮತ್ತು ಯುಡಿಎಫ್ ಎರಡೂ ಸರ್ಕಾರದ ಈ ನಿರ್ಧಾರವನ್ನು ವಿರೋಧಿಸಿಲ್ಲ ಅಥವಾ ಬೆಂಬಲಿಸಿಲ್ಲ’ ಎಂದರು.

‘ನಾವು ಪಿಎಫ್‌ಐ ನಿಷೇಧಿಸುವ ಮೂಲಕ, ಆ ಸಂಘಟನೆಯ ಕಾರ್ಯಕರ್ತರನ್ನು ಕಂಬಿಗಳ ಹಿಂದೆ ಹಾಕಿದ್ದೇವೆ. ಪರಿಣಾಮವಾಗಿ ಇಡೀ ದೇಶ ಸುರಕ್ಷಿತವಾಗಿದೆ. ಇದನ್ನು ನಾನು ಹೋದಕಡೆಯಲ್ಲೆಲ್ಲ ಸ್ಪಷ್ಟವಾಗಿ ಹೇಳುತ್ತೇನೆ’ ಎಂದರು.

ಕೇರಳ ಬಿಜೆಪಿ ಮುಖಂಡ ರಾಜೀವ್ ಚಂದ್ರಶೇಖರ್ ಅವರು ಕೆಲವು ದಿನಗಳ ಹಿಂದೆ ‘ಕಾಂಗ್ರೆಸ್ ನೇತೃತ್ವದ ಯುಡಿಎಫ್ ಪಕ್ಷ, ಐಯುಎಂಎಲ್ ಮತ್ತು ಇಸ್ಲಾಮಿಕ್ ಸಂಘಟನೆ ಜಮಾತೆ-ಎ-ಇಸ್ಲಾಮಿ ಸಂಘಟನೆಗಳ ಬೆಂಬಲದೊಂದಿಗೆ ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸಲು ಧರ್ಮವನ್ನು ಬಳಸಿಕೊಳ್ಳುವ ಮೂಲಕ ಅಪಾಯಕಾರಿ ರಾಜಕಾರಣ ಮಾಡುತ್ತಿದೆ’ ಎಂದು ಆರೋಪಿಸಿದ್ದರು.

’ತಟಸ್ಥ ತನಿಖಾ ಸಂಸ್ಥೆಗೆ ವಹಿಸಲು ಒತ್ತಾಯ’

ತಿರುವನಂತಪುರ(ಪಿಟಿಐ): ಶಬರಿಮಲೆ ಅಯ್ಯಪ್ಪ ದೇಗುಲದ ಚಿನ್ನ ನಾಪತ್ತೆ ಪ್ರಕರಣದ ನಿಜವಾದ ಅಪರಾಧಿಗಳನ್ನು ಕೇರಳ ಸರ್ಕಾರ ರಕ್ಷಿಸುತ್ತಿದೆ ಎಂದು ಆರೋಪಿಸಿದ ಗೃಹ ಸಚಿವ ಅಮಿತ್ ಶಾ, ತಟಸ್ಥ ತನಿಖಾ ಸಂಸ್ಥೆಯೊಂದಿಗೆ ಈ ಪ್ರಕರಣದ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಮುಂಬರುವ ಕೇರಳ ವಿಧಾನಸಭೆ ಚುನಾವಣೆಗಾಗಿ ರೂಪಿಸಿರುವ ‘ಮಿಷನ್ 2026’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಕೇರಳ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ವಿಧಾನಸಭೆ ಚುನಾವಣೆ ಒಟ್ಟಿಗೆ ನಡೆಯಲಿದ್ದು, ಎರಡೂ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರ ರಚಿಸಲಿದೆ’ ಎಂದರು.

‘ಶಬರಿಮಲೆಯ ಸಂಪತ್ತನ್ನು ರಕ್ಷಿಸಲು ವಿಫಲರಾದವರಿಂದ ಜನರ ನಂಬಿಕೆಯನ್ನು ಉಳಿಸಲು ಸಾಧ್ಯವಿಲ್ಲ. ಕೇರಳದಲ್ಲಿ ಭಕ್ತರ ನಂಬಿಕೆಯನ್ನು ಬಿಜೆಪಿಯಿಂದ ಮಾತ್ರ ರಕ್ಷಿಸಲು ಸಾಧ್ಯ' ಎಂದು ಅವರು ಪ್ರತಿಪಾದಿಸಿದರು.

ಗುವಾಹಟಿ: ವಿರೋಧ ನಡುವೆಯೂ ಹೈಕೋರ್ಟ್ ಸಂಕೀರ್ಣಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಗುವಾಹಟಿ ಹೈಕೋರ್ಟ್ ಮತ್ತು ಜಿಲ್ಲಾ ನ್ಯಾಯಾಲಯಗಳನ್ನು ಒಳಗೊಂಡ ನೂತನ ಸಂಕೀರ್ಣಕ್ಕೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಭಾನುವಾರ ಶಂಕುಸ್ಥಾಪನೆ ನೆರವೇರಿಸಿದರು. ಸಂಕೀರ್ಣ ನಿರ್ಮಾಣ ವಿರೋಧಿಸಿ ವಕೀಲರ ಸಂಘದ ಸದಸ್ಯರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.


ನಗರದ ಹೃದಯ ಭಾಗದಲ್ಲಿದ್ದ ಹೈಕೋರ್ಟ್ ಸಂಕೀರ್ಣವನ್ನು ಬ್ರಹ್ಮಪುತ್ರ ನದಿಯ ಮತ್ತೊಂದು ತೀರದಲ್ಲಿರುವ ಉತ್ತರ ಗುವಾಹಟಿ ಭಾಗದ ರಂಗಮಹಲ್‌ಗೆ ಸ್ಥಳಾಂತರಗೊಳ್ಳುವುದನ್ನು ವಕೀಲರ ಸಂಘ ವಿರೋಧಿಸಿದೆ. ‘ಹೊಸ ಸಂಕೀರ್ಣ ಈಗಿರುವ ಕಟ್ಟಡದಿಂದ ಬಹಳ ದೂರವಿದೆ. ಇದರಿಂದ ಓಡಾಟಕ್ಕಾಗಿಯೇ ಹೆಚ್ಚು ಖರ್ಚಾಗುತ್ತದೆ’ ಎಂಬುದು ವಕೀಲರ ಆರೋಪ.

‘ಉತ್ತರ ಗುವಾಹಟಿಯನ್ನು ಸಂಪರ್ಕಿಸಲು ಸೇತುವೆ ನಿರ್ಮಾಣಗೊಳ್ಳುತ್ತಿದೆ. ಮುಂದಿನ ತಿಂಗಳು ಪೂರ್ಣಗೊಳ್ಳಲಿದೆ. ಆಗ ಹೊಸ ಸಂಕೀರ್ಣವನ್ನು 20ರಿಂದ 30 ನಿಮಿಷಗಳಲ್ಲಿ ತಲುಪಬಹುದು’ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳುತ್ತಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಕಾಳಿ ಮತ್ತು ಸರಸ್ವತಿ ಮಾತೆಯರ ಭಗ್ನಗೊಂಡ ವಿಗ್ರಹಗಳ ಚಿತ್ರಗಳನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಪಶ್ಚಿಮ ಬಂಗಾಳದ ಶಾಂತಿಪುರದಲ್ಲಿ ದೇವಿಯರ ವಿಗ್ರಹಗಳನ್ನು ಒಡೆದು ಹಾಕಲಾಗಿದ್ದು, ಇದು ಸನಾತನ ಧರ್ಮದ ಮೇಲೆ ನಡೆಸಿದ ದಾಳಿಯಾಗಿದೆ; ಮಮತಾ ಬ್ಯಾನರ್ಜಿ ಅವರ ದುರಾಡಳಿತದಲ್ಲಿ (ಜಂಗಲ್ ರಾಜ್) ಇಂಥ ಘಟನೆಗಳು ಪುನರಾವರ್ತನೆಯಾಗುತ್ತಿದ್ದು, ಎಚ್ಚೆತ್ತಿರುವ ಹಿಂದೂಗಳು 2026ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಅವರಿಗೆ ಬುದ್ಧಿ ಕಲಿಸಲಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.


Amit Malviya @amitmalviya · Follow

ANOTHER BRUTAL ASSAULT ON SANATAN DHARMA IN MAMATA'S JUNGLE RAJ!


Around 50–60 Kali and Saraswati idols, painstakingly crafted by potter Jayanta Das, were viciously vandalised outside his workshop, in front of Loknath Temple near Matal Garh, Shantipur.

The miscreants struck in Show more

‘ಆಜ್‌ತಕ್ ಬಾಂಗ್ಲಾ’ ವಿಗ್ರಹಗಳ ಅಂಗಡಿಯ ಮಾಲೀಕ ಜಯಂತ ದಾಸ್ ಮತ್ತು ಅವರ ಮಗ ಪಲಾಶ್ ಅವರನ್ನು ಸಂದರ್ಶನ ಮಾಡಿದೆ; ಘಟನೆಗೆ ಸಹೋದರರಾದ ಅಮಿತ್ ಡೇ ಮತ್ತು ಅಸಿತ್ ಡೇ ಅವರು ಕಾರಣರಾಗಿದ್ದು, ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಗಳಲ್ಲೂ ಅವರ ಕೃತ್ಯ ದಾಖಲಾಗಿದೆ ಎಂದು ಸಂದರ್ಶನದಲ್ಲಿ ತಿಳಿಸಿದ್ದಾರೆ. ನಾದಿಯಾ ಜಿಲ್ಲೆಯ ಶಾಂತಿಪುರ ಪೊಲೀಸರನ್ನು ಈ ಸಂಬಂಧ ಸಂಪರ್ಕಿಸಿದಾಗ, ಅವರು ಮಾಳವೀಯ ಅವರ ಕೋಮು ಪ್ರತಿಪಾದನೆಯನ್ನು ಸುಳ್ಳು ಎಂದು ಸ್ಪಷ್ಟೀಕರಿಸಿದ್ದಾರೆ. ಅಂಗಡಿ ಮಾಲೀಕನಂತೆ ಆರೋಪಿಗಳಾದ ಅಮಿತ್ ಡೇ ಮತ್ತು ಅಸಿತ್ ಡೇ ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದು, ವೈಯಕ್ತಿಕ ದ್ವೇಷದಿಂದ ಕೃತ್ಯ ಎಸಗಿದ್ದಾರೆ ಎಂದಿದ್ದಾರೆ. ಅಂಗಡಿ ಮಾಲೀಕ ಜಯಂತ್ ಅವರನ್ನು ಸಂಪರ್ಕಿಸಿದಾಗ, ಅವರೂ ಇದನ್ನೇ ಹೇಳಿರುವುದಾಗಿ ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಅಹಂಕಾರವೇ ಮರಣ


ದಾದಾಪೀರ್ ನವಿಲೇಹಾಳ್

ಇವತ್ತಿನ ಜಾಗತಿಕ ವಿದ್ಯಮಾನಗಳನ್ನು ಗಮನಿಸಿದರೆ ಮನುಷ್ಯನ ಅಹಂಕಾರ ಅತಿರೇಕದ ಹಂತವನ್ನು ಮುಟ್ಟುತ್ತಿದೆಯೇನೋ ಎಂದು ಭಾಸವಾಗುತ್ತಿದೆ. ನಮ್ಮ ಅನಾದಿ ಕಾಲದ ಸಂಕಟಗಳನ್ನು ಕ್ಷಣಮಾತ್ರದಲ್ಲಿ ಪರಿಹರಿಸುವ ಅಪೂರ್ವ ತೇಜಸ್ಸಿನ ಕಿಂದರಿಜೋಗಿ ಕುದುರೆಯೇರಿ ಬರುತ್ತಿದ್ದಾನೆ ಎಂದು ಕಾಯುತ್ತಾ ಕುಳಿತವರ ಭವಿಷ್ಯ ಅಯೋಮಯವಾಗಿದೆ. ಹಾಗೆ ಬಂದವನೇ ಕಲ್ಕಿ ಅವತಾರ ತಾಳಿದಂತಿದೆ. ಹುಲುಸಾಗಿ ಕಂಡದ್ದೆಲ್ಲಾ ನನಗೇ ಬೇಕು, ನನ್ನ ವಿನಾ ಹುಲ್ಲು ಕಡ್ಡಿ ಕೂಡ ಅಲ್ಲಾಡಕೂಡದು ಎಂದು ಸ್ವಯಂ ದೈವವಾಗಿ ಅವತರಿಸಿದ್ದಾನೆ. ನಾಟಕದ ತೆರೆ ಸರಿಯಲು ಇನ್ನೂ ಕಾಯಬೇಕು.

ನಿಸರ್ಗದಲ್ಲಿ ಭಿನ್ನ ಭಿನ್ನ ಆಕಾರ ಮತ್ತು ಗಾತ್ರದ ವೈವಿಧ್ಯಮಯ ಜೀವರಾಶಿಯಿದೆ. ತಾನು ಹೆಚ್ಚು ಅಂತ ಅಂದುಕೊಂಡದ್ದಕ್ಕೂ ಅಳಿವು ತಪ್ಪಿಲ್ಲ. ಅಂತಹದ್ದರಲ್ಲಿ ಜಗತ್ತು ನನ್ನಂತೆಯೇ ಇರಬೇಕು ಎಂದುಕೊಳ್ಳುವುದು ಉಳಿದವರ ಭಾವನೆ ಮತ್ತು ಧೋರಣೆಗಳನ್ನು ಕೀಳಾಗಿ ಕಂಡಂತೆ. ನಾನು ಹೇಳಿದ ಹಾಗೆ ಕೇಳಿಕೊಂಡಿರಬೇಕು ಎನ್ನುವುದು ಇನ್ನೊಬ್ಬರ ಸ್ವಾತಂತ್ರ್ಯವನ್ನು ನಿರಾಕರಿಸಿದ ಹಾಗೆ. ಎಲ್ಲ ನನ್ನ ಅಧೀನದಲ್ಲಿರಬೇಕೆಂಬುದು ಇತರರ ಅಸ್ತಿತ್ವವನ್ನು ಅಲ್ಲಗಳೆದ ಹಾಗೆ. ನನ್ನನ್ನು ಖುಷಿಪಡಿಸಿ, ಇಲ್ಲದಿದ್ದರೆ ಪರಿಣಾಮ ಎದುರಿಸಿ ಎನ್ನುವುದು ನೀಚ ಭಯೋತ್ಪಾದನೆ. ನನ್ನಲ್ಲಿನ ಸಂಪತ್ತಿನಿಂದ ಬೇಕಾದ್ದನ್ನು ಕೊಳ್ಳಬಲ್ಲೆ ಎನ್ನುವುದು ಅಹಂಕಾರ. ತಾನು ಮಾತ್ರ ಬಲಿಷ್ಠ ಎಂದುಕೊಂಡು ಮಿಕ್ಕವರನ್ನು ಕ್ರಿಮಿಗಳಂತೆ ಕಾಣುವುದು ದುಷ್ಟತನದ ಪರಮಾವಧಿ. ಇಂಥ ವಿಕೃತ ಆಲೋಚನೆಗಳು ಯಾರಲ್ಲಿಯೂ ನೆಮ್ಮದಿಯನ್ನು ಹುಟ್ಟಿಸುವುದಿಲ್ಲ.

ಮನುಷ್ಯ ಚರಿತ್ರೆಯಲ್ಲಿ ಎಂತೆಂತಹ ದುಷ್ಟರು ಬಂದು ಹೇಳಲು ಹೆಸರಿಲ್ಲದಂತೆ ಹೋಗಿದ್ದಾರೆ. ಇನ್ನೊಬ್ಬರ ಅಸ್ತಿತ್ವವನ್ನು ಅಳಿಸುವ ಉದ್ದೇಶ ಹೊಂದಿದವರನ್ನು ಚರಿತ್ರೆ ಎಂದಿಗೂ ಗೌರವದಿಂದ ನೆನಪಿಸಿಕೊಂಡಿಲ್ಲ. ಇಂಥವರಿಂದ ಸ್ಮಶಾನಗಳು ತುಂಬಿ ಹೋಗಿವೆ. ಅವರ ಸಮಾಧಿಗಳು ಯಾವತ್ತೂ ಹೂವುಗಳಿಂದ ಅಲಂಕೃತಗೊಂಡಿಲ್ಲ. ಇವರು ಜನಜೀವನವನ್ನು ಆತಂಕಕ್ಕೆ ದೂಡಿದವರು. ಬಲಶಾಲಿಗಳು ಮತ್ತು ಬಲಹೀನರ ಮಧ್ಯೆ ಅಹಂಕಾರ ಸರ್ವವ್ಯಾಪಿಯಾಗಿದೆ. ಸರ್ವವಿನಾಶಿ ಗುಣದ ಈ ಇಗೋ ಸಂಘರ್ಷದಲ್ಲಿ ಕೊನೆಗೆ ಉಳಿಯುವವರು ಯಾರು? ಯಾರೋ ಒಬ್ಬಿಬ್ಬರಿಗೆ ಇರುವ ಬಲವು ಬಲವಿಲ್ಲದವರ ಬೆಂಬಲಕ್ಕೆ ನಿಲ್ಲಬೇಕು. ಔದಾರ್ಯವೇ ಒಲವು. ಒಲವಿಲ್ಲದ ಬಲವು ಕೇವಲ ಕಸರತ್ತು.

ಎಲ್ಲರೂ ಮುಖ್ಯರಾಗಬೇಕಾದ ಹೊತ್ತಿನಲ್ಲಿ ಸಾವಧಾನ ಸಾಯಬಾರದು. ನಿಧಾನಯಾನದಿಂದ ಮಾತ್ರ ಸರ್ವೋದಯದ ಗುರಿ ಸಾಧ್ಯ. ಇಂದಿನ ವೇಗಕ್ಕೆ ಗುರಿ ಮುಖ್ಯವಾಗಿದೆಯೇ ಹೊರತು ದಾರಿ ಮುಖ್ಯವಾಗಿಲ್ಲ. ನ್ಯಾಯವೇ ಪರಮನೀತಿ. ನೀತಿ ಪಥದಲ್ಲಿ ಸಾಗದ ಯಾನ ಯಾವ ತೀರವನ್ನು ಸೇರಿದರೆ ಏನು ಪ್ರಯೋಜನ? ತನ್ನ ಸಹ ಪ್ರಯಾಣಿಕರನ್ನು ದಡ ಮುಟ್ಟಿಸಿ ತಾನೂ ತಲುಪುವವನು ನಿಜದ ನಾವಿಕ, ಬಲಿಷ್ಠ ನಾಯಕ. ತಾನು ಮಾತ್ರ ಬದುಕಬೇಕು ಎನ್ನುವವನು ಭ್ರಮಾಧೀನ ಪಶುವಿನಂತೆ. ತಾವೂ ಉಳಿದು ಭೂಮಿಯನ್ನೂ ಉಳಿಸಿಕೊಳ್ಳುವುದು ಚಿಕ್ಕವರಿಗೂ ದೊಡ್ಡವರಿಗೂ ಇರಬೇಕಾದ ವಿವೇಕ. ಇರುವಷ್ಟು ದಿನ ಎಲ್ಲರೂ ನನ್ನವರು ಎಂದು ಎಲ್ಲರ ಜೊತೆಗೂಡಿ ಹಚ್ಚುವ ಹಣತೆ ಸಾವಿರದ ಸೂರ್ಯರಿಗೆ ಸಮಾನ. ಅಹಂಕಾರವೇ ಮರಣ ಮಮಕಾರವೇ ಜನನ.

ಗುಂಡಣ್ಣ



ಪದಬಂಧ 6282


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

5. ಬಿಲದ ಹತ್ತಿರ ತೊಗಲ ಬಾವಲಿ ಕಾಣುತ್ತಿದೆ (3)
7. ಕನ್ನ ಕೊರೆದಾಗ ಕಾಣಿಸಿದ ದರ್ಪಣ (3)
8. ಮುಳ್ಳುಗಳ ನಡುವೆ ಅರಳುವ ಪುಷ್ಪ (3)
9. ಕರ್ತಾರನಿಗೆ ನಮಿಸುತ್ತಿರುವ ಕೈ! (2)
10. ಕರ್ನಾಟಕದ ಗಾಂಧಿ ಎಂದೇ ಹೆಸರುಗಳಿಸಿದವರು (7)
11. ಹುರಿ ಮಾಡಿದ ಹತ್ತಿ ಎಳೆ (2)
13. ಸೇವಕರು ಎದೆಯ ಮೇಲೆ ಅಡ್ಡ ಧರಿಸುವ ಬಿಲ್ಲೆಯುಳ್ಳ ಪಟ್ಟಿ (3)
16. ಲಾವಣಿ ಹಾಡುತ್ತಿರುವಾಗ ಧರಿಸಿದ ಮೇಲುಹೊದಿಕೆ (3)
17. ಅತ್ಯಾಸೆಯಿಂದ ಕೂಡಿದವನು (3)

ಮೇಲಿಂದ ಕೆಳಕ್ಕೆ

1. ಗಡಿ ಹತ್ತಿರವಿರುವ ಸಾಮಾನುಗಳನ್ನು ಮಾರುವ ಸ್ಥಳ (3)
2. ಆಯುಧದ ಅಂಚು (3)
3. ನೂಲನ್ನು ತೆಗೆಯುವ ಉಪಕರಣ (3)
4. ಎಲ್ಲೆಯಲ್ಲಿರುವ ಕಾಲ ಸೂಚಕ ಯಂತ್ರ (4)
6. ತನ್ನ ಹೆಸರನ್ನೇ ನಾಮಾಂಕಿತ ಮಾಡಿಕೊಂಡಿರುವ ಈ ವಚನಕಾರನ ಹುಟ್ಟೂರು ಚೌಡದಾನಪುರ (7)
9. ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ ಇತ್ಯಾದಿ (2)
10. ಹತ್ತಿರದಲ್ಲೇ ಕಾಣುತ್ತಿರುವ ಅರಳೆ (2)
11. ಬಲಿಯಾಗಿ ಅರ್ಪಿಸುವಿಕೆ (4)
12. ಕಲೆಯಲ್ಲಿ ಬಿದಿರಿನ ಮೊಳಕೆಯೇ! (3)
14. ಲೀಲಾಜಾಲವಾಗಿ ನಡೆದ ಏಲಂ (3)
15. ಒಳ್ಳೆಯ ಅಥವಾ ಕೆಟ್ಟ ನಾತ (3)



6281ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

5.ಭಾಷಾಂತರ 6.ಮಲಯಜ 7.ನಿಯಮ 10.ಜವಾನ 11.ಹಯವದನ 12.ಕಡಲು 13.ಕರಗ 15.ಕರ್ನಾಟಕ 17.ಕೆಂಗುಲಾಬಿ

ಮೇಲಿಂದ ಕೆಳಕ್ಕೆ:

1.ಅಭಾಗಿನಿ 2.ಸ್ತರ 3.ಭೀಮ 4.ಯಜಮಾನ 8.ಮಹಲು 9.ಕವಳ 10.ಜನಕ 12.ಕಳಕಳಿ 14.ಗಡಿಬಿಡಿ 16.ಕಕ್ಷಿ 17.ಕೆಂಡ

ಸುಡೊಕು 6666

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			6	7	4		
3								2
	7			4	8		6	
	4						8	5
8		9		7				
	5		8		4		9	
2				9			3	
4		3		5	2			8
	1		4			5		

6665 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

12 ಜನವರಿ 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ನವಮಿ ಗಂ 12-43 ನಕ್ಷತ್ರ: ಸ್ವಾತಿ ಗಂ 21-06 ಯೋಗ: ಧೃತಿ ಗಂ. 18-12 ಕರಣ: ಗರ ಗಂ. 12-43 ಧನು ಮಾಸದ 28 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 -09-00, ಸೂರ್ಯೋದಯ : 07-00 ಸೂರ್ಯಾಸ್ತ : 06-17, ಮುಸ್ಲಿಂ ದಿನಾಂಕ : 22 ರಜಬ್, ಅದೃಷ್ಟ ಸಂಖ್ಯೆ : 8, 2

ಮೇಷ: ಆಪ್ತಸ್ನೇಹಿತರಲ್ಲಿನ ಭಿನ್ನಾಭಿಪ್ರಾಯಗಳು ಹಲವು ದಿನಗಳವರೆಗೆ ಮುಂದುವರಿಯಬಹುದು. ನವದಂಪತಿ ದೀರ್ಘ ಪ್ರಯಾಣದ ನಂತರ ಮನೆಗೆ ವಾಪಾಸಾಗುವಿರಿ. ಮೊಬೈಲ್ ಮಾರಾಟಗಾರರಿಗೆ ಈ ದಿನ ವಿಶೇಷ.

ವೃಷಭ: ತಪ್ಪುಗಳನ್ನು ಮುಚ್ಚಿಹಾಕುವ ಸಲುವಾಗಿ ಬೇರೆಯವರ ಮೇಲೆ ವೃಥಾ ಆರೋಪ ಹೊರಸುವಿರಿ. ಆಸ್ತಿ ಖರೀದಿಸುವ ಅಥವಾ ಮಾರಾಟ ಮಾಡುವ ವಿಷಯದ ಮಾತುಕತೆ ನಡೆಯುವುದು.

ಮಿಥುನ: ವೈಯಕ್ತಿಕ ವಿಚಾರಗಳಲ್ಲಿ ಅನ್ಯರಿಂದಾಗುವ ಒತ್ತಡಗಳಿಗೆ ಸಿಲುಕಿಕೊಳ್ಳುವುದನ್ನು ತಪ್ಪಿಸಿಕೊಳ್ಳಬೇಕು. ವಿಭಿನ್ನವಾಗಿ ಯೋಚಿಸುವ ಸವಾಲುಗಳಿಗೆ ಪರಿಹಾರ ಸಿಗುತ್ತದೆ.

ಕರ್ಕಾಟಕ: ಹಳೆಯ ಮನಸ್ತಾಪಗಳನ್ನೇ ನೆನೆಸಿಕೊಂಡು ಮತ್ತೆ ಆಪ್ತರಲ್ಲಿ ವಾದವಿವಾದ ತೆಗೆಯಬೇಡಿ. ಪ್ರತಿಭೆಗೆ ತಕ್ಕ ಉದ್ಯೋಗ ದೊರೆತು ಸಂತಸವಾಗಲಿದೆ. ಮಹಾಲಕ್ಷ್ಮಿ ಪೂಜಿಸಿ ಏಳಿಗೆ ಹೊಂದುವಿರಿ.

ಸಿಂಹ: ವಿರೋಧಿಗಳ ಜತೆಯಲ್ಲಿಯೇ ಸಮಯವನ್ನು ಕಳೆಯಬೇಕಾಗುತ್ತದೆ. ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯಲಿವೆ. ರಾಜಕೀಯ ಸೇರುವ ಯೋಚನೆ ಬರುವುದು.

ಕನ್ಯಾ: ಬೇರೆಯವರ ಕೆಲಸವನ್ನು ನಿಮ್ಮ ಕೆಲಸವೆಂದೇ ತಿಳಿದು ಭೇದಭಾವವಿಲ್ಲದೆ ಯಶಸ್ವಿಯಾಗಿ ಮಾಡಿ ಮುಗಿಸುವಿರಿ. ವೃದ್ಧರ ಹಾಗೂ ಅನಾಥ ಮಕ್ಕಳ ಸೇವೆಯಿಂದ ಸಂತೋಷ ಹೊಂದುವಿರಿ.

ತುಲಾ: ಶೀತ ಬಾಧೆಯನ್ನು ಹೋಗಲಾಡಿಸಿಕೊಳ್ಳಲು ಮನೆಮದ್ದಿನ ಅಥವಾ ಆಯುರ್ವೇದದ ಮೊರೆಹೋಗಿ. ಮನರಂಜನೆಗೆ ಸಾಕಷ್ಟು ಸಮಯವನ್ನು ಮೀಸಲಿಟ್ಟು ಸಂತಸದಿಂದ ಇರಿ.

ವೃಶ್ಚಿಕ: ಕಳೆದು ಹೋದ ಜಾನುವಾರು ಹಲವಾರು ದಿನಗಳ ನಂತರ ಮನೆಯ ಜಾಡು ಹಿಡಿದು ಬರಲಿದೆ. ಕೆಲವು ಕೆಲಸ ಕಾರ್ಯಗಳು ಮಾತನಾಡಿದರಷ್ಟೇ ಮುಂದುವರಿಯಲಿದೆ.

ಧನು: ತಾರ್ಕಿಕ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಿ. ಅವಿವಾಹಿತರ ಮನೋಕಾಮನೆಗಳು ಪೂರ್ಣಗೊಳ್ಳುವ ಸಲುವಾಗಿ ದುರ್ಗಾಪರಮೇಶ್ವರಿಯ ಆರಾಧನೆ ಮಾಡಿ.

ಮಕರ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು ರಾಸಾಯನಿಕವಿಜ್ಞಾನದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮ ಅಗತ್ಯವಾಗಿ ಬೇಕಾಗುವುದು. ನೀವೊಬ್ಬ ಅದೃಷ್ಟವಂತರೆಂದು ಅನ್ನಿಸಬಹುದು.

ಕುಂಭ: ಗುರು ವಾಕ್ಯ ಪಾಲಿಸುವುದರಿಂದ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ. ಅರ್ಧಕ್ಕೆ ನಿಂತ ಎಲ್ಲಾ ಕಾರ್ಯಗಳು ಪುನಃ ಚಾಲನೆ ದೊರೆಯಲಿವೆ. ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲತೆ ಇರುತ್ತದೆ.

ಮೀನ: ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿದರೆ, ಬಯಕೆ ಈಡೇರುವುದು. ಸಂಘ-ಸಂಸ್ಥೆಯಲ್ಲಿ ಅಥವಾ ಗ್ರಾಮೀಣ ಬದುಕಿನಲ್ಲಿ ಅಧಿಕಾರ ಸಿಗಲಿದೆ. ಕುಟುಂಬದ ಸಮಸ್ಯೆಗಳನ್ನು ಪರಿಹರಿಸುವಿರಿ.

‘ವಿತ್ತೀಯ ಕೊರತೆ ಮಿತಿ ಮೀರದು’



ನವದೆಹಲಿ (ಪಿಟಿಐ): ‘ಪ್ರಸಕ್ತ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಅಂದಾಜು ಮಾಡಲಾಗಿರುವ ವಿತ್ತೀಯ ಕೊರತೆಯ ಮಿತಿಯನ್ನು ಕೇಂದ್ರ ಸರ್ಕಾರವು ಮೀರುವುದಿಲ್ಲ ಎಂಬ ನಿರೀಕ್ಷೆ ಇದೆ’ ಎಂದು ಪಿಡಬ್ಲ್ಯುಸಿ ಪಾಲುದಾರ ರಾನೆನ್ ಬ್ಯಾನರ್ಜಿ ಹೇಳಿದ್ದಾರೆ. ಜಿಡಿಪಿಯ ಶೇ 4.4ರಷ್ಟಕ್ಕೆ ವಿತ್ತೀಯ ಕೊರತೆಯನ್ನು ಮಿತಿಗೊಳಿಸುವ ಉದ್ದೇಶವನ್ನು ಕೇಂದ್ರವು ಬಜೆಟ್‌ನಲ್ಲಿ ಹೇಳಿದೆ.

ಇದು ಹಣಕಾಸು ನಿರ್ವಹಣೆಯ ವಿಚಾರವಾಗಿ ದೇಶವು ಹೊಂದಿರುವ ಬದ್ಧತೆಯ ಬಗ್ಗೆ ಜಾಗತಿಕ ಮಟ್ಟದ ಹೂಡಿಕೆದಾರರಿಗೆ ನೀಡಿರುವ ಸಕಾರಾತ್ಮಕ ಸಂದೇಶ ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಜಿಡಿಪಿ ಬೆಳವಣಿಗೆಯ ಗುರಿಯನ್ನು (ಹಣದುಬ್ಬರದ ಪರಿಣಾಮವನ್ನು ಪರಿಗಣನೆಗೆ ತೆಗೆದುಕೊಳ್ಳದೆ) ಶೇ 10.1ರಿಂದ ಶೇ 8ಕ್ಕೆ ಪರಿಷ್ಕರಿಸಿತ್ತು. ಇದು ವಿತ್ತೀಯ ಕೊರತೆಯ ಗುರಿಯನ್ನು ಸಾಧಿಸುವ ಸರ್ಕಾರದ ಸಾಮರ್ಥ್ಯದ ಬಗ್ಗೆ ಕಳವಳ ಹುಟ್ಟುಹಾಕಿತ್ತು.

2024–25ರ ಆರ್ಥಿಕ ವರ್ಷದಲ್ಲಿ ಕೇಂದ್ರವು ಶೇ 4.8ರಷ್ಟು ವಿತ್ತೀಯ ಕೊರತೆಯ ಗುರಿಯನ್ನು ಸಾಧಿಸಿತ್ತು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡನೆ ವೇಳೆ, 2025–26ರ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.4ಕ್ಕೆ (ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ₹15.69 ಲಕ್ಷ ಕೋಟಿ) ತಗ್ಗಿಸಲು ಸರ್ಕಾರ ಬಜೆಟ್‌ನಲ್ಲಿ ಗುರಿ ನಿಗದಿ ಮಾಡಲಾಗಿದೆ ಎಂದಿದ್ದರು.

ಕರಗಿದ ₹3.63 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಕಳೆದ ವಾರದ ಷೇರುಪೇಟೆ ವಹಿವಾಟಿನಲ್ಲಿ ಸೂಚ್ಯಂಕಗಳ ಇಳಿಕೆಯಿಂದ ಪ್ರಮುಖ 10 ಕಂಪನಿಗಳ ಪೈಕಿ 7 ಕಂಪನಿಗಳ ಮಾರುಕಟ್ಟೆ ಬಂಡವಾಳ (ಎಂ–ಕ್ಯಾಪ್) ಮೌಲ್ಯವು ₹3.63 ಲಕ್ಷ ಕೋಟಿಯಷ್ಟು ಕರಗಿದೆ.

ಕಳೆದ ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 2,185 ಅಂಶ (ಶೇ 2.54ರಷ್ಟು) ಕುಸಿದಿದೆ. ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ಅತಿ ಹೆಚ್ಚು ಇಳಿಕೆ ಕಂಡಿದೆ.

‘ಅಮೆರಿಕದಿಂದ ಸುಂಕ ಹೆಚ್ಚಳದ ಆತಂಕ ಮತ್ತು ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು ದೇಶದ ಷೇರುಪೇಟೆ ಮೇಲೆ ಪರಿಣಾಮ ಬೀರಿದವು’ ಎಂದು ಎನ್ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್. ಹೇಳಿದ್ದಾರೆ.

ಎಂ–ಕ್ಯಾಪ್ ವಿವರ (₹ಕೋಟಿಗಳಲ್ಲಿ)

ಕಂಪನಿ	ಇಳಿದ/ಏರಿದ ಮೌಲ್ಯ	ಒಟ್ಟು ಎಂ–ಕ್ಯಾಪ್
ರಿಲಯನ್ಸ್ ಇಂಡಸ್ಟ್ರೀಸ್	₹1,58,532 ↓	₹19,96,445
ಎಚ್‌ಡಿಎಫ್‌ಸಿ ಬ್ಯಾಂಕ್	₹96,153 ↓	₹14,44,150
ಭಾರ್ತಿ ಏರ್‌ಟೆಲ್	₹45,274 ↓	₹11,55,987
ಬಜಾಜ್ ಫೈನಾನ್ಸ್	₹18,729 ↓	₹5,97,700
ಎಲ್ ಆ್ಯಂಡ್ ಟಿ	₹18,728 ↓	₹5,53,912
ಟಿಸಿಎಸ್	₹15,232 ↓	₹11,60,682
ಇನ್ಫೊಸಿಸ್	₹10,760 ↓	₹6,70,875
ಐಸಿಐಸಿಐ ಬ್ಯಾಂಕ್	₹34,901 ↑	₹10,03,674
ಎಚ್‌ಯುಎಲ್	₹6,097 ↑	₹5,57,734
ಎಸ್‌ಬಿಐ	₹599 ↑	₹9,23,061

ಲೈಂಗಿಕ ದೌರ್ಜನ್ಯ: ಉಚ್ಚಾಟಿತ ಕಾಂಗ್ರೆಸ್ ಶಾಸಕ ಬಂಧನ

ಪತ್ತನಂತಿಟ್ಟ (ಪಿಟಿಐ): ಲೈಂಗಿಕ ದೌರ್ಜನ್ಯದ ಆರೋಪದ ಮೇಲೆ ಉಚ್ಚಾಟಿತ ಪಾಲಕ್ಕಾಡ್ ಕ್ಷೇತ್ರದ ಕಾಂಗ್ರೆಸ್ ಶಾಸಕ ರಾಹುಲ್ ಮಮ್ಕೂಟತಿಲ್ ಅವರನ್ನು ಪಾಲಕ್ಕಾಡ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜನವರಿ 8ರಂದು ಪತ್ತನಂತಿಟ್ಟ ಜಿಲ್ಲೆಯ ನಿವಾಸಿಯೊಬ್ಬರು ನೀಡಿದ ದೂರಿನ ಮೇರೆಗೆ ರಾಹುಲ್ ವಿರುದ್ಧ ಮೂರನೇ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಲಾಗಿದೆ. ಭಾನುವಾರ ಬೆಳಿಗ್ಗೆ ಅವರನ್ನು ಇಲ್ಲಿನ ಪೊಲೀಸ್ ಶಿಬಿರಕ್ಕೆ ಸ್ಥಳಾಂತರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಸ್ತುತ ಕೆನಡಾದಲ್ಲಿರುವ ಮಹಿಳೆ ವಿಡಿಯೊ ಕಾನ್ಫರೆನ್ಸ್ ಮೂಲಕ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

ಮೂಲಗಳ ಪ್ರಕಾರ, ದೂರುದಾರರು ವಿವಾಹಿತ ಮಹಿಳೆ. ಅವರ ವೈವಾಹಿಕ ಜೀವನದಲ್ಲಿ ಸಮಸ್ಯೆಗಳು ಉಂಟಾದವು. ನಂತರ 2024ರಲ್ಲಿ ರಾಹುಲ್ ಅವರ ಪರಿಚಯವಾಯಿತು. ‘ರಾಹುಲ್ ಮದುವೆಯಾಗುವುದಾಗಿ ಭರವಸೆ ನೀಡಿ 2024ರ ಏಪ್ರಿಲ್‌ನಲ್ಲಿ ಹೋಟೆಲ್‌ವೊಂದರಲ್ಲಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದು ಮಹಿಳೆ ಪೊಲೀಸರಿಗೆ ತಿಳಿಸಿದ್ದಾರೆ. ಅತ್ಯಾಚಾರ ಘಟನೆಗೆ ಮುನ್ನ ಆಕೆಯ ಮೇಲೆ ಕ್ರೂರವಾಗಿ ಹಲ್ಲೆ ನಡೆಸಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ. ಮಹಿಳೆ ಗರ್ಭಿಣಿಯಾದ ಮೇಲೆ ರಾಹುಲ್ ಮದುವೆ ಯಾಗಲು ನಿರಾಕರಿಸಿದ್ದಾರೆ. ಅಲ್ಲದೇ, ಗರ್ಭಪಾತ ಮಾಡಿಸಿ ಕೊಳ್ಳುವಂತೆ ಬೆದರಿಕೆ ಹಾಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತದ ಅಜೇಯ ರಕ್ಷಾ ಕವಚ ಮೋದಿ: ಅಂಬಾನಿ

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ‘ಭಾರತದ ಅಜೇಯ ರಕ್ಷಾ ಕವಚ’ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಬಣ್ಣಿಸಿದ್ದಾರೆ.

‘ಜಗತ್ತು ತ್ವರಿತವಾಗಿ ಬದಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನಿಂದ ಹೊಸ ಸವಾಲುಗಳು ಮತ್ತು ಅನಿರೀಕ್ಷಿತ ಪ್ರಕ್ಷುಬ್ಧತೆ ಸೃಷ್ಟಿಯಾಗಿದೆ. ದೇಶಕ್ಕೆ ಧೈರ್ಯ ತುಂಬುವ ವಿಷಯವೆಂದರೆ ಈ ಸವಾಲುಗಳು ಭಾರತವನ್ನು ತಲುಪುವುದಿಲ್ಲ ಅಥವಾ ದೇಶದ ಜನರಿಗೆ ಸಮಸ್ಯೆ ಉಂಟು ಮಾಡುವುದಿಲ್ಲ. ಏಕೆಂದರೆ, ಪ್ರಧಾನಿ ಮೋದಿ ಅವರು ದೇಶದ ಅಜೇಯ ರಕ್ಷಾ ಕವಚವಾಗಿ ರಕ್ಷಣೆ ನೀಡುತ್ತಿದ್ದಾರೆ’ ಎಂದು ಇಲ್ಲಿ ನಡೆದ ‘ವೈಬ್ರಂಟ್ ಗುಜರಾತ್ ಪ್ರಾದೇಶಿಕ ಸಮ್ಮೇಳನ’ದಲ್ಲಿ (ವಿಜಿಆರ್‌ಸಿ) ಭಾನುವಾರ ಹೇಳಿದ್ದಾರೆ.

‘ಭಾರತವು ಭವಿಷ್ಯಕ್ಕಾಗಿ ತಯಾರಿಯನ್ನಷ್ಟೇ ನಡೆಸುತ್ತಿಲ್ಲ; ಅದು ಭವಿಷ್ಯವನ್ನು ರೂಪಿಸುವ ಕೆಲಸವನ್ನೂ ಮಾಡುತ್ತಿದೆ ಎಂದ ಅವರು, ಕಳೆದ ಐದು ವರ್ಷಗಳಲ್ಲಿ ಗುಜರಾತ್‌ನಲ್ಲಿ ₹3.5 ಲಕ್ಷ ಕೋಟಿಗೂ ಹೆಚ್ಚು ಹೂಡಿಕೆ ಮಾಡಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ ₹7 ಲಕ್ಷ ಕೋಟಿ ಹೂಡಿಕೆ ಮಾಡಲು ನಿರ್ಧರಿಸಲಾಗಿದೆ’ ಎಂದು ಹೇಳಿದ್ದಾರೆ.

ಅವಧಿ ವಿಮೆ ಖರೀದಿಸುವ ಮೊದಲು...

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ನಮಗೆಲ್ಲ ಒಂದು ಬಲವಾದ ನಂಬಿಕೆ ಇರುತ್ತದೆ. ಎಲ್ಲವೂ ನಮ್ಮ ಹಿಡಿತದಲ್ಲಿದೆ ಅಂದುಕೊಂಡಿರುತ್ತೇವೆ. ಪ್ರತಿ ತಿಂಗಳೂ ಸಂಬಳ ಬರುತ್ತಿದೆ, ಮುಂದಿನ 10 ವರ್ಷಗಳಿಗೆ ಬೇಕಾದ ಹೂಡಿಕೆ ಗುರಿಗಳನ್ನು ಹೊಂದಿದ್ದೇವೆ, ಕುಟುಂಬ ಕೂಡ ನೆಮ್ಮದಿಯಾಗಿದೆ ಅಂತ ಭಾವಿಸಿರುತ್ತೇವೆ. ಆದರೆ, ಜೀವನ ಇದ್ದಕ್ಕಿದ್ದ ಹಾಗೆ ಸಂಕಷ್ಟದ ತಿರುವುಗಳನ್ನು ತಂದಿಟ್ಟಾಗ ಎಲ್ಲವೂ ಅಲ್ಲೋಲ ಕಲ್ಲೋಲ. ಮನೆಯ ಯಜಮಾನ/ಯಜಮಾನಿಯ ಜೀವಕ್ಕೆ ತೊಂದರೆ ಆದರೆ ಆ ಇಡೀ ಕುಟುಂಬದ ಹಣಕಾಸಿನ ಸ್ಥಿತಿ ಹಳಿತಪ್ಪುತ್ತದೆ. ಆಗ ಆತನ/ಆಕೆಯ ಅನುಪಸ್ಥಿತಿಯಲ್ಲಿ ಕುಟುಂಬ ಆರ್ಥಿಕವಾಗಿ ಸುರಕ್ಷಿತವಾಗಿರಬೇಕಾದರೆ ಏನು ಮಾಡಬೇಕು ಎಂಬ ಪ್ರಶ್ನೆ ಎದುರಾಗಬಹುದು. ಅದಕ್ಕೆ ಉತ್ತರ ಅವಧಿ ವಿಮೆ (ಟರ್ಮ್ ಇನ್ಶೂರೆನ್ಸ್). ಈ ವಿಮೆ ತೆಗೆದುಕೊಳ್ಳುವಾಗ ಬಹಳಷ್ಟು ಜನ ತಪ್ಪು ಮಾಡುತ್ತಾರೆ. ಹಾಗಾದರೆ ಅವಧಿ ವಿಮೆ ತೆಗೆದುಕೊಳ್ಳುವಾಗ ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳೇನು ಎನ್ನುವ ಬಗ್ಗೆ ತಿಳಿಯುವುದು ಅಗತ್ಯ.

ಅವಧಿ ವಿಮೆ ಅಂದರೆ ಏನು?: ಅವಧಿ ವಿಮೆ ಬಹಳ ಸರಳವಾದ ಒಂದು ವಿಮೆ. ವ್ಯಕ್ತಿ ಒಂದು ನಿರ್ದಿಷ್ಟ ಅವಧಿಗೆ (ಅಂದರೆ 30 ಅಥವಾ 40 ವರ್ಷಗಳವರೆಗೆ) ನಿಶ್ಚಿತ ಕಂತು ಪಾವತಿಸುತ್ತಾನೆ. ಈ ಅವಧಿಯಲ್ಲಿ ಆತ ಸಾವನ್ನಪ್ಪಿದರೆ, ಆತನ ಕುಟುಂಬಕ್ಕೆ ಒಟ್ಟಾಗಿ ಒಂದು ದೊಡ್ಡ ಮೊತ್ತದ ಹಣ ಸಿಗುತ್ತದೆ. ಇದು ಈ ವಿಮೆ ನೀಡುವ ರಕ್ಷೆ. ಇದರಲ್ಲಿ ಬೋನಸ್ ಇಲ್ಲ, ಮೆಚ್ಯೂರಿಟಿ ಮೊತ್ತ ಇಲ್ಲ. ಪಾಲಿಸಿ ಅವಧಿ ಮುಗಿದ ಮೇಲೆ ಪಾಲಿಸಿಯ ಕವರೇಜ್ ಮುಕ್ತಾಯವಾಗುತ್ತದೆ. ಅವಧಿ ವಿಮೆ ಇಷ್ಟೊಂದು ಕಡಿಮೆ ಬೆಲೆಯಲ್ಲಿ ಸಿಗಲು ಇದೇ ಕಾರಣ. ಒಂದು ಅರ್ಥದಲ್ಲಿ ಅವಧಿ ವಿಮೆ ಎಂಬುದು ಹಣಕಾಸಿನ ರಕ್ಷಣೆಯನ್ನು ಪಡೆಯುವ ಪ್ರಕ್ರಿಯೆ. ಇಲ್ಲಿ ವ್ಯಕ್ತಿಯು ಕಂತಿನ ಹಣ ಪಾವತಿಸುವುದು ಲಾಭಕ್ಕಾಗಿ ಅಲ್ಲ, ಬದಲಾಗಿ ಮನಸ್ಸಿನ ಶಾಂತಿಗಾಗಿ.

ವಿಮೆ ಕವರೇಜ್ ವ್ಯಾಪ್ತಿ: ಕಾಯಿಲೆಯಿಂದ ಆಗುವ ಸಾವು, ಅಪಘಾತಗಳು ಮತ್ತು ಸ್ವಾಭಾವಿಕ ಸಾವನ್ನು ಹೆಚ್ಚಿನ ಅವಧಿ ವಿಮೆಗಳು ಒಳಗೊಳ್ಳುತ್ತವೆ. ಆದರೆ ಅವಧಿ ವಿಮೆ ಪಡೆದವರು ಕ್ರಿಮಿನಲ್ ಚಟುವಟಿಕೆಗಳಿಂದ ಮೃತರಾದಲ್ಲಿ, ಪಾಲಿಸಿ ಪಡೆದ ಮೊದಲ ಒಂದು ವರ್ಷದೊಳಗೆ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡರೆ, ಮದ್ಯಪಾನ ಅಥವಾ ಡ್ರಗ್ಸ್ ಸೇವನೆಯಿಂದ ಆಗುವ ಸಾವುಗಳಿಗೆ ಕವರೇಜ್ ಸಿಗುವುದಿಲ್ಲ. ಇವು ಯಾವುದೋ ಒಂದು ಕಂಪನಿಯ ನಿಯಮಗಳಲ್ಲ, ಇವು ಇಡೀ ಉದ್ಯಮದ ನಿಯಮಗಳು.

ಯಾರಿಗೆ ಅವಧಿ ವಿಮೆ ಬೇಕು?: ವ್ಯಕ್ತಿಯ ಆದಾಯದ ಮೇಲೆ ಯಾರಾದರೂ ಅವಲಂಬಿತರಾಗಿದ್ದರೆ, ಅವರಿಗೆ ಅವಧಿ ವಿಮೆ ಬೇಕೇಬೇಕು. ಪತಿ ಅಥವಾ ಪತ್ನಿ, ಮಕ್ಕಳು, ವಯಸ್ಸಾದ ಪೋಷಕರು ಆತನ ಆದಾಯದ ಮೇಲೆ ಅವಲಂಬಿತರಾಗಿದ್ದಾರೆ ಅಂದರೆ ಅವಧಿ ವಿಮೆ ಅತಿ ಅಗತ್ಯ. ವ್ಯಕ್ತಿಯ ಅನುಪಸ್ಥಿತಿಯಿಂದ ಕುಟುಂಬಕ್ಕೆ ಹಣಕಾಸಿನ ಶೂನ್ಯತೆ ಅಥವಾ ಸಂಕಷ್ಟ ಸೃಷ್ಟಿಯಾಗುತ್ತದೆ ಎಂದಾದರೆ, ಅವಧಿ ವಿಮೆ ಮಾಡಿಸುವುದು ಆಯ್ಕೆಯಲ್ಲ, ಅದು ಅಗತ್ಯ ಮತ್ತು ಅನಿವಾರ್ಯ.

ಎಷ್ಟು ಕವರೇಜ್ ಅಗತ್ಯ?: ವ್ಯಕ್ತಿಯ ವಾರ್ಷಿಕ ಆದಾಯದ 15ರಿಂದ 20 ಪಟ್ಟು ಮೊತ್ತವನ್ನು ಅವಧಿ ವಿಮೆ ಕವರೇಜ್ ರೂಪದಲ್ಲಿ ಪಡೆದುಕೊಳ್ಳುವುದು ಉತ್ತಮ. ಉದಾಹರಣೆಗೆ ವ್ಯಕ್ತಿಯ ವಯಸ್ಸು 30 ವರ್ಷವಾಗಿದ್ದು ವಾರ್ಷಿಕ ಆದಾಯ ₹10 ಲಕ್ಷ ಎಂದಾದಲ್ಲಿ, ಕನಿಷ್ಠ ₹2 ಕೋಟಿ ಮೊತ್ತದ ಅವಧಿ ವಿಮೆ ಕವರೇಜ್ ಪಡೆಯಬೇಕು.

ಏಕೆ ₹2 ಕೋಟಿ?: ₹2 ಕೋಟಿಯ ಕವರೇಜ್ ಪಡೆದುಕೊಂಡಾಗ ವಾರ್ಷಿಕ ಶೇ 6ರ ಬಡ್ಡಿ ಗಳಿಕೆ ಲೆಕ್ಕಾಚಾರದಲ್ಲಿ ನಿಶ್ಚಿತ ಠೇವಣಿ ಇರಿಸಿದರೂ ವ್ಯಕ್ತಿಯ ಕುಟುಂಬಕ್ಕೆ ವರ್ಷಕ್ಕೆ ₹12 ಲಕ್ಷ ಆದಾಯ ಸಿಗುತ್ತದೆ. ಈ ಆದಾಯದಿಂದ ಮನೆ ಖರ್ಚು, ಶಾಲಾ ಶುಲ್ಕ, ಇಎಂಐ, ಆಸ್ಪತ್ರೆ ವೆಚ್ಚಗಳನ್ನು ನಿಭಾಯಿಸಲು ಅನುಕೂಲ ಆಗುತ್ತದೆ.

₹1 ಕೋಟಿಯ ಕವರೇಜ್ ಪಡೆದರೆ ವಾರ್ಷಿಕ ಶೇ 6ರ ಬಡ್ಡಿ ಗಳಿಕೆ ಲೆಕ್ಕದಲ್ಲಿ ₹6 ಲಕ್ಷ ಮಾತ್ರ ಸಿಗುತ್ತದೆ. ಬೆಲೆ ಏರಿಕೆಯ ಈ ಕಾಲದಲ್ಲಿ ಮಕ್ಕಳ ಉನ್ನತ ಶಿಕ್ಷಣ, ಮನೆ ಖರ್ಚು, ಈಗಾಗಲೇ ಇರುವ ಸಾಲಗಳು ಮತ್ತು ತುರ್ತು ವೈದ್ಯಕೀಯ ವೆಚ್ಚಗಳನ್ನು ನಿಭಾಯಿಸಲು ಕಷ್ಟವಾಗುತ್ತದೆ. ಹೆಚ್ಚಿನ ಜನ ದೊಡ್ಡ ತಪ್ಪು ಮಾಡುವುದು ಈ ಹಂತದಲ್ಲಿ. ಅವರು ತಮಗೆ ಬೇಕಾದ ಕವರೇಜ್ ಮೊತ್ತವನ್ನು ಬಹಳ ಕಡಿಮೆ ಅಂದಾಜು ಮಾಡುತ್ತಾರೆ.

ಸರಿಯಾದ ಪಾಲಿಸಿ ಅವಧಿ: ಅವಧಿ ವಿಮೆಯಲ್ಲಿ ಪಾಲಿಸಿಯ ಅವಧಿ ಅಥವಾ ಟೆನ್ಯೂರ್ ಎನ್ನುವುದು ಒಮ್ಮೆ ನಿರ್ಧಾರ ಮಾಡಿದ ನಂತರ ಬದಲಾಯಿಸಲು ಸಾಧ್ಯವಾಗದು. ಹೆಚ್ಚಿನ ಅವಧಿ ವಿಮೆ ಯೋಜನೆಗಳು 10 ವರ್ಷದಿಂದ 40 ವರ್ಷಗಳವರೆಗಿನ ಅವಧಿಯನ್ನು ನೀಡುತ್ತವೆ. ವ್ಯಕ್ತಿಗೆ 60 ವರ್ಷ ಅಥವಾ 70 ವರ್ಷ ವಯಸ್ಸಿನವರೆಗೆ ಕವರೇಜ್ ಇರಲಿ. ಏಕೆಂದರೆ ಆ ವಯಸ್ಸಿಗೆ ಸಾಮಾನ್ಯವಾಗಿ ಮಕ್ಕಳು ಆರ್ಥಿಕವಾಗಿ ಸ್ವತಂತ್ರರಾಗಿರುತ್ತಾರೆ. ದೊಡ್ಡ ಸಾಲಗಳು ತೀರಿರುತ್ತವೆ. ವ್ಯಕ್ತಿಯ ನಿವೃತ್ತಿ ನಿಧಿ ಕೈಗೆ ಬಂದಿರುತ್ತದೆ. ಒಂದು ವೇಳೆ ಆ ವ್ಯಕ್ತಿಗೆ ತಡವಾಗಿ ಮದುವೆಯಾಗಿದ್ದರೆ, ವಿಶೇಷ ಕಾಳಜಿ ಬೇಕಾದ ಅವಲಂಬಿತರಿದ್ದರೆ, ಆದಾಯ ಸ್ಥಿರವಾಗಿಲ್ಲದಿದ್ದರೆ, ಅಂತಹ ಸಂದರ್ಭಗಳಲ್ಲಿ ಪಾಲಿಸಿ ಅವಧಿಯನ್ನು ಕಡಿಮೆ ಅಂದಾಜು ಮಾಡುವ ಬದಲು ಸ್ವಲ್ಪ ಹೆಚ್ಚಿಗೆ ಇಟ್ಟುಕೊಳ್ಳುವುದು ಜಾಣತನ. ಏಕೆಂದರೆ ಒಮ್ಮೆ ಪಾಲಿಸಿ ಅವಧಿ ಮುಗಿದರೆ, ಹೊಸ ಪಾಲಿಸಿ ತೆಗೆದುಕೊಳ್ಳುವುದು ದುಬಾರಿ ಕೆಲಸವಾಗುತ್ತದೆ. ಕೆಲವು ಸಲ ಹೊಸ ಪಾಲಿಸಿ ಸಿಗುವುದು ಅಸಾಧ್ಯವೂ ಆಗಬಹುದು.

ವಿಮೆ ಖರೀದಿ ಪ್ರಕ್ರಿಯೆಯಲ್ಲಿ ಪ್ರಮುಖ 3 ಹಂತ

1. **ಪ್ರಸ್ತಾವನೆ ಮತ್ತು ವಿವರ ಒದಗಿಸುವುದು:** ಆಧಾರ್ ಮತ್ತು ಪ್ಯಾನ್ ಕಾರ್ಡ್ ವಿವರ, ಆದಾಯದ ವಿವರ, ಆರೋಗ್ಯ ಸ್ಥಿತಿಗತಿ ಮತ್ತು ಜೀವನಶೈಲಿ ಬಗ್ಗೆ ನಿಖರವಾಗಿ ಮಾಹಿತಿ ಒದಗಿಸುವುದು ಇಲ್ಲಿ ಮುಖ್ಯ. ಆರ್ಥಿಕವಾಗಿ ಎಲ್ಲವನ್ನೂ ಪ್ರಾಮಾಣಿಕವಾಗಿ ತಿಳಿಸಿ, ಯಾವುದೇ ವಿಷಯ ಮುಚ್ಚಿಡಬೇಡಿ. ಒಂದೊಮ್ಮೆ ಧೂಮಪಾನ, ಮದ್ಯಪಾನ ಮಾಡುತ್ತಿದ್ದರೆ, ಸಕ್ಕರೆ ಕಾಯಿಲೆ, ಬಿ.ಪಿ ಅಥವಾ ಇನ್ನಾವುದೇ ಆರೋಗ್ಯ ಸಮಸ್ಯೆ ಇದ್ದರೆ ಅದರ ಬಗ್ಗೆ ಉಲ್ಲೇಖಿಸಿ. ಮಾಹಿತಿ ಮುಚ್ಚಿಟ್ಟಿರುವುದು ವೈದ್ಯಕೀಯ ಪರೀಕ್ಷೆ ವೇಳೆ ಕಂಡುಬಂದರೆ ವಿಮೆ ಅರ್ಜಿಯೇ ತಿರಸ್ಕಾರಗೊಳ್ಳುವ ಸಾಧ್ಯತೆ ಇರುತ್ತದೆ
2. **ವೈದ್ಯಕೀಯ ಪರೀಕ್ಷೆಗಳು:** ವಿಮೆ ಕೊಡುವ ಮುನ್ನ ವಿಮಾ ಕಂಪನಿ ರಕ್ತ ಪರೀಕ್ಷೆ, ಅಗತ್ಯವಿದ್ದರೆ ಇಸಿಜಿ ಮತ್ತು ಒತ್ತಡ ಪರೀಕ್ಷೆ ಮಾಡಿಸುತ್ತದೆ. ಸಾಮಾನ್ಯವಾಗಿ ಈ ಪರೀಕ್ಷೆಗಳನ್ನು ನಿಮ್ಮ ಮನೆಯಲ್ಲೇ ಅಥವಾ ಹತ್ತಿರದ ಯಾವುದಾದರೂ ಲ್ಯಾಬ್‌ನಲ್ಲಿ ಮಾಡಿಕೊಡುತ್ತಾರೆ
3. **ಅಂಡರ್‌ರೈಟಿಂಗ್ ನಿರ್ಧಾರ:** ನಿಮ್ಮ ದಾಖಲೆ ಮತ್ತು ವೈದ್ಯಕೀಯ ವರದಿ ನೋಡಿ ಕಂಪನಿಯು ಈ ಮೂರರಲ್ಲಿ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆ. ಒಂದನೆಯದ್ದು ಮಾನ್ಯ ಮಾಡುವುದು, ಎರಡನೆಯದ್ದು ಏನಾದರೂ ರಿಸ್ಕ್ ಇದ್ದರೆ ಕಂತು ಸ್ವಲ್ಪ ಜಾಸ್ತಿ ಮಾಡಿ ಕೌಂಟರ್-ಆಫರ್ ಮಾಡುವುದು

ಮೂರನೆಯದ್ದು, ಒಂದು ವೇಳೆ ಕಂಪನಿ ನೀಡಿದ ಕೌಂಟರ್-ಆಫರ್ ನಿಮಗೆ ಇಷ್ಟವಾಗದಿದ್ದರೆ, ನೀವು ಅದನ್ನು ತಿರಸ್ಕರಿಸಬಹುದು. ಆಗ ನೀವು ಕಟ್ಟಿದ ಹಣ ನಿಮಗೆ ವಾಪಸ್ ಸಿಗುತ್ತದೆ. ಈ ಇಡೀ ಪ್ರಕ್ರಿಯೆಗೆ ಸಾಮಾನ್ಯವಾಗಿ 3 ರಿಂದ 4 ವಾರಗಳು ಬೇಕಾಗುತ್ತವೆ

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹605	100 ಕ್ಕೆ	₹603
12 ಕ್ಕೆ	₹90		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹511-752
ದ್ವಿತಳಿ (ಬಿ.ವಿ)	₹300-888

ಕ್ರಿಪ್ಟೊ ಕೇಂದ್ರಗಳ ನಿಯಮ ಬಿಗಿ

ಹಣದ ಅಕ್ರಮ ವಹಿವಾಟು ನಿಯಂತ್ರಣಕ್ಕೆ ಕೇಂದ್ರದಿಂದ ಕಠಿಣ ನಿಯಮ

ನವದೆಹಲಿ (ಪಿಟಿಐ): ಡಿಜಿಟಲ್ ಆಸ್ತಿಗಳ ಮಾರುಕಟ್ಟೆಯಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಯುವ ಉದ್ದೇಶದಿಂದ ಕೇಂದ್ರದ ವಿತ್ತೀಯ ಗುಪ್ತದಳವು (ಎಫ್‌ಐಯು) ಕಠಿಣ ನಿಯಮಗಳನ್ನು ಅನಾವರಣ ಮಾಡಿದೆ.

ಹಣದ ಅಕ್ರಮ ವರ್ಗಾವಣೆ ತಡೆಯುವ ಉದ್ದೇಶದ ಹಾಗೂ ಕೆವೈಸಿ (ಗ್ರಾಹಕರಿಗೆ ಸಂಬಂಧಿಸಿದ ಅಗತ್ಯ ಮಾಹಿತಿ ಕಲೆಹಾಕುವುದು) ಪ್ರಕ್ರಿಯೆಗಳ ಕುರಿತಾದ ನಿಯಮಗಳು ಇವು. ಕ್ರಿಪ್ಟೊಕರೆನ್ಸಿ ವಿನಿಮಯ ಸೇವೆಗಳನ್ನು ಒದಗಿಸುವವರು ಇವುಗಳನ್ನು ಪಾಲಿಸಬೇಕಿದೆ.

ಪರಿಷ್ಕೃತ ನಿಯಮಗಳನ್ನು ಜನವರಿ 8ರಂದು ಹೊರಡಿಸಲಾಗಿದೆ. ಇವು ಕ್ರಿಪ್ಟೊ ವಿನಿಮಯ ಕೇಂದ್ರಗಳನ್ನು ‘ವಾಸ್ತವೋಪಮ ಡಿಜಿಟಲ್ ಆಸ್ತಿ (ವಿಡಿಎ) ಸೇವಾದಾತರು’ ಎಂದು ಗುರುತಿಸಿದೆ. ನಿಯಮಗಳ ಪ್ರಕಾರ ಇವರು ಸರಳವಾದ ಕೆಲವು ದಾಖಲೆಪತ್ರಗಳನ್ನು ಗ್ರಾಹಕರಿಂದ ಪಡೆಯುವುದಷ್ಟೇ ಅಲ್ಲದೆ, ಇನ್ನೂ ಹಲವು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕಾಗುತ್ತದೆ.

ವಿನಿಮಯ ಕೇಂದ್ರಗಳ ಸೇವೆಯನ್ನು ಪಡೆಯಲು ಮುಂದಾಗುವ ಗ್ರಾಹಕರು ತಮ್ಮ ಸೆಲ್ಫಿಯನ್ನು ಕ್ಲಿಕ್ಕಿಸಬೇಕು ಎಂದು ನಿಯಮಗಳಲ್ಲಿ ಹೇಳಲಾಗಿದೆ. ಕ್ಯಾಮೆರಾ ಕಣ್ಣಿನ ಆಚೆಯಲ್ಲಿ ಗ್ರಾಹಕ ನಿಜಕ್ಕೂ ನಿಂತಿದ್ದಾನೆ ಎಂಬುದನ್ನು ತಂತ್ರಾಂಶವು ಆತನ ಕಣ್ಣುರೆಪ್ಪೆಗಳ ಚಲನೆ ಅಥವಾ ತಲೆಯ ಚಲನೆಯ ಮೂಲಕ ಗುರುತಿಸುತ್ತದೆ. ಈ ಪ್ರಕ್ರಿಯೆಯನ್ನು ಅನುಸರಿಸುವುದರಿಂದಾಗಿ ಭಾವಚಿತ್ರ ಅಥವಾ ಡೀಪ್‌ಫೇಕ್ ಚಿತ್ರ ಬಳಸಿ ವಂಚನೆ ಎಸಗುವುದನ್ನು ತಡೆಯಲು ಸಾಧ್ಯವಾಗುತ್ತದೆ.

ಬಿಗಿ ನಿಲುವು: ಕೇಂದ್ರ ಹಣಕಾಸು ಸಚಿವಾಲಯದ ಅಧೀನದಲ್ಲಿ ಕೆಲಸ ಮಾಡುವ ಎಫ್‌ಐಯು, ಕ್ರಿಪ್ಟೊ ಆಸ್ತಿಗಳನ್ನು ಬಳಸಿ ನಡೆಯುವ ವಹಿವಾಟುಗಳು ಇನ್ನೊಬ್ಬರಿಗೆ ಗೊತ್ತಾಗದಂತೆ ಮಾಡುವುದರ ವಿರುದ್ಧ ಕಠಿಣ ನಿಲುವು ತಾಳಿದೆ. ಕೆಲವು ಕಂಪನಿಗಳು ಷೇರುಗಳ ಮಾದರಿಯಲ್ಲಿ ಡಿಜಿಟಲ್ ಟೋಕನ್‌ಗಳನ್ನು ನೀಡುವುದನ್ನು ನಿರುತ್ತೇಜಿಸುವ ಉದ್ದೇಶವನ್ನು ನಿಯಮಗಳು ಹೊಂದಿವೆ.



ಭಾರತದಲ್ಲಿ ಕೆಲಸ ನಿರ್ವಹಿಸುತ್ತಿರುವ ಕ್ರಿಪ್ಟೊ ವಿನಿಮಯ ಕೇಂದ್ರಗಳಿಗೆ ಎಫ್‌ಐಯು ಏಕಗವಾಕ್ಷಿ ನಿಯಂತ್ರಣ ನಿಯಂತ್ರಣ ವ್ಯವಸ್ಥೆಯಂತಿದೆ. ಎಲ್ಲ ಕ್ರಿಪ್ಟೊ ವಿನಿಮಯ ಕೇಂದ್ರಗಳು ಎಫ್‌ಐಯು ಬಳಿ ನೋಂದಣಿ ಮಾಡಿಕೊಳ್ಳಬೇಕು, ಅನುಮಾನಕ್ಕೆ ಆಸ್ಪದ ನೀಡುವಂತಹ ವಹಿವಾಟುಗಳ ಬಗ್ಗೆ ಕಾಲಕಾಲಕ್ಕೆ ವರದಿ ಮಾಡಬೇಕು, ಹಣದ ಅಕ್ರಮ ವರ್ಗಾವಣೆ ತಡೆಯಲು, ಭಯೋತ್ಪಾದನಾ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುವುದನ್ನು ತಡೆಯಲು ತಮ್ಮ ಗ್ರಾಹಕರ ದಾಖಲೆ ನಿರ್ವಹಿಸಬೇಕು ಎಂದು ನಿಯಮಗಳಲ್ಲಿ ಹೇಳಲಾಗಿದೆ.

‘ಹೆಚ್ಚಿನ ರಿಸ್ಕ್’ ಇರುವ ವ್ಯಕ್ತಿಗಳ ಕೆವೈಸಿ ಪರಿಷ್ಕರಣೆ ಪ್ರಕ್ರಿಯೆಯನ್ನು ಆರು ತಿಂಗಳಿಗೆ ಒಮ್ಮೆ ನಡೆಸಬೇಕು, ಇತರ ಎಲ್ಲರ ಕೆವೈಸಿ ಪರಿಷ್ಕರಣೆಯನ್ನು ವರ್ಷಕ್ಕೊಮ್ಮೆ ನಡೆಸಬೇಕು ಎಂದು ವಿನಿಮಯ ಕೇಂದ್ರಗಳಿಗೆ ಹೇಳಲಾಗಿದೆ.

ತೆರಿಗೆಗಳ್ಳರ ಸ್ವರ್ಗ ಎಂದು ಹೆಸರಾಗಿರುವ ದೇಶಗಳ ಜೊತೆ ನಂಟು ಹೊಂದಿರುವವರ, ಹೆಚ್ಚಿನ ರಿಸ್ಕ್ ಇರುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ವಿಚಾರವಾಗಿ ಮುಕ್ತ ಮೂಲಗಳಿಂದ ಮಾಹಿತಿ ಕಲೆಹಾಕಬೇಕು. ಎಫ್‌ಎಟಿಎಫ್‌ನ (ಫೈನಾನ್ಶಿಯಲ್ ಆ್ಯಕ್ಷನ್ ಟಾಸ್ಕ್ ಫೋರ್ಸ್) ಬೂದು ಅಥವಾ ಕಪ್ಪುಪಟ್ಟಿಯಲ್ಲಿ ಇರುವ ಪ್ರದೇಶಗಳಿಗೆ ಸೇರಿದವರ, ಲಾಭದ ಉದ್ದೇಶವಿಲ್ಲದ ಸಂಘಟನೆಗಳ (ಎನ್‌ಪಿಒ), ಸರ್ಕಾರಗಳಲ್ಲಿ ಮಹತ್ವದ ಹುದ್ದೆ ಹೊಂದಿರುವ ವ್ಯಕ್ತಿಗಳ ಬಗ್ಗೆಯೂ ಹೆಚ್ಚಿನ ಮಾಹಿತಿಯನ್ನು ಒಗ್ಗೂಡಿಸಬೇಕು ಎಂದು ನಿಯಮಗಳು ಹೇಳಿವೆ.

ಷೇರುಗಳ ಬದಲು ಡಿಜಿಟಲ್ ಟೋಕನ್‌ಗಳನ್ನು ನೀಡುವ ಪ್ರಕ್ರಿಯೆಯಲ್ಲಿ ಹೆಚ್ಚಿನ ಮಟ್ಟದ ಹಣದ ಅಕ್ರಮ ವರ್ಗಾವಣೆ ಹಾಗೂ ಭಯೋತ್ಪಾದಕ ಚಟುವಟಿಕೆಗಳಿಗೆ ಹಣದ ನೆರವು ಒದಗಿಸುವ ಆಯಾಮಗಳೂ ಇರುತ್ತವೆ. ಹೀಗೆ ಡಿಜಿಟಲ್ ಟೋಕನ್ ನೀಡುವುದನ್ನು ಸಮರ್ಥಿಸಿಕೊಳ್ಳಲು ಆರ್ಥಿಕ ತರ್ಕ ಇರುವುದಿಲ್ಲ ಎಂದು ನಿಯಮಗಳಲ್ಲಿ ಹೇಳಲಾಗಿದೆ.

ವಿನಿಮಯ ಕೇಂದ್ರಗಳು ಗ್ರಾಹಕರ ಗುರುತು, ವಿಳಾಸ ಮತ್ತು ವಹಿವಾಟಿನ ವಿವರವನ್ನು ಕನಿಷ್ಠ ಐದು ವರ್ಷಗಳವರೆಗೆ ಹಾಗೇ ಇರಿಸಬೇಕು, ತನಿಖೆ ನಡೆಯುತ್ತಿದ್ದರೆ ಅದು ಪೂರ್ಣಗೊಳ್ಳುವವರೆಗೆ ಉಳಿಸಿಕೊಳ್ಳಬೇಕು ಎಂದು ನಿಯಮಗಳಲ್ಲಿ ತಾಕೀತು ಮಾಡಲಾಗಿದೆ.

ಬಿಗಿ ನಿಯಮಗಳು

- ಬಳಕೆದಾರರು ತಮ್ಮ ಖಾತೆಯನ್ನು ತೆರೆಯಲು ಆರಂಭಿಸಿದ ಸ್ಥಳದ ನಿರ್ದಿಷ್ಟವಾದ ಅಕ್ಷಾಂಶ ಮತ್ತು ರೇಖಾಂಶದ ವಿವರ, ದಿನಾಂಕ, ಐ.ಪಿ. ವಿಳಾಸವನ್ನು ವಿನಿಮಯ ಕೇಂದ್ರಗಳು ದಾಖಲಿಸಿಕೊಳ್ಳಬೇಕು
- ಗ್ರಾಹಕನ ಖಾತೆಗೆ ಒಂದು ರೂಪಾಯಿ ವರ್ಗಾವಣೆ ಮಾಡಿ, ಗ್ರಾಹಕ ನೀಡಿರುವ ಬ್ಯಾಂಕ್ ಖಾತೆಯು ಸಕ್ರಿಯವಾಗಿದೆ ಹಾಗೂ ಅದು ಆ ಗ್ರಾಹಕನಿಗೇ ಸೇರಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು
- ಪ್ರಾಥಮಿಕ ದಾಖಲೆಯಾಗಿ ಪ್ಯಾನ್ ಸಂಖ್ಯೆ ನೀಡುವುದಷ್ಟೇ ಅಲ್ಲದೆ, ಗ್ರಾಹಕರು ಪಾಸ್‌ಪೋರ್ಟ್, ಆಧಾರ್ ಸಂಖ್ಯೆ ಅಥವಾ ಮತದಾರರ ಗುರುತಿನ ಚೀಟಿಯನ್ನು ಎರಡನೆಯ ದಾಖಲೆಯಾಗಿ ಒದಗಿಸಬೇಕು. ಒಟಿಪಿ ದೃಢೀಕರಿಸಲು ಇ–ಮೇಲ್ ವಿಳಾಸ ಹಾಗೂ ದೂರವಾಣಿ ಸಂಖ್ಯೆ ನೀಡಬೇಕು
- ವಿನಿಮಯ ಕೇಂದ್ರದ ಗ್ರಾಹಕನಾಗಿ ಹೆಸರು ನೋಂದಾಯಿಸಿಕೊಳ್ಳುವ ವ್ಯಕ್ತಿಯೇ ನಂತರ ಅದರ ಅಪ್ಲಿಕೇಷನ್ ಬಳಕೆ ಮಾಡುತ್ತಾನೆ, ಖಾತೆ ತೆರೆಯುವ ಪ್ರಕ್ರಿಯೆಯನ್ನು ಆತ ತಾನೇ ಖುದ್ದಾಗಿ ಆರಂಭಿಸಿದ್ದಾನೆ ಎಂಬುದನ್ನು ಕೂಡ ವಿನಿಮಯ ಕೇಂದ್ರಗಳು ಖಾತರಿಪಡಿಸಿಕೊಳ್ಳಬೇಕು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಯೋಟಾ, ಬ್ರಿಟಾನಿಯಾ, ಟಾಟಾಮೋಟಾರ್ಸ್, TVSಗಳಿಗೆ SSLC,PUC, Degree, Diploma, ITIನವರು 18,500/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571.

Part-Time Jobs

ಮನೆಯಿಂದಲೇ ಕೆಲಸಗಳಿಗೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಕರ್ನಾಟಕದಾದ್ಯಂತ ಕಂಪನಿಗಳಿಗೆ ಆದ್ಯತೆ. 20,000/- 35,000/- ಸಂಪಾದಿಸಿ, ಕೊರಿಯರ್ ಸೌಲಭ್ಯವಿದೆ. 9964311522, 9742133993

ಪ್ರವಾಸ

Travel

09.01.2026 05.03.2026 04.04.2026 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.03.2026 06.04.2026 ದುಬೈ,ಅಬುದಾಬಿ 5 ದಿನಗಳು. 16.02.2026 10.03.2026 ಶ್ರೀಲಂಕಾ 7 ದಿನಗಳು. 06.02.2026 09.03.2026 04.04.2026 ಭೂತಾನ್ 8 ದಿನಗಳು. 18.02.2026 20.03.2026 04.04.2026 ಅಸ್ಸಾಂ,ಮೇಘಾಲಯ 9 ದಿನಗಳು. 13.03.2026 ಕಾಶಿ,ಗಯಾ,ಅಯೋಧ್ಯೆ 7 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು-03. 9448402248 7022547922

ಕಾಶ್ಮೀರ್ ಗುಲ್ಮಾರ್ಗ ಪೆಹಲ್ ಗಾಂ ವೈಷ್ಣೋದೇವಿ 10ದಿನಗಳು. ಅಹಮದಾಬಾದ್ ರನ್‌ಆಫ್‌ಕಚ್ ಗಿರ್‌ಫಾರೆಸ್ಟ್ ಡಿಯು ಸೋಮನಾಥ್ ದ್ವಾರಕಾ 10 ದಿನಗಳು. ಉದಯಪುರ್ ಮೌಂಟ್‌ಅಬು ಜೈಸಲ್‌ಮೇರ್ ಪುಷ್ಕರ್ ಜೈಪುರ್ 10 ದಿನಗಳು. ಗ್ವಾಲಿಯರ್ ಖಜುರಹೋ ಮಾರ್ಬಲ್‌ರಾಕ್ಸ್ ಭೂಪಾಲ್ ಮಾಹೇಶ್ವರ್ ಉಜ್ಜಯಿನಿ,ಓಂಕಾರೇಶ್ವರ 10 ದಿನಗಳು. ಅಸ್ಸಾಂ,ಮೇಘಾಲಯ ಅರುಣಾಚಲ ಪ್ರದೇಶ ತ್ರೀ ಸಿಸ್ಟರ್ಸ್ 11 ದಿನಗಳು. ಮಾರ್ಚ್ ಏಪ್ರಿಲ್ ನಲ್ಲಿ ಸಂಪರ್ಕಿಸಿ. 26508956 9980993631 ಶ್ರೀಚೈತನ್ಯ ಟ್ರಾವಲ್ಸ್ ಬೆಂಗಳೂರು.18.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

‘ಪ್ರತೀಕಾರಕ್ಕಾಗಿ ‘ಭದ್ರತೆ’ ಬಲಗೊಳಿಸಿ’

ನವದೆಹಲಿ (ಪಿಟಿಐ): ಭಾರತ ಗಡಿಯಲ್ಲಿ ಭದ್ರತೆಯನ್ನು ಬಲಪಡಿಸಬೇಕು. ಪ್ರತಿಯೊಂದು ಕ್ಷೇತ್ರದಲ್ಲೂ ಭದ್ರತೆ ಹೆಚ್ಚಿಸಬೇಕು. ಇತಿಹಾಸದಲ್ಲಿ ನಡೆದ ದಾಳಿಗಳ ವಿರುದ್ಧ ‘ಪ್ರತೀಕಾರ’ಕ್ಕಾಗಿ ಮತ್ತು ಮುಂದೆ ಅಂಥ ದಾಳಿಗಳನ್ನು ತಡೆಯಲು ಭದ್ರತೆಯನ್ನು ಬಲಗೊಳಿಸಬೇಕು ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಹೇಳಿದರು.



ಅಜಿತ್ ಡೊಭಾಲ್

ವಿಕಸಿತ ಭಾರತ ಯುವ ಪ್ರತಿನಿಧಿಗಳ ಸಂವಾದ ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದ ಅವರು, ‘ನೀವೆಲ್ಲಾ ಅದೃಷ್ಟವಂತರು, ಸ್ವತಂತ್ರ ಭಾರತದಲ್ಲಿ ಜನಿಸಿದ್ದೀರಿ. ನಾನು ವಸಾಹತಾಗಿದ್ದ ಭಾರತದಲ್ಲಿ ಜನಿಸಿದೆ. ನನ್ನ ಪೂರ್ವಜರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಅನೇಕ ವಿಚಾರಣೆಗಳನ್ನು ಎದುರಿಸಿದರು’ ಎಂದು ಹೇಳಿದರು.

‘ಭಗತ್ ಸಿಂಗ್ ಅವರಂತಹ ವ್ಯಕ್ತಿಗಳನ್ನು ಗಲ್ಲಿಗೇರಿಸಲಾಯಿತು, ಸುಭಾಷ್ ಚಂದ್ರ ಬೋಸ್ ಅವರು ಜೀವನವಿಡೀ ಕಷ್ಟಪಟ್ಟರು ಮತ್ತು ನಮಗೆ ಸ್ವಾತಂತ್ರ್ಯ ಕೊಡಿಸಲು ಮಹಾತ್ಮ ಗಾಂಧಿ ಅವರು ಸತ್ಯಾಗ್ರಹ ಮಾಡಿದರು’ ಎಂದು ತಿಳಿಸಿದರು.

‘ಸೇಡು ಅಥವಾ ಪ್ರತೀಕಾರ ಎಂಬುದು ಒಳ್ಳೆಯ ಪದವಲ್ಲ. ಆದರೆ, ಸರಿಯಾಗಿ ಬಳಸಿದರೆ ಅದು ದೊಡ್ಡ ಶಕ್ತಿಯಾಗಬಹುದು. ನಾವು ನಮ್ಮ ಇತಿಹಾಸದ ವಿರುದ್ಧ ಸೇಡು ತೀರಿಸಿಕೊಳ್ಳಬೇಕು. ಗಡಿ ಭದ್ರತೆಯ ವಿಷಯದಲ್ಲಿ ಮಾತ್ರವಲ್ಲದೆ ಆರ್ಥಿಕತೆ, ಸಾಮಾಜಿಕ ಅಭಿವೃದ್ಧಿ ಸೇರಿದಂತೆ ಪ್ರತಿಯೊಂದು ವಿಚಾರದಲ್ಲಿಯೂ ಈ ದೇಶವನ್ನು ಶ್ರೇಷ್ಠ ಹಂತಕ್ಕೆ ಕೊಂಡೊಯ್ಯಬೇಕು’ ಎಂದು ಪ್ರತಿಪಾದಿಸಿದರು.

‘ಒಮ್ಮೆ ನೆಪೋಲಿಯನ್, ‘ಕುರಿಯೊಂದರ ನೇತೃತ್ವದ 1,000 ಸಿಂಹಗಳ ಗುಂಪಿಗೆ ನಾನು ಹೆದರುವುದಿಲ್ಲ, ಅದೇ ಸಿಂಹವೊಂದರ ನೇತೃತ್ವದ 1,000 ಕುರಿಗಳ ಹಿಂಡಿಗೆ ಹೆದರುತ್ತೇನೆ’ ಎಂದಿದ್ದರು. ನಾಯಕತ್ವ ಎನ್ನುವುದು ಅಷ್ಟು ಮಹತ್ವದ್ದು’ ಎಂದು ಹೇಳಿದರು.

‘ನಾವು ಪ್ರಗತಿಶೀಲ ಸಮಾಜವನ್ನು ಹೊಂದಿದ್ದೇವೆ. ಬೇರೆ ನಾಗರಿಕತೆಗಳು ಅಥವಾ ದೇಗುಲಗಳ ಮೇಲೆ ನಾವು ದಾಳಿ ನಡೆಸಿಲ್ಲ. ಆದರೆ ಭದ್ರತೆಯ ವಿಚಾರದಲ್ಲಿ ಇತಿಹಾಸ ಕಲಿಸಿದ ಪಾಠವನ್ನು ಅರ್ಥ ಮಾಡಿಕೊಳ್ಳುವಲ್ಲಿ ಎಡವಿದ್ದೇವೆ’ ಎಂದು ವಿವರಿಸಿದರು.

‘ಹಿಂದೆ ಕಲಿತ ಪಾಠಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯ. ಈ ದೇಶದ ಯುವಜನರು ಅದನ್ನು ಮರೆತರೆ ದೇಶದ ಪಾಲಿಗೆ ಅದು ದುರಂತವಾಗಬಹುದು’ ಎಂದು ಹೇಳಿದರು.

ಪಾಕಿಸ್ತಾನದಲ್ಲಿ ಹಿಂದೂ ರೈತನಿಗೆ ಗುಂಡಿಕ್ಕಿ ಹತ್ಯೆ

ಕರಾಚಿ (ಪಿಟಿಐ): ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹಿಂದೂ ರೈತನೊಬ್ಬನನ್ನು ಜಮೀನ್ದಾರನ ಜಮೀನಿನಲ್ಲಿ ಮನೆ ನಿರ್ಮಿಸಿದ್ದಕ್ಕಾಗಿ ಗುಂಡಿಕ್ಕಿ ಕೊಲ್ಲಲಾಗಿದೆ. ಘಟನೆ ವಿರೋಧಿಸಿ ಹಿಂದೂ ಸಮುದಾಯದಿಂದ ವ್ಯಾಪಕ ಪ್ರತಿಭಟನೆ ನಡೆದಿದೆ.

ಕಲೇಶ್ ಕೊಹ್ಲಿ (23) ಹತ್ಯೆಗೀಡಾದ ರೈತ.

ಆರೋಪಿಗಳಾದ ಜಮೀನ್ದಾರ ಸರ್ಫರಾಜ್ ನಿಜಾಮನಿ ಮತ್ತು ಆತನ ಸಹಾಯಕ ಜಫರುಲ್ಲಾ ಖಾನ್‌ನನ್ನು ಶನಿವಾರ ರಾತ್ರಿ ಪೊಲೀಸರ ವಿಶೇಷ ತಂಡ ಹೈದರಾಬಾದ್‌ನಲ್ಲಿ ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜನವರಿ 4ರಂದು ಘಟನೆ ನಡೆದಿದ್ದು, ನಿಜಾಮನಿ ಒಡೆತನದ ಭೂಮಿಯಲ್ಲಿ ಮನೆ ನಿರ್ಮಿಸುತ್ತಿದ್ದಾರೆ ಎಂದು ಆರೋಪಿಸಿ ಕೊಹ್ಲಿಗೆ ಗುಂಡಿಕ್ಕಲಾಯಿತು. ಈ ವೇಳೆ ತೀವ್ರ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಅವರು ಮೃತಪಟ್ಟಿದ್ದಾರೆ.

ಡಿಜಿಟಲ್ ಅರೆಸ್ಟ್ ಹೆಸರಲ್ಲಿ ವೃದ್ಧ ದಂಪತಿಗೆ ₹14.85 ಕೋಟಿ ವಂಚನೆ

ನವದೆಹಲಿ (ಪಿಟಿಐ): ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ದೆಹಲಿಯ ಓಂ ತನೇಜಾ (80) ಅವರ ಪತ್ನಿ ಇಂದಿರಾ(77) ಅವರಿಗೆ ವಂಚಕರು ₹14.85 ಕೋಟಿ ವಂಚಿಸಿದ್ದಾರೆ.

ಓಂ ತನೇಜಾ ದೆಹಲಿ ಐಐಟಿಯ ಮಾಜಿ ವಿದ್ಯಾರ್ಥಿಯಾಗಿದ್ದು, ಅಮೆರಿಕ ಸರ್ಕಾರ, ವಿಶ್ವಸಂಸ್ಥೆಯಲ್ಲಿ 48 ವರ್ಷಗಳ ಕಾಲ ಕೆಲಸ ಮಾಡಿದ್ದರು. ಇಂದಿರಾ ಅವರು ವೈದ್ಯೆಯಾಗಿದ್ದರು. 2016ರಲ್ಲಿ ಭಾರತಕ್ಕೆ ಮರಳಿ ದಕ್ಷಿಣ ದೆಹಲಿಯ ಗ್ರೇಟರ್ ಕೈಲಾಸ್‌ನಲ್ಲಿ ನೆಲಸಿದ್ದಾರೆ. ಇವರ ಮೂವರು ಮಕ್ಕಳು ವಿದೇಶದಲ್ಲಿದ್ದಾರೆ.

‘ವಂಚನೆಯ ಕುರಿತು ಪೊಲೀಸರಿಗೆ ತಕ್ಷಣವೇ ಮಾಹಿತಿ ನೀಡದಿರುವುದು ನಾವು ಮಾಡಿದ ಅತಿ ದೊಡ್ಡ ತಪ್ಪು’ ಎಂದು ದಂಪತಿ ತಿಳಿಸಿದ್ದಾರೆ.

ಈ ಕುರಿತು ಇ–ಎಫ್‌ಐಆರ್ ದಾಖಲಿಸಿರುವ ದೆಹಲಿ ಪೊಲೀಸರ ಸೈಬರ್ ಕ್ರೈಂ ವಿಭಾಗದ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ದಂಪತಿಯನ್ನು ಬೆದರಿಸಲು, ಮಾನಸಿಕವಾಗಿ ನಿಯಂತ್ರಿಸಲು ಅವರ ವಯಸ್ಸು, ವೈದ್ಯಕೀಯ ಪರಿಸ್ಥಿತಿಯನ್ನು



ಆರೋಪಿಗಳು ಲಾಭ ಪಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಏನಾಗಿತ್ತು?: ‘ಡಿಸೆಂಬರ್ 24ರಂದು ಟೆಲಿಕಾಂ ನಿಯಂತ್ರಣ ಪ್ರಾಧಿಕಾರದ ಹೆಸರಿನಲ್ಲಿ ನನಗೆ ದೂರವಾಣಿ ಕರೆ ಮಾಡಿದ್ದ ಆರೋಪಿಗಳು ನಿಮ್ಮ ದೂರವಾಣಿಯಿಂದ ಅಶ್ಲೀಲ ಕರೆಗಳು ಬರುತ್ತಿವೆ ಎಂದು 26 ಮಂದಿ ದೂರು ಸಲ್ಲಿಸಿದ್ದಾರೆ ಎಂದು ತಿಳಿಸಿದ್ದರು. ಅಲ್ಲದೇ, ನೀವು ಹಣ ಅಕ್ರಮ ವರ್ಗಾವಣೆ ಮಾಡಿದ್ದು, ನಮ್ಮ ವಿರುದ್ಧ ಮಹಾರಾಷ್ಟ್ರದಲ್ಲಿ ಎಫ್‌ಐಆರ್ ದಾಖಲಾಗಿದ್ದು, ಅರೆಸ್ಟ್ ವಾರಂಟ್ ಜಾರಿಯಾಗಿದೆ ಎಂದು ಬೆದರಿಕೆ ಹಾಕಿದ್ದರು’ ಎಂದು ಇಂದಿರಾ ಘಟನೆಯನ್ನು ವಿವರಿಸಿದ್ದಾರೆ.

‘ನಂತರ ವಿಡಿಯೊ ಕರೆ ಮಾಡಿ ₹500 ಕೋಟಿ ಹಣ ಅಕ್ರಮ ವರ್ಗಾವಣೆ ಆರೋಪ ಹೊರಿಸಿ, ಬಂಧಿಸುವುದಾಗಿ ಬೆದರಿಕೆ ಹಾಕಿದ್ದರು. ಅಲ್ಲದೇ, ನಮಗೆ ಸಂಬಂಧಿಸಿದ ಸಿಮ್ ಕಾರ್ಡ್, ಆಧಾರ್‌ಕಾರ್ಡ್ ತೋರಿಸಿ ದುರುಪಯೋಗವಾಗಿದೆ ಎಂದು ತಿಳಿಸಿದ್ದರು.

ನಂತರ, ಅವರು ತಿಳಿಸಿದ ಖಾತೆಗೆ ಹಣ ವರ್ಗಾವಣೆ ಮಾಡುವಂತೆ ತಿಳಿಸಿದ್ದರು. ಹಣ ವರ್ಗಾವಣೆಗೆ ಹಿಂದೇಟು ಹಾಕಿದ ವೇಳೆ ನಿರಂತರ ಬೆದರಿಕೆಯೊಡ್ಡಿದರು. ಡಿಸೆಂಬರ್ 24ರಿಂದ ಜನವರಿ 9ರ ತನಕ ಕ್ರಮವಾಗಿ ₹2 ಕೋಟಿ, ₹2.5 ಕೋಟಿ, ₹2.1 ಕೋಟಿ ಸೇರಿದಂತೆ 8 ಸಲ ಹಣ ಪಡೆದಿದ್ದಾರೆ. ಬ್ಯಾಂಕ್ ಅಧಿಕಾರಿಗಳಿಗೂ ಕೇಳಿದರೆ ಹೂಡಿಕೆ ಮಾಡುತ್ತಿರುವುದಾಗಿ ತಿಳಿಸುವಂತೆ ಹೇಳಿ, ಒಟ್ಟಾರೆ ₹14.85 ಕೋಟಿ ವಂಚಿಸಿದ್ದಾರೆ’ ಎಂದು ಇಂದಿರಾ ವಿವರಿಸಿದ್ದಾರೆ.

ಜ.9ರಂದು ಕರೆ ಬರುವುದು ನಿಂತ ವೇಳೆ ವಂಚನೆಗೆ ಒಳಗಾಗಿರುವುದು ದಂಪತಿಗೆ ಅರಿವಾಗಿದ್ದು, ಪೊಲೀಸರಿಗೆ ದೂರು ನೀಡಿದ್ದಾರೆ.

ಗಂಭೀರ ಪ್ರಕರಣಗಳ ತ್ವರಿತ ವಿಚಾರಣೆ ನಡೆಸಿ: ಸುಪ್ರೀಂ

ನವದೆಹಲಿ: ಕೊಲೆ, ವರದಕ್ಷಿಣೆ ಸಾವು, ಅತ್ಯಾಚಾರ ಸೇರಿದಂತೆ ಇನ್ನಿತರೆ ಸೂಕ್ಷ್ಮ ಮತ್ತು ಗಂಭೀರ ವಿಷಯಗಳ ವಿಚಾರಣೆಯನ್ನು ತಡೆಹಿಡಿಯುವ ಮಧ್ಯಂತರ ಆದೇಶಗಳ ಜಾರಿಗೆ ಸಂಬಂಧಿಸಿದ ಅರ್ಜಿಗಳನ್ನು ತ್ವರಿತವಾಗಿ ವಿಚಾರಣೆಗೆ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಎಲ್ಲ ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳಿಗೆ ಸೂಚಿಸಿದೆ.

ವರದಕ್ಷಿಣೆ ಸಾವಿನ ಪ್ರಕರಣದಲ್ಲಿ ದೋಷಾರೋಪ ಸಲ್ಲಿಸುವುದರ ವಿರುದ್ಧ ಆರೋಪಿ ಮತ್ತು ಅವರ ಕುಟುಂಬ ಸದಸ್ಯರು ಸಲ್ಲಿಸಿದ ಮನವಿಯನ್ನು ತಿರಸ್ಕರಿಸಲು ರಾಜಸ್ಥಾನ ಹೈಕೋರ್ಟ್ 23 ವರ್ಷ ತೆಗೆದುಕೊಂಡಿರುವುದು ‘ಮನಸ್ಸನ್ನು ಕಲಕಿದ ಮತ್ತು ತುಂಬಾ ನೋವಿನ ವಿಷಯ’ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ಪೀಠವು ಅಭಿಪ್ರಾಯಪಟ್ಟಿದೆ.

ರಾಜಸ್ಥಾನ ಹೈಕೋರ್ಟ್ 2003ರಲ್ಲಿ ಕ್ರಿಮಿನಲ್ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಮಧ್ಯಂತರ ತಡೆಯಾಜ್ಞೆ ನೀಡಿತ್ತು. ಇದೀಗ ಆ ಅರ್ಜಿಯನ್ನು ತಿರಸ್ಕರಿಸಿದೆ.

ಹೈಕೋರ್ಟ್ ಆದೇಶದ ವಿರುದ್ಧ ಮೃತ ಮಹಿಳೆಯ ಪತಿ ವಿಜಯ್‌ಕುಮಾರ್ ಮತ್ತು ಇತರರು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ ನ್ಯಾಯಪೀಠವು, ‘ಹೈಕೋರ್ಟ್‌ಗಳು ನೀಡಿದ ಮಧ್ಯಂತರ ಆದೇಶದ ಬಲದ ಮೇಲೆ ಇಂತಹ ಗಂಭೀರ ಅಪರಾಧಗಳ ಕ್ರಿಮಿನಲ್ ವಿಚಾರಣೆಗಳು ವರ್ಷಗಳ ಅವಧಿ ಬಾಕಿ ಉಳಿದಿದ್ದರೆ, ಅದು ನ್ಯಾಯದ ಅಪಹಾಸ್ಯವಲ್ಲದೇ ಮತ್ತೇನಲ್ಲ’ ಎಂದಿದೆ.

‘ನ್ಯಾಯಾಲಯವು ಎಲ್ಲರನ್ನೂ ಪರಿಗಣಿಸಿ ನ್ಯಾಯ ಮಾಡಬೇಕು. ಆರೋಪಿಗಳ ಜೊತೆ ಮಾತ್ರ ನ್ಯಾಯ ಮಾಡಲು ಸಾಧ್ಯವಿಲ್ಲ’ ಎಂದು ಹೇಳಿದೆ.

ಕ್ಯೂಬಾಕ್ಕೆ ಅಮೆರಿಕದ ಅಧ್ಯಕ್ಷ ಟ್ರಂಪ್ ಎಚ್ಚರಿಕೆ

‘ತಕ್ಷಣ ಒಪ್ಪಂದ ಮಾಡಿಕೊಳ್ಳಿ’

ವಾಷಿಂಗ್ಟನ್/ ವೆಸ್ಟ್ ಪಾಮ್ ಬೀಚ್, ಅಮೆರಿಕ (ಎಪಿ/ ಎಎಫ್‌ಪಿ): ‘ಅಮೆರಿಕದ ಜತೆ ತಕ್ಷಣ ಒಪ್ಪಂದ ಮಾಡಿಕೊಳ್ಳದಿದ್ದರೆ, ಗಂಭೀರ ಪರಿಣಾಮ ಎದುರಿಸಬೇಕಾದೀತು’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾನುವಾರ ಕ್ಯೂಬಾಕ್ಕೆ ಎಚ್ಚರಿಕೆ ನೀಡಿದ್ದಾರೆ.



‘ಇನ್ನಷ್ಟು ತಡವಾಗುವ ಮುನ್ನ ಒಪ್ಪಂದ ಮಾಡಿಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ’ ಎಂದು ‘ಟ್ರುತ್ ಸೋಷಿಯಲ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ವೆನೆಜುವೆಲಾದಲ್ಲಿ ಸೇನಾ ಕಾರ್ಯಾಚರಣೆ ಕೈಗೊಂಡ ಒಂದು ವಾರದ ಬಳಿಕ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

‘ಕ್ಯೂಬಾಗೆ ವೆನೆಜುವೆಲಾದಿಂದ ತೈಲ ಅಥವಾ ಹಣ ಹೋಗುವುದಿಲ್ಲ. ವೆನೆಜುವೆಲಾದಿಂದ ಹರಿದು ಬರುತ್ತಿದ್ದ ಅಪಾರ ಪ್ರಮಾಣದ ತೈಲ ಮತ್ತು ಹಣದಿಂದ ಕ್ಯೂಬಾ ಹಲವು ವರ್ಷಗಳ ಕಾಲ ಬದುಕಿದೆ. ಅದಕ್ಕೆ ಪ್ರತಿಯಾಗಿ ವೆನೆಜುವೆಲಾದ ಕೊನೆಯ ಇಬ್ಬರು ಸರ್ವಾಧಿಕಾರಿಗಳಿಗೆ ಕ್ಯೂಬಾ ಭದ್ರತೆ ನೀಡಿತು. ಆದರೆ, ಇನ್ನು ಮುಂದೆ ಅದು ನಡೆಯದು’ ಎಂದಿದ್ದಾರೆ.

ತೈಲ ಕಂಪನಿಗಳಿಗೆ ನ್ಯಾಯಾಂಗದಿಂದ ರಕ್ಷಣೆ: ವೆನೆಜುವೆಲಾದಲ್ಲಿ ಹೂಡಿಕೆ ಮಾಡಲಿರುವ ತೈಲ ಕಂಪನಿಗಳಿಗೆ ನ್ಯಾಯಾಲಯದ ವಿಚಾರಣೆಯಿಂದ ರಕ್ಷಣೆ ಒದಗಿಸುವ ಕಾರ್ಯಾಕಾರಿ ಆದೇಶಕ್ಕೆ ಟ್ರಂಪ್ ಸಹಿ ಹಾಕಿದ್ದಾರೆ.

‘ವೆನೆಜುವೆಲಾದಲ್ಲಿ ಈಗಿನ ಸ್ಥಿತಿಯಲ್ಲಿ ವಾಣಿಜ್ಯಾತ್ಮಕ ಹಾಗೂ ಮೂಲಸೌಕರ್ಯದ ಚೌಕಟ್ಟು ರೂಪಿಸಿದರೆ, ಹೂಡಿಕೆ ಮಾಡಲು ಅಸಾಧ್ಯವಾದ ಸ್ಥಿತಿಯಿದೆ’ ಎಂದು ಅಮೆರಿಕದ ಅತಿ ದೊಡ್ಡ ತೈಲ ಕಂಪನಿಯಾದ ‘ಎಕ್ಸಾನ್‌ಮೊಬಿಲ್’ನ ಸಿಇಒ ಡರೆನ್ ವುಡ್ಸ್ ಅವರು ಶುಕ್ರವಾರ ನಡೆದ ಸಭೆಯಲ್ಲಿ ಕಳವಳ ವ್ಯಕ್ತಪಡಿಸಿದ್ದರು.

ಈ ಸಮಸ್ಯೆಗೆ ಪರಿಹಾರ ಒದಗಿಸುವ ಭರವಸೆ ನೀಡಿದ್ದ ಡೊನಾಲ್ಡ್ ಟ್ರಂಪ್, ಯಾವುದೇ ಒಪ್ಪಂದಗಳಿದ್ದರೂ ವೆನೆಜುವೆಲಾ ಸರ್ಕಾರದ ಬದಲಿಗೆ ಅಮೆರಿಕದ ಜೊತೆಗೆ ನೇರವಾಗಿ ವಹಿವಾಟು ನಡೆಸುವ ಆದೇಶ ಜಾರಿ ಮಾಡಲಾಗುವುದು. ನ್ಯಾಯಾಲಯದ ವಿಚಾರಣೆಯಿಂದ ರಕ್ಷಣೆ ಒದಗಿಸಲಾಗುವುದು’ ಎಂದು ತಿಳಿಸಿದ್ದರು. ಇದರ ಬೆನ್ನಲ್ಲೇ, ಟ್ರಂಪ್ ಅವರ ಈ ಆದೇಶ ಹೊರಬಿದ್ದಿದೆ.

ತೈಲ ನಿಕ್ಷೇಪ: ಹೂಡಿಕೆದಾರರಿಗೆ ರಕ್ಷಣೆ

ವೆನೆಜುವೆಲಾದಲ್ಲಿನ ತೈಲ ನಿಕ್ಷೇಪಗಳ ಮೇಲೆ ಹೂಡಿಕೆ ಮಾಡುವವರಿಗೆ ಸಂಪೂರ್ಣ ರಕ್ಷಣೆ ನೀಡಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭರವಸೆ ನೀಡಿದ್ದಾರೆ.

ವಿವಿಧ ತೈಲ ಕಂಪನಿಗಳ ಕಾರ್ಯನಿರ್ವಾಹಕರು, ಪ್ರತಿನಿಧಿಗಳ ಜತೆ ಶುಕ್ರವಾರ ಸಭೆ ನಡೆಸಿದ ಟ್ರಂಪ್, ವೆನೆಜುವೆಲಾದಲ್ಲಿನ ತೈಲ ನಿಕ್ಷೇಪಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಅಮೆರಿಕ ಮುಂದಾಗಿದೆ. ಇದಕ್ಕಾಗಿ ಶ್ವೇತಭವನವು ಸುಮಾರು 100 ಶತಕೋಟಿ ಡಾಲರ್ (₹902 ಕೋಟಿ) ಹೂಡಿಕೆ ಸಂಗ್ರಹಿಸುವ ಹಾದಿಯಲ್ಲಿದೆ ಎಂದು ತಿಳಿಸಿದ್ದಾರೆ.

ಪ್ರತೀಕಾರಕ್ಕೆ ಸಿದ್ಧ: ಇರಾನ್ ಎಚ್ಚರಿಕೆ

ಒಂದನೇ ಪುಟದಿಂದ....

‘ಟ್ರಂಪ್ ಜತೆ ಆಟ ಬೇಡ’: ಈ ಬೆಳವಣಿಗೆಗಳ ಬೆನ್ನಲ್ಲೇ ಅಮೆರಿಕದ ವಿದೇಶಾಂಗ ಇಲಾಖೆ ಇರಾನ್‌ಗೆ ಎಚ್ಚರಿಕೆ ನೀಡಿದ್ದು, ‘ಟ್ರಂಪ್ ಜತೆ ಆಟವಾಡಬೇಡಿ. ಅವರು ಏನನ್ನಾದರೂ ಮಾಡುತ್ತೇನೆ ಎಂದು ಹೇಳಿದರೆ ಅದನ್ನು ಮಾಡದೇ ಬಿಡುವುದಿಲ್ಲ’ ಎಂದಿದೆ.

‘ಗಲಭೆಕೋರರಿಂದ ಸಮಾಜ ನಾಶ’: ಪ್ರತಿಭಟನಕಾರರ ಅಹವಾಲನ್ನು ಅಧಿಕಾರಿಗಳು ಆಲಿಸಲಿದ್ದಾರೆ ಎಂದ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್, ಗಲಭೆಕೋರರ ಬಗ್ಗೆ ಎಚ್ಚರದಿಂದ ಇರುವಂತೆ ನಿರ್ದೇಶಿಸಿದ್ದಾರೆ.

‘ಗಲಭೆಕೋರರು ಇಡೀ ಸಮಾಜವನ್ನು ನಾಶ ಮಾಡಲು ಯತ್ನಿಸು ತ್ತಿದ್ದಾರೆ. ಅವರ ಬಗ್ಗೆ ಎಚ್ಚರದಿಂದ ಇರಬೇಕು ಮತ್ತು ಅವರ ಉದ್ದೇಶ ಈಡೇರದಂತೆ ನೋಡಿಕೊಳ್ಳಬೇಕು’ ಎಂದು ಅಧ್ಯಕ್ಷರು ಸೂಚಿಸಿದ್ದಾರೆ.

ಇರಾನ್ ದಬ್ಬಾಳಿಕೆಯ ಸರ್ಕಾರದಿಂದ ಶೀಘ್ರ ಬಿಡುಗಡೆ ಪಡೆಯಲಿ ಎಂದು ಆಶಿಸುತ್ತೇವೆ. ಇಸ್ರೇಲ್– ಇರಾನ್ ದೇಶಗಳು ಶಾಂತಿ, ಸಮೃದ್ಧಿಯೆಡೆಗೆ ನಾಗರಿಕರ ಭವಿಷ್ಯ ರೂಪಿಸುವಲ್ಲಿ ಶ್ರಮಿಸಲಿವೆ
ಬೆಂಜಮಿನ್ ನೆತನ್ಯಾಹು, ಪ್ರಧಾನಿ



ನಟರಾಜ್ ಹಾಗೂ ನಿರೀಕ್ಷಾ ಶೆಟ್ಟಿ

ರತುನಿಯ ಹಿಂದೆ ಹೋದ ಕರಿಕಾಡ

ನಟರಾಜ್ ಹಾಗೂ ನಿರೀಕ್ಷಾ ಶೆಟ್ಟಿ ಜೋಡಿಯಾಗಿ ನಟಿಸಿರುವ 'ಕರಿಕಾಡ' ಚಿತ್ರದ 'ರತುನಿ, ರತುನಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಗಿಲ್ಲಿ ವೆಂಕಟೇಶ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರ ಫೆಬ್ರುವರಿ 6ರಂದು ತೆರೆಗೆ ಬರಲಿದೆ.

ಗೀತೆಗೆ ಶಶಾಂಕ್ ಶೇಷಗಿರಿ ಸಂಗೀತವಿದ್ದು, ನಾಗೇಂದ್ರ ಪ್ರಸಾದ್ ಸಾಹಿತ್ಯ ರಚಿಸಿದ್ದಾರೆ. ಶಂಶಾಕ್ ಶೇಷಗಿರಿ ಹಾಗೂ ಐಶ್ವರ್ಯಾ ರಂಗರಾಜನ್ ಹಾಡಿಗೆ ಧ್ವನಿಯಾಗಿದ್ದಾರೆ.

'ಸಿನಿಮಾ ಮುಗಿದು ಬಿಡುಗಡೆ ಹಂತ ತಲುಪಿದ್ದೇವೆ. 'ಕಬ್ಬಿನ ಜೊಲ್ಲೆ' ಹಾಡಿಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು. ಅದೇ ರೀತಿ ಈ ಹಾಡು ಕೂಡ ಜನರಿಗೆ ಇಷ್ಟವಾಗಬಹುದು ಎಂಬ ಭರವಸೆಯಿದೆ. ಹಾಡು, ಟೈಟಲ್‌ನಿಂದ ಏನೂ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಸಿನಿಮಾ ಬೇರೆಯೇ ಇದೆ. ಜನ ನಮ್ಮನ್ನು ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಮಾಡಬೇಕಿದೆ. ಚಿತ್ರ ಬಿಡುಗಡೆ ಭಯ ಶುರುವಾಗಿದೆ. ಇನ್ನೊಂದೆಡೆ ಜನ ಕೈ ಬಿಡುವುದಿಲ್ಲ ಎಂಬ ನಂಬಿಕೆಯೂ ಇದೆ ' ಎಂದರು ಕಾಡ ನಟರಾಜ್.

ಅತಿಶಯ್ ಜೈನ್ ಹಾಗೂ ಶಶಾಂಕ್ ಶೇಷಗಿರಿ ಸಂಗೀತ, ಜೀವನ್ ಗೌಡ ಛಾಯಾಚಿತ್ರಗ್ರಹಣ, ದೀಪಕ್ ಸಿ.ಎಸ್ ಸಂಕಲನ ಚಿತ್ರಕ್ಕಿದೆ. ❖

'ರಾಮ್ ರಹೀಮ್' ಶೀಘ್ರದಲ್ಲಿ ತೆರೆಗೆ

ಖುಷಿ ನಿರ್ಮಿಸಿ, ನಿರ್ದೇಶಿಸಿರುವ 'ರಾಮ್ ರಹೀಮ್' ಚಿತ್ರ ಫೆಬ್ರುವರಿಯಲ್ಲಿ ತೆರೆಗೆ ಬರಲಿದೆ. ಚಿತ್ರತಂಡ ಇತ್ತೀಚೆಗಷ್ಟೇ ಚಿತ್ರದ ಶೋರೀಲ್ ಬಿಡುಗಡೆಗೊಳಿಸಿ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಿದೆ.

'ಶೋ ರೀಲ್‌ನಲ್ಲಿ 'ಯಾರೂ ಸಿನಿಮಾ ನೋಡಬೇಡಿ' ಎಂದು ಹೇಳಿದ್ದೇನೆ. ಅದಕ್ಕೆ ಕಾರಣವೂ ಇದೆ. ಇದು ಯಾವುದೇ ಗಿಮಿಕ್ ಅಲ್ಲ. ಕಾರಣವನ್ನು ಚಿತ್ರ ಬಿಡುಗಡೆಯ ದಿನ ನಾನೇ ತಿಳಿಸುತ್ತೇನೆ. ಈಗ ಸಿನಿಮಾ ಮಾಡುವುದು ಕಷ್ಟ. ಮಾಡಿದರೂ ತೆರೆಗೆ ತರುವುದು ಇನ್ನೂ ಕಷ್ಟ. ಹಾಗಾಗಿ ಈ ಚಿತ್ರವನ್ನು ನಾನೇ ವಿತರಣೆ ಮಾಡುತ್ತೇನೆ. ಸಾಮಾನ್ಯವಾಗಿ ಎಲ್ಲರೂ ಚಿತ್ರದ ಟೀಸರ್, ಟ್ರೇಲರ್ ಬಿಡುಗಡೆ ಮಾಡುತ್ತಾರೆ. ಆದರೆ ನಾನು 11 ನಿಮಿಷ 22 ಸೆಕೆಂಡ್ ಅವಧಿಯ ಶೋ ರೀಲ್ ಅನ್ನು ನಮ್ ಖುಷಿ ಯೂಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆ ಮಾಡಿದ್ದೇನೆ' ಎಂದರು ಖುಷಿ.

ಹಿಂದೂ, ಮುಸ್ಲಿಂ ಹುಡುಗರ ನಡುವಿನ ತ್ರಿಕೋನ ಪ್ರೇಮಕಥೆಯನ್ನು ಚಿತ್ರ ಹೊಂದಿದೆ. ಅರುಣ್ ಕ್ಯಾದಿಗೆರ, ಕಿರಣ್ ಈಡಿಗ, ರಾಜೇಶ್ವರಿ, ಅಮರೇಶ್ ಮಲ್ಲಾಪುರ ಮುಂತಾದವರು ನಟಿಸಿದ್ದಾರೆ. ❖



ಚಿತ್ರತಂಡ



ಪ್ರಮೋದ್

'ರತ್ನನ್‌ಪ್ರಪಂಚ' ಖ್ಯಾತಿಯ ನಟ ಪ್ರಮೋದ್ ನಟನೆಯ 'ಹಲ್ಕಾ ಡಾನ್' ಚಿತ್ರ ಎರಡು ಹಂತಗಳ ಚಿತ್ರೀಕರಣ ಪೂರ್ಣಗೊಳಿಸಿದೆ. ಛಲಾ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಪ್ರಮೋದ್‌ಗೆ ಅಮೃತಾ ಅಯ್ಯಂಗಾರ್ ಜೋಡಿಯಾಗಿದ್ದಾರೆ.ಶ್ರೀ

'ಟಗರು', 'ಸಲಗ' ಹಾಗೂ 'ಯುಐ' ಚಿತ್ರಗಳನ್ನು ನಿರ್ಮಿಸಿರುವ ಕೆ.ಪಿ.ಶ್ರೀಕಾಂತ್ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. 'ಎರಡು ಹಂತದ ಚಿತ್ರೀಕರಣ ಮುಗಿದಿವೆ. ಮುಂದಿನ ಒಂದು ಶೆಡ್ಯೂಲ್ ಬೆಂಗಳೂರು ಹಾಗೂ ಮತ್ತೊಂದು ಮಂಗಳೂರಿನಲ್ಲಿ ನಡೆಯಲಿದೆ. ಈ ವರ್ಷ ಜೂನ್ ವೇಳೆಗೆ ಚಿತ್ರ ತೆರೆಗೆ ಬರಲಿದೆ. ಆ್ಯಕ್ಷನ್, ಮಾಸ್ ಅಂಶಗಳಿರುವ ಚಿತ್ರ' ಎಂದಿದ್ದಾರೆ ಕೆ.ಪಿ.ಶ್ರೀಕಾಂತ್.

ಚಿತ್ರಕ್ಕೆ 'ಸಾಯಿ ಕುಮಾರ್ ಫ್ಯಾನ್' ಎಂಬ ಅಡಿಬರಹವಿದ್ದು, ಸಾಯಿಕುಮಾರ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ಖುಷಿ' ಚಿತ್ರದ ನಾಯಕಿ ಚೈತ್ರಾ ಹಳ್ಳಿಕೇರಿ ಈ ಸಿನಿಮಾದಲ್ಲಿ ಮತ್ತೆ ಬಣ್ಣ ಹಚ್ಚಿದ್ದಾರೆ. ರಮೇಶ್ ಇಂದಿರಾ, ಜ್ಯೋತಿ ರೈ, ಅಚ್ಯುತ್ ಕುಮಾರ್, ಓಂಪ್ರಕಾಶ್ ರಾವ್ ಮೊದಲಾದವರು ತಾರಾಬಳಗದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗಿನಲ್ಲಿ ಏಕಕಾಲಕ್ಕೆ ಈ ಸಿನಿಮಾ ನಿರ್ಮಾಣವಾಗುತ್ತಿದೆ. ವಿ. ಹರಿಕೃಷ್ಣ ಸಂಗೀತ, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

ತುರ್ಕ್‌ಮಾನ್ ಗೇಟ್: 18ಕ್ಕೆ ಏರಿದ ಬಂಧಿತರ ಸಂಖ್ಯೆ

ನವದೆಹಲಿ (ಪಿಟಿಐ): ತುರ್ಕ್‌ಮಾನ್ ಗೇಟ್ ಕಲ್ಲುತೂರಾಟ ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಭಾನುವಾರ ಮತ್ತಿಬ್ಬರನ್ನು ಬಂಧಿಸಿದ್ದಾರೆ. ಇದರಿಂದ ಬಂಧಿತರ ಸಂಖ್ಯೆ 18ಕ್ಕೆ ಏರಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕಾನೂನು ಸುವ್ಯವಸ್ಥೆ ಕಾಪಾಡಲು ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು ಮತ್ತು ಅರೆಸೈನಿಕ ಪಡೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮಸೀದಿಗೆ ಹೊಂದಿಕೊಂಡಿರುವ ಜಾಗ ಮತ್ತು ತುರ್ಕ್‌ಮಾನ್ ಗೇಟ್ ಹತ್ತಿರದ ಸ್ಮಶಾನದಲ್ಲಿನ ಒತ್ತುವರಿ ತೆರವು ಕಾರ್ಯವನ್ನು ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಇತ್ತೀಚೆಗೆ ಕೈಗೆತ್ತಿಕೊಂಡಿತ್ತು. ಜೆಸಿಬಿ ಕಾರ್ಯಾಚರಣೆ ಆರಂಭಿಸುತ್ತಿದ್ದಂತೆ ಕೆಲ ಕಿಡಿಗೇಡಿಗಳು ಎಂಸಿಡಿ ಸಿಬ್ಬಂದಿ, ಪೊಲೀಸರತ್ತ ಕಲ್ಲು ತೂರಾಟ ನಡೆಸಿದ್ದರು. ಈ ಘಟನೆಯಲ್ಲಿ ಠಾಣಾಧಿಕಾರಿ ಸೇರಿದಂತೆ ಐವರು ಪೊಲೀಸರು ಗಾಯಗೊಂಡಿದ್ದರು.

ಆಸ್ಪತ್ರೆಯಿಂದ ಮನೆಗೆ ಮರಳಿದ ಸೋನಿಯಾ ಗಾಂಧಿ

ನವದೆಹಲಿ (ಪಿಟಿಐ): ಅಸ್ತಮಾ ಕಾಯಿಲೆಗೆ ಚಿಕಿತ್ಸೆ ಪಡೆಯಲು ಇಲ್ಲಿನ ಶ್ರೀ ಗಂಗಾರಾಮ್ ಆಸ್ಪತ್ರೆಗೆ ದಾಖಲಾಗಿದ್ದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಭಾನುವಾರ ಮನೆಗೆ ತೆರಳಿದ್ದಾರೆ.



ಸೋನಿಯಾ ಗಾಂಧಿ

ಒಂದು ವಾರದ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದ ಸೋನಿಯಾ ಅವರು ಚಿಕಿತ್ಸೆಗೆ ಸ್ಪಂದಿಸಿದರು. ಅವರು ಉತ್ತಮ ಚೇತರಿಕೆ ಕಂಡಿದ್ದಾರೆ. ಮನೆಯಲ್ಲೇ ಮುಂದಿನ ಚಿಕಿತ್ಸೆ ಮುಂದುವರಿಸಲು ಸಲಹೆ ನೀಡಲಾಗಿದೆ ಎಂದು ಆಸ್ಪತ್ರೆ ಅಧಿಕಾರಿಗಳು ತಿಳಿಸಿದರು.

ಶ್ವಾಸಕೋಶಕ್ಕೆ ಸೋಂಕು ತಗುಲಿ ಅಸ್ತಮಾ ಉಲ್ಬಣಗೊಂಡಿದೆ ಎಂದು ಚಿಕಿತ್ಸೆ ನೀಡಿದ ವೈದ್ಯರು ತಿಳಿಸಿದರು.

ವಿಮಾನ ಅಪಘಾತ ತನಿಖೆ ಆರಂಭ

ಭುವನೇಶ್ವರ (ಪಿಟಿಐ): ರೂರ್ಕೆಲಾ ಬಳಿ ಶನಿವಾರ ಸಣ್ಣ ವಿಮಾನ ಅಪಘಾತಕ್ಕೀಡಾದ ಪ್ರಕರಣದ ಕುರಿತು ವಿಮಾನ ಅಪಘಾತ ತನಿಖಾ ಸಂಸ್ಥೆಯ ಮೂವರು ಸದಸ್ಯರ ತಂಡ ಭಾನುವಾರ ತನಿಖೆ ಆರಂಭಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಇಂಡಿಯಾ ಒನ್' ವಿಮಾನವು ತುರ್ತು ಅಪಘಾತಕ್ಕೀಡಾಗಿ ಕನಿಷ್ಠ ಆರು ಮಂದಿ ಗಾಯಗೊಂಡಿದ್ದರು.

ಸಿಬಿಐ ತನಿಖೆಗೆ ಇ.ಡಿ ಅರ್ಜಿ

'ಐ–ಪ್ಯಾಕ್' ಕಚೇರಿ ಮೇಲಿನ ಇ.ಡಿ ದಾಳಿ ವೇಳೆ ಅಡ್ಡಿ ಆರೋಪ

ನವದೆಹಲಿ (ಪಿಟಿಐ): 'ಐ–ಪ್ಯಾಕ್' ಕಚೇರಿಯ ಮೇಲೆ ಜ8ರಂದು ಜಾರಿ ನಿರ್ದೇಶನಾಲಯ (ಇ.ಡಿ) ನಡೆಸಿದ ದಾಳಿ ವೇಳೆ ಪಶ್ಚಿಮ ಬಂಗಾಳ ಸರ್ಕಾರ ಅಡ್ಡಿಪಡಿಸಿದ ಕುರಿತು ಸಿಬಿಐ ತನಿಖೆ ಕೋರಿ ಜಾರಿ ನಿರ್ದೇಶನಾಲಯವು ಸುಪ್ರೀಂಕೋರ್ಟ್ ಮೊರೆ ಹೋಗಿದೆ.



ಪಶ್ಚಿಮ ಬಂಗಾಳ ಸರ್ಕಾರ ಇದಕ್ಕೆ ಪ್ರತಿಯಾಗಿ ಕೇವಿಯಟ್ ಸಲ್ಲಿಸಿದ್ದು, ಯಾವುದೇ ಆದೇಶ ಹೊರಡಿಸುವ ಮುನ್ನ ತನ್ನ ವಾದ ಆಲಿಸುವಂತೆ ಕೋರಿದೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ರಾಜ್ಯ ಪೊಲೀಸರು ಶೋಧ ಕಾರ್ಯಾಚರಣೆ ವೇಳೆ ಅಡ್ಡಿಪಡಿಸಿ, ಭೌತಿಕ ಹಾಗೂ ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ಕೊಂಡೊಯ್ದಿದ್ದು, ಶಾಸನಬದ್ಧ ಕಾರ್ಯನಿರ್ವಹಣೆಗೆ ಅಡ್ಡಿಪಡಿಸಿದ್ದಾರೆ ಎಂದು ಇ.ಡಿ ಯು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಿದೆ.

ಇ.ಡಿ ಅಧಿಕಾರಿಗಳ ಗುರುತಿಸುವ ಪ್ರಕ್ರಿಯೆ: 'ಐ–ಪ್ಯಾಕ್' ಕಚೇರಿ ಮತ್ತು ಅದರ ನಿರ್ದೇಶಕ ಪ್ರತೀಕ್ ಜೈನ್ ಅವರ ನಿವಾಸದ ಮೇಲೆ ದಾಳಿ ನಡೆಸಿದ ಜಾರಿ ನಿರ್ದೇಶನಾಲಯದ ಅಧಿಕಾರಿಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಪೊಲೀಸರು ಆರಂಭಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು, ಇ.ಡಿ ಯಿಂದ ಔಪಚಾರಿಕವಾಗಿ ಅಧಿಕಾರಿಗಳ ವಿವರಗಳನ್ನು ಪಡೆಯಲು ಮುಂದಾಗಿದ್ದಾರೆ ಎಂದು ಅವರು ಹೇಳಿದ್ದಾರೆ.

ಇ.ಡಿ ಸಹಾಯಕ ನಿರ್ದೇಶಕರು ಇತರ ಅಧಿಕಾರಿಗಳ ಜತೆಗೂಡಿ ಈ ದಾಳಿ ನಡೆಸಿದ್ದಾರೆ ಎಂಬುದು ಗೊತ್ತಾಗಿದೆ. ಈ ಕುರಿತು ಅಧಿಕೃತವಾಗಿ ಮಾಹಿತಿ ಪಡೆಯಲಾಗುವುದು. ದಾಳಿ ನಡೆಸಿದ ಅಧಿಕಾರಿಗಳ ಮಾಹಿತಿ ಒದಗಿಸುವಂತೆ ಇ.ಡಿಗೆ ಈಮೇಲ್ ಮಾಡಲಾಗುವುದು. ಅದೇ ರೀತಿ ಇ.ಡಿ ತಂಡಕ್ಕೆ ಭದ್ರತೆ ನೀಡಲು ಬಂದಿದ್ದ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಆರು ಸಿಬ್ಬಂದಿಯ ಮಾಹಿತಿ ನೀಡುವಂತೆ ಸಿಆರ್‌ಪಿಎಫ್ ಅನ್ನು ಕೋರಲಾಗುವುದು ಎಂದಿದ್ದಾರೆ.

'ಬಂಗಾಳ: ಆಡಳಿತ ಯಂತ್ರ ಕುಸಿತ'

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಅಡಿಯಲ್ಲಿ ಸಾಂವಿಧಾನಿಕ ಆಡಳಿತವು ಸಂಪೂರ್ಣ ಕುಸಿತ ಕಂಡಿದೆ ಎಂದು ಬಿಜೆಪಿ ಬಂಗಾಳ ಘಟಕದ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಆರೋಪಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಂಗಾಳದಲ್ಲಿ ಚುನಾಯಿತ ಸರ್ಕಾರವು ತನ್ನ ನಿಜವಾದ ಅಧಿಕಾರ ಚಲಾಯಿಸುತ್ತಿಲ್ಲ' ಎಂದು ಟೀಕಿಸಿದರು.

'ಐ–ಪ್ಯಾಕ್' ಕಚೇರಿ ಮೇಲಿನ ಇ.ಡಿ ದಾಳಿ ಸಮಯದಲ್ಲಿ ನಡೆದ ಬೆಳವಣಿಗೆಗಳನ್ನು ಉಲ್ಲೇಖಿಸಿದ ಅವರು, 'ಸಾಂವಿಧಾನಿಕ ಚೌಕಟ್ಟಿನಿಂದ ಹೊರಗಿರುವ ವ್ಯಕ್ತಿಗಳು' ರಾಜ್ಯದಲ್ಲಿ ದೀರ್ಘಕಾಲದಿಂದ ಆಡಳಿತ ನಡೆಸುತ್ತಿದ್ದಾರೆ. ಪೊಲೀಸರಿಗೂ ಸೂಚನೆಗಳನ್ನು ನೀಡುತ್ತಿರುವ ಅವರು ಪಂಚಾಯತ್‌ಗೆ ಸಂಬಂಧಿಸಿದ ನಿರ್ಧಾರಗಳ ಮೇಲೂ ಪ್ರಭಾವ ಬೀರುತ್ತಿದ್ದಾರೆ ಎಂದು ಆರೋಪಿಸಿದರು.

'ಮುಖ್ಯಮಂತ್ರಿ ಅವರು ತಮ್ಮ ಕುರ್ಚಿಯಲ್ಲಿದ್ದರೂ, ಸರ್ಕಾರವನ್ನು ಬೇರೆ ಕಡೆಯಿಂದ ನಡೆಸಲಾಗುತ್ತಿದೆ. ಇದು ಕಾನೂನುಬಾಹಿರ ಮಾತ್ರವಲ್ಲದೆ, ಬಂಗಾಳದ ಜನರಿಗೆ ಮಾಡಿರುವ ದ್ರೋಹ' ಎಂದು ದೂರಿದರು.

ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಅಧಿಕಾರಿಗಳು ಖಾಸಗಿ ಸಂಸ್ಥೆಯ ಕಚೇರಿಯ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ಮಧ್ಯಪ್ರವೇಶಿಸಲು ಮುಖ್ಯಮಂತ್ರಿಗೆ ಅಧಿಕಾರ ಕೊಟ್ಟವರು ಯಾರು ಎಂದು ಪ್ರಶ್ನಿಸಿದರು.

ಕೆಲಸದ ಒತ್ತಡದಿಂದ ಬಿಎಲ್‌ಒ ಆತ್ಮಹತ್ಯೆ: ಆರೋಪ

ಕೋಲ್ಕತ್ತ (ಪಿಟಿಐ): ಮುರ್ಷಿದಾಬಾದ್ ಜಿಲ್ಲೆಯಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಯೊಬ್ಬರು (ಬಿಎಲ್‌ಒ) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣಾ ಕಾರ್ಯದ (ಎಸ್‌ಐಆರ್) ಒತ್ತಡವೇ ಅವರ ಆತ್ಮಹತ್ಯೆಗೆ ಕಾರಣ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಮೃತ ಹಮೀಮುಲ್ ಇಸ್ಲಾಂ (47), ಬಾಲಕರ ಪ್ರಾಥಮಿಕ ಶಾಲೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಇದರೊಂದಿಗೆ ಬಿಎಲ್‌ಒ ಕರ್ತವ್ಯವನ್ನೂ ನಿಭಾಯಿಸುತ್ತಿದ್ದರು ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

'ಈ ಎರಡೂ ಜವಾಬ್ದಾರಿಗಳಿಂದ ಕೆಲಸದ ಹೊರೆ ಹೆಚ್ಚಾಗಿ, ಇಸ್ಲಾಂ ತೀವ್ರ ಒತ್ತಡಕ್ಕೆ ಒಳಗಾಗಿದ್ದರು. ಎಸ್‌ಐಆರ್‌ಗೆ ಸಂಬಂಧಿಸಿದ ಕೆಲಸಗಳನ್ನು ಮಾಡಲು ತಮ್ಮ ಸಾಮರ್ಥ್ಯ ಮೀರಿ ಪ್ರಯತ್ನಿಸುತ್ತಿದ್ದರು' ಎಂದು ಇಸ್ಲಾಂ ಸಹೋದರ ಆರೋಪಿಸಿದ್ದಾರೆ.

ಶನಿವಾರ ಬೆಳಿಗ್ಗೆ ಶಾಲೆಗೆ ತೆರಳಿದ ಇಸ್ಲಾಂ, ಮಧ್ಯಾಹ್ನ ಮನೆಗೆ ಹಿಂತಿರುಗದ ಕಾರಣ ತೀವ್ರ ಹುಡುಕಾಟ ನಡೆಸಲಾಯಿತು. ಬಳಿಕ ಶಾಲೆಯ ಆವರಣದೊಳಗಿನ ಕೊಠಡಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಅವರ ಶವ ಶನಿವಾರ ರಾತ್ರಿ ಪತ್ತೆಯಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ದೇವಾಲಯಕ್ಕೆ ಅಡ್ಡಿಪಡಿಸಿದ ಶಕ್ತಿಗಳು ಈಗಲೂ ಸಕ್ರಿಯ'

ಸೋಮನಾಥದಲ್ಲಿ ನಡೆದ 'ಶೌರ್ಯಯಾತ್ರೆ'ಯಲ್ಲಿ ಮೋದಿ

ಸೋಮನಾಥ (ಗುಜರಾತ್): 'ಗುಜರಾತ್‌ನಲ್ಲಿ ಸೋಮನಾಥ ದೇವಾಲಯವನ್ನು ಪುನರ್‌ನಿರ್ಮಾಣ ಮಾಡಲು ಅಡ್ಡಿಪಡಿಸಿದ ಶಕ್ತಿಗಳು ಈಗಲೂ ಸಕ್ರಿಯವಾಗಿದ್ದು, ಇವರ ಬಗ್ಗೆ ಎಚ್ಚರದಿಂದ ಇರಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಸೋಮನಾಥ ದೇವಾಲಯದ ಮೇಲೆ ಮೊಹಮ್ಮದ್ ಘಜ್ನಿ ದಾಳಿ ನಡೆಸಿ ಒಂದು ಸಾವಿರ ವರ್ಷಗಳಾದ ಕರಾಳ ದಿನದ ಅಂಗವಾಗಿ ಭಾನುವಾರ ನಡೆದ 'ಸೋಮನಾಥ ಪರ್ವ'ದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಸೋಮನಾಥದ ಇತಿಹಾಸವು ನಾಶ ಹಾಗೂ ಸೋಲಿನದ್ದಲ್ಲ, ಗೆಲುವು ಹಾಗೂ ಪುನರ್ ನಿರ್ಮಾಣದ್ದಾಗಿದೆ. ಮೂಲಭೂತವಾದಿಗಳು ಇತಿಹಾಸ ಚಕ್ರದ ಪುಟಗಳಿಗಷ್ಟೇ ಸೀಮಿತರಾಗಿದ್ದು, ಒಂದು ಸಾವಿರ ವರ್ಷದ ನಂತರವೂ ದೇವಾಲಯವು ಮತ್ತಷ್ಟು ಎತ್ತರದಲ್ಲಿ ನಿಂತಿದೆ' ಎಂದು ಅವರು ತಿಳಿಸಿದ್ದಾರೆ.

'ಹಲವು ಶತಮಾನ ದೇವಾಲಯವನ್ನು ವಿನಾಶಗೊಳಿಸುವ ಯತ್ನಗಳು ನಡೆದವು. ಆದರೂ ದೇವಾಲಯವು ಪುನರ್‌ನಿರ್ಮಾಣಗೊಂಡಿದ್ದು, ದೇಶದ ಹೆಮ್ಮೆಯ ಸಂಕೇತವಾಗಿ ಗುರುತಿಸಿಕೊಂಡಿದೆ. ಸಾಮೂಹಿಕ ಸಂಕಲ್ಪ ಹಾಗೂ ಪ್ರಾಚೀನ ವೈಭವವನ್ನು ಪುನರ್‌ಸ್ಥಾಪಿಸುವ ಮೇಲ್ಪಂಕ್ತಿಯಾಗಿ ನಿಂತಿದೆ' ಎಂದು ತಿಳಿಸಿದ್ದಾರೆ.

'ದ್ವೇಷ, ದೌರ್ಜನ್ಯ ಹಾಗೂ ಭಯೋತ್ಪಾದನೆಯಂತಹ ವಿಚಾರದಂತಹ ನೈಜ ಇತಿಹಾಸವನ್ನು ನಮ್ಮಿಂದ ಮುಚ್ಚಿಡಲಾಗಿತ್ತು. ಈ ದಾಳಿಯೂ ದೇವಾಲಯವನ್ನು ಲೂಟಿ ಮಾಡಲು ಎಂದು ನಮಗೆ ಪಾಠ ಕಲಿಸಲಾಯಿತು. ಸ್ವಾತಂತ್ರ್ಯ ಬಂದ ನಂತರ ಸರ್ದಾರ್ ವಲ್ಲಭಭಾಯಿ ಪಟೇಲ್ ಸೋಮನಾಥ ದೇವಾಲಯವನ್ನು ಪುನರ್ ನಿರ್ಮಾಣ ಮಾಡಲು ಮುಂದಾದ ವೇಳೆ ಹಲವು ಅಡೆತಡೆಗಳು ಎದುರಾದವು. ತುಷ್ಟೀಕರಣದಲ್ಲಿ ತೊಡಗಿದ್ದವರು ಈ ಕೆಲಸಕ್ಕೆ ಅಡ್ಡಿಪಡಿಸಿದರು. ಈಗಲೂ ಅಂತಹ ಶಕ್ತಿಗಳು ಸಕ್ರಿಯವಾಗಿದ್ದು, ಮಣಿಸಬೇಕು' ಎಂದಿದ್ದಾರೆ.



ಸೋಮನಾಥ ಮಂದಿರದ ಆವರಣದಲ್ಲಿ ಭಾನುವಾರ ನಡೆದ ಸ್ವಾಭಿಮಾನ್ ಪರ್ವಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಮೆರವಣಿಗೆ ಮೂಲಕ ದೇವಾಲಯಕ್ಕೆ ತೆರಳಿದರು. ಈ ವೇಳೆ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಉಪಮುಖ್ಯಮಂತ್ರಿ ಹರ್ಷ ಸಾಂಘವಿ ಜೊತೆಗಿದ್ದರು —ಪಿಟಿಐ ಚಿತ್ರ

ಗಮನಸೆಳೆದ ಅಶ್ವಾರೋಹಿಗಳ ತಂಡ

ದೇವಾಲಯದ ಆವರಣದಲ್ಲಿ ಭಾನುವಾರ ನಡೆದ 'ಶೌರ್ಯಯಾತ್ರೆ'ಯಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಜ್ಯದ ವಿವಿಧೆಡೆಯಿಂದ ಬಂದಿದ್ದ 108 ಅಶ್ವಾರೋಹಿಗಳ ತಂಡದ ಜೊತೆಗೆ 'ಡಮರು' ಬಾರಿಸಿದ ಯುವಕರ ತಂಡವು ಆತ್ಮೀಯವಾಗಿ ಸ್ವಾಗತಿಸಿತು.

ಇಲ್ಲಿನ ಶಂಖ ವೃತ್ತದಿಂದ ತೆರೆದ ವಾಹನದಲ್ಲಿ ಮೆರವಣಿಗೆ ಆರಂಭಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ದೇವಾಲಯದ ಮುಂಭಾಗದಲ್ಲಿರುವ ವೀರ್ ಹಮೀರ್‌ಜಿ ವೃತ್ತದವರೆಗೂ ಸಾಗಿದರು. ಈ ವೇಳೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಉಪಮುಖ್ಯಮಂತ್ರಿ ಹರ್ಷ ಸಾಂಘವಿ ಜೊತೆಗಿದ್ದರು.

ಏಕನಾಥ ಶಿಂದೆ ಬಣ ಸೇರಿದ ಮಾಜಿ ಶಾಸಕ ದಗ್ಡು ಸಕ್ಪಾಲ್

ಪ್ರಜಾವಾಣಿ ವಾರ್ತೆ

ಮುಂಬೈ: ಶಿವ ಸೇನೆಯ ನಿಷ್ಠಾವಂತ ನಾಯಕ ಮತ್ತು ಮಾಜಿ ಶಾಸಕ ದಗ್ಡು ಸಕ್ಪಾಲ್ ಅವರು ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಪಕ್ಷವನ್ನು ಭಾನುವಾರ ಸೇರಿದ್ದಾರೆ.



ಏಕನಾಥ ಶಿಂದೆ

'ಬಾಳಾಸಾಹೇಬ್ ಠಾಕ್ರೆ ಅವರ ಆಪ್ತ ಸಹಚರರು ಮತ್ತು ನಿಷ್ಠಾವಂತ ಶಿವಸೇನಾ ಕಾರ್ಯಕರ್ತರನ್ನು ಕೆಲವರು ಸೇವಕರಂತೆ ನಡೆಸಿಕೊಳ್ಳುತ್ತಿದ್ದಾರೆ. ಪಕ್ಷಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ದಗ್ಡು ಸಕ್ಪಾಲ್ ಅವರಂತಹ ಕಾರ್ಯಕರ್ತರಿಗೆ ಸೂಕ್ತ ಗೌರವ ನೀಡದೆ, ನಿರ್ಲಕ್ಷಿಸಿದ್ದು ದುರದೃಷ್ಟಕರ' ಎಂದು ಉಪ ಮುಖ್ಯಮಂತ್ರಿ ಮತ್ತು ಶಿವಸೇನಾ ಮುಖ್ಯಸ್ಥ ಏಕನಾಥ ಶಿಂದೆ ಅವರು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರ ವಿರುದ್ಧ ವಾಗ್ದಾಳಿ ನಡೆಸಿದರು.

ಘಾಟ್ಕೋಪರ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸಪ್ಕಾಲ್ ಅವರು, 'ಶಿಂಧೆ ಅವರು ಒಂದು ದಿನ ದೊಡ್ಡ ನಾಯಕರಾಗುತ್ತಾರೆ' ಎಂದು ಹೇಳಿದರು.

ಶಿವಸೇನಾ(ಯುಬಿಟಿ) ತನ್ನ ಮಗನಿಗೆ ಟಿಕೆಟ್ ನಿರಾಕರಿಸಿದ್ದು, ಸಕ್ಪಾಲ್ ಅವರ ಅಸಮಾಧಾನಕ್ಕೆ ಕಾರಣವಾಗಿತ್ತು. ಮುಂಬೈನ ಪರೇಲ್ ಪ್ರದೇಶದಲ್ಲಿ ಸಕ್ಪಾಲ್ ಅವರು ಎರಡು ಬಾರಿ ಶಾಸಕರಾಗಿದ್ದರು. ಶಿವಸೇನಾದ ಪ್ರಮುಖ ಸಂಘಟನಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು.

ಅಲ್ ಫಲಾಹ್ ವಿಶ್ವವಿದ್ಯಾಲಯ ಕ್ಯಾಂಪಸ್ ಮುಟ್ಟುಗೋಲು ಸಾಧ್ಯತೆ

ನವದೆಹಲಿ (ಪಿಟಿಐ): ದೆಹಲಿಯ ಕೆಂಪು ಕೋಟೆ ಬಳಿ ನಡೆದ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿಯಾಣದ ಫರೀದಾಬಾದ್‌ನಲ್ಲಿರುವ ಅಲ್ ಫಲಾಹ್ ವಿಶ್ವವಿದ್ಯಾಲಯದ ಕ್ಯಾಂಪಸ್ ಅನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಳ್ಳುವ ಸಾಧ್ಯತೆ ಇದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಈ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕೃತ ಮೂಲಗಳು ಭಾನುವಾರ ತಿಳಿಸಿವೆ. ಅಪರಾಧದಿಂದ ಪಡೆದ ಆದಾಯದ ಮೂಲಕ ವಿಶ್ವವಿದ್ಯಾಲಯವನ್ನು ನಿರ್ಮಿಸಲಾಗಿದೆಯೇ ಎಂಬ ಕುರಿತು ಇ.ಡಿ ತನಿಖೆ ನಡೆಸುತ್ತಿದೆ.

ಅಲ್ ಫಲಾಹ್ ಟ್ರಸ್ಟ್ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿರುವ ವಿದ್ಯಾರ್ಥಿಗಳಿಗೆ ವಂಚನೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ, ಅಲ್ ಫಲಾಹ್ ಗ್ರೂಪ್‌ನ ಅಧ್ಯಕ್ಷ ಜವಾದ್ ಅಹ್ಮದ್ ಸಿದ್ದಿಕಿ ಅವರನ್ನು ಕಳೆದ ನವೆಂಬರ್‌ನಲ್ಲಿ ಇ.ಡಿ ಬಂಧಿಸಿತು. ಟ್ರಸ್ಟ್ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು, ಬೋಧನೆಗೆ ಅಗತ್ಯವಿರುವ ಮಾನ್ಯತೆಯನ್ನು ಹೊಂದಿಲ್ಲ ಎಂದೂ ಹೇಳಲಾಗಿದೆ

ಅಪರಾಧಗಳಿಂದ ಪಡೆಯಲಾದ ಹಣದ ಒಂದು ಭಾಗವನ್ನು ವಿಶ್ವವಿದ್ಯಾಲಯದ ವಿವಿಧ ಕಟ್ಟಡಗಳ ನಿರ್ಮಾಣಕ್ಕೆ ಬಳಸಲಾಗಿದೆ ಎಂದು ಇ.ಡಿ ಶಂಕಿಸಿದೆ. ಅಲ್ ಫಲಾಹ್ ಸಂಸ್ಥೆಯ ವಿವಿಧ ಚರ ಮತ್ತು ಸ್ಥಿರ ಆಸ್ತಿಗಳನ್ನು ಗುರುತಿಸುವ ಹಾಗೂ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನು ಇ.ಡಿ ಆರಂಭಿಸಿದೆ.

ವಿಶ್ವವಿದ್ಯಾಲಯದ ಆವರಣವನ್ನು ಮುಟ್ಟುಗೋಲು ಹಾಕಿಕೊಂಡರೂ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೋಧನೆಗೆ ಅವಕಾಶ ನೀಡಲಾಗುವುದು ಎನ್ನಲಾಗಿದೆ.

ಡಾ. ಉಮರ್ ನಬಿ ಸೇರಿದಂತೆ ದೆಹಲಿ ಸ್ಫೋಟದ ಪ್ರಮುಖ ಆರೋಪಿಗಳು ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿ ಉದ್ಯೋಗದಲ್ಲಿದ್ದರು.

'ಕಾಲಕ್ಕೆ ತಕ್ಕಂತೆ ಆರ್‌ಎಸ್‌ಎಸ್ ವಿಕಾಸ'

ನವದೆಹಲಿ (ಪಿಟಿಐ): 'ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಬದಲಾಗಿಲ್ಲ. ಆದರೆ ಕಾಲಕ್ಕೆ ಅನುಗುಣವಾಗಿ ವಿಕಾಸಗೊಳ್ಳುತ್ತಿದೆ' ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಭಾನುವಾರ ಹೇಳಿದರು.

ಆರ್‌ಎಸ್‌ಎಸ್‌ನ 100 ವರ್ಷಗಳ ಪಯಣದ ಕಥಾಹಂದರವನ್ನು ಹೊಂದಿರುವ 'ಶತಕ್' ಸಿನಿಮಾದ ಹಾಡು ಬಿಡುಗಡೆಗಾಗಿ ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಂಘವು ತನ್ನ ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಅದು ವಿಕಾಸಗೊಳ್ಳುತ್ತಾ ಹೊಸ ರೂಪ ತಳೆಯುವುದನ್ನು ಜನರು ಬದಲಾವಣೆ ಎಂದುಕೊಳ್ಳುತ್ತಿದ್ದಾರೆ. ವಾಸ್ತವದಲ್ಲಿ ಸಂಘವು ಬದಲಾಗಿಲ್ಲ; ಹಂತಹಂತವಾಗಿ ಬೆಳೆಯುತ್ತಿದೆ' ಎಂದರು.

'ಬೀಜವೊಂದು ಚಿಗುರಿ ಹೆಮ್ಮರವಾಗಿ ಬೆಳೆದು, ಹೂವು–ಹಣ್ಣುಗಳನ್ನು ನೀಡುವಂತೆ ಸಂಘವೂ ಬೆಳೆಯುತ್ತಿದೆ' ಎಂದು ಹೇಳಿದರು.

'ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಅವರು ಹುಟ್ಟುತ್ತಲೇ ದೇಶಭಕ್ತ. ಅವರು ತಮ್ಮ ಇಡೀ ಜೀವನವನ್ನು ದೇಶಸೇವೆಗಾಗಿ ಮುಡಿಪಿಟ್ಟಿದ್ದರು. ಸಂಘ ಮತ್ತು ಹೆಡಗೇವಾರ್ ಎರಡೂ ಸಮಾನಾರ್ಥಕ ಪದಗಳು' ಎಂದು ಪ್ರತಿಪಾದಿಸಿದರು.

'ಪ್ಲೇಗ್ ರೋಗದಿಂದ ತಂದೆ–ತಾಯಿ ನಿಧನರಾದಾಗ ಹೆಡಗೇವಾರ್ ಅವರಿಗೆ ಕೇವಲ 11 ವರ್ಷ. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಇಂಥ ಆಘಾತ ಎದುರಾಗಿದ್ದರೂ ಅವರು ಎದೆಗುಂದಲಿಲ್ಲ' ಎಂದರು.

ಗಾಯಕ ಸುಖ್ವಿಂದರ್ ಸಿಂಗ್, ನಿರ್ದೇಶಕ ಆಶಿಶ್ ಮಾಲ್, ಸಹ ನಿರ್ಮಾಪಕ ಆಶಿಶ್ ತಿವಾರಿ, ಆರ್‌ಎಸ್‌ಎಸ್ ಪದಾಧಿಕಾರಿ ಭೈಯಾಜಿ ಜೋಶಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಒಂದು ಲಕ್ಷಕ್ಕೂ ಹೆಚ್ಚು ಹಿಂದೂ ಸಮ್ಮೇಳನ


ಮಥುರಾ (ಉತ್ತರ ಪ್ರದೇಶ): ಆರ್‌ಎಸ್‌ಎಸ್ ಶತಮಾನೋತ್ಸವದ ಅಂಗವಾಗಿ ಜನವರಿ 15ರಿಂದ ದೇಶದಾದ್ಯಂತ 'ಹಿಂದೂ ಸಮಾಜೋತ್ಸವ'ಗಳನ್ನು ಆಯೋಜಿಸಲಾಗುವುದು ಎಂದು ಬ್ರಜ್ ಪ್ರಾಂತ್ಯದ ಪ್ರಚಾರ ಪ್ರಮುಖ್ ಕೀರ್ತಿ ಕುಮಾರ್ ಭಾನುವಾರ ತಿಳಿಸಿದ್ದಾರೆ.

'ದೇಶದಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಸಮ್ಮೇಳನಗಳನ್ನು ನಡೆಸುವ ಗುರಿಯನ್ನು ಆರ್‌ಎಸ್‌ಎಸ್ ಹೊಂದಿದ್ದು, ಅದರಲ್ಲಿ ಸುಮಾರು 2000 ಸಮ್ಮೇಳನಗಳನ್ನು ಬ್ರಜ್ ಪ್ರದೇಶದಲ್ಲಿ ಆಯೋಜಿಸಲಾಗುವುದು. ಈ ಪ್ರದೇಶವು ಸುಮಾರು 3000 ಗ್ರಾಮ ಮತ್ತು ಪಟ್ಟಣಗಳನ್ನು ಒಳಗೊಂಡಿದೆ' ಎಂದು ಅವರು ಹೇಳಿದ್ದಾರೆ.

ಶತಮಾನೋತ್ಸವವನ್ನು 'ಸಮಾಜೋತ್ಸವ'ವಾಗಿ ಆಚರಿಸಲು ಮತ್ತು ಇಡೀ ಹಿಂದೂ ಸಮಾಜವನ್ನು ಒಗ್ಗೂಡಿಸಲು ಆರ್‌ಎಸ್‌ಎಸ್‌ನ ಉನ್ನತ ನಾಯಕತ್ವವು ಕಳೆದ ವರ್ಷ ಕರೆ ನೀಡಿತ್ತು. ಅದರ ನಂತರ ವಿಜಯದಶಮಿಯಂದು ಸಮ್ಮೇಳನಗಳ ಸರಣಿಯನ್ನು ಪ್ರಾರಂಭಿಸಲಾಯಿತು.

ಟೆನಿಸ್: ಸಬಲೆಂಕಾ, ಮೆಡ್ವೆಡೇವ್‌ಗೆ ಪ್ರಶಸ್ತಿ

ಬ್ರಿಸ್ಬೇನ್ (ಎಪಿ/ಎಎಫ್‌ಪಿ): ವಿಶ್ವದ ಅಗ್ರ ಶ್ರೇಯಾಂಕದ ಟೆನಿಸ್ ಆಟಗಾರ್ತಿ ಅರಿನಾ ಸಬಲೆಂಕಾ ಅವರು ನೇರ ಸೆಟ್‌ಗಳಲ್ಲಿ ಉಕ್ರೇನ್‌ನ ಮಾರ್ತಾ ಕೊಸ್ಟಿಯುಕ್ ಅವರನ್ನು ಮಣಿಸಿ ಸತತ ಎರಡನೇ ಬಾರಿಗೆ ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಪ್ರಶಸ್ತಿ ಗೆದ್ದುಕೊಂಡರು.



ಕ್ವೀನ್ಸ್‌ಲ್ಯಾಂಡ್ ಟೆನಿಸ್ ಸೆಂಟರ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಬೆಲಾರೂಸ್‌ನ ಆಟಗಾರ್ತಿ 6–4, 6–3ರಿಂದ ಗೆದ್ದರು. ಅದರೊಂದಿಗೆ, ಇದೇ 18ರಂದು ಆರಂಭವಾಗಲಿರುವ ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿ 'ಆಸ್ಟ್ರೇಲಿಯಾ ಓಪನ್'ಗೆ ಭರ್ಜರಿಯಾಗಿಯೇ ಸಿದ್ಧತೆ ಆರಂಭಿಸಿದರು.

ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ರಷ್ಯಾದ ಆಟಗಾರ ಡೇನಿಯಲ್ ಮೆಡ್ವೆಡೇವ್ ಅವರು ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. 96 ನಿಮಿಷ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಮೆಡ್ವೆಡೇವ್ 6–2, 7–6 (7–1) ರಿಂದ ಅಮೆರಿಕದ ಬ್ರ್ಯಾಂಡನ್ ನಕಾಶಿಮಾ ಅವರನ್ನು ಮಣಿಸಿದರು.

ಅಗ್ರ 10ರಲ್ಲಿ ಬುಬ್ಲಿಕ್: ಕಜಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಅವರು ಭಾನುವಾರ ನಡೆದ ಹಾಂಗ್‌ಕಾಂಗ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ 7–6 (7–2), 6–3ರಿಂದ ನೇರ ಸೆಟ್‌ಗಳಲ್ಲಿ ಇಟಲಿಯ ಲೊರೆಂಜೊ ಮುಸೆಟ್ಟಿ ವಿರುದ್ಧ ಗೆದ್ದರು. ಈ ಟ್ರೋಫಿಯೊಂದಿಗೆ ಅವರು ಮೊದಲ ಬಾರಿಗೆ ವಿಶ್ವ ರ್‍ಯಾಂಕಿಂಗ್‌ನ ಅಗ್ರ 10ರಲ್ಲಿ ಸ್ಥಾನ ಪಡೆದರು.

ಮಯಂಕ್ ಪಡೆಗೆ ಮುಂಬೈ ಸವಾಲು

ವಿಜಯ್ ಹಜಾರೆ ಟ್ರೋಫಿ ಕ್ವಾರ್ಟರ್‌ಫೈನಲ್ ಇಂದು: ಪಡಿಕ್ಕಲ್ ಮೇಲೆ ಕಣ್ಣು

• ಗಿರೀಶ ದೊಡ್ಡಮನಿ

ಬೆಂಗಳೂರು: ದೇಶಿ ಕ್ರಿಕೆಟ್ ಕ್ಷೇತ್ರದ 'ಬದ್ಧ ಪ್ರತಿಸ್ಪರ್ಧಿ'ಗಳಾದ ಕರ್ನಾಟಕ ಮತ್ತು ಮುಂಬೈ ತಂಡಗಳು ಸೋಮವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಹಣಾಹಣಿ ನಡೆಸಲಿವೆ.

ನಗರದ ಹೊರವಲಯದಲ್ಲಿರುವ ಸಿಂಗಹಳ್ಳಿಯ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನ (1)ದಲ್ಲಿ ಈ ಪಂದ್ಯ ನಡೆಯಲಿದೆ. ಅದರಿಂದಾಗಿ ಹಾಲಿ ಚಾಂಪಿಯನ್ ಕರ್ನಾಟಕ ತಂಡಕ್ಕೆ ತವರೂರಿನಲ್ಲಿ ಆಡುವ ಅವಕಾಶ ಲಭಿಸಿದೆ. ಎ ಗುಂಪಿನಲ್ಲಿ 24 ಅಂಕಗಳೊಂದಿಗೆ ಅಗ್ರಸ್ಥಾನ ಪಡೆದು ಎಂಟರ ಘಟ್ಟವನ್ನು ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ಪ್ರವೇಶಿಸಿದೆ. ತಂಡವು ಗುಂಪು ಹಂತದ ಪಂದ್ಯಗಳನ್ನು ಅಹಮದಾಬಾದಿನಲ್ಲಿ ಆಡಿತ್ತು.

ಭಾರತ ತಂಡದ ಆಯ್ಕೆಗಾರರ ಗಮನ ಸೆಳೆಯಲು ದೇಶಿ ಕ್ರಿಕೆಟ್‌ನಲ್ಲಿ ಸತತವಾಗಿ ರನ್ ಹೊಳೆ ಹರಿಸುತ್ತಿರುವ ಕರ್ನಾಟಕದ ದೇವದತ್ತ ಪಡಿಕ್ಕಲ್ ಮತ್ತು ಮುಂಬೈನ ಸರ್ಫರಾಜ್ ಖಾನ್ ಕೂಡ ಇಲ್ಲಿ ಮುಖಾಮುಖಿಯಾಗಲಿದ್ದಾರೆ.

ಟೂರ್ನಿಯ ಗುಂಪು ಹಂತದಲ್ಲಿ ದೇವದತ್ತ ಅವರು ನಾಲ್ಕು ಶತಕಸಹಿತ 640 ರನ್ ಗಳಿಸಿದ್ದಾರೆ. ನಾಯಕ ಮಯಂಕ್ ಎರಡು ಕರುಣ್ ನಾಯರ್ ಒಂದು ಶತಕ ದಾಖಲಿಸಿದ್ದಾರೆ. ಸ್ಮರಣ್ ರವಿಚಂದ್ರನ್, ಕೆ.ಎಲ್. ಶ್ರೀಜಿತ್, ಅಭಿನವ್ ಮನೋಹರ್ ಹಾಗೂ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರು ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ. ಅವರು ಉತ್ತಮ ಲಯದಲ್ಲಿದ್ದಾರೆ. ಗುಂಪು ಹಂತದಲ್ಲಿ ಸತತ ಆರು ಪಂದ್ಯಗಳನ್ನು ಗೆದ್ದಿದ್ದ ತಂಡವು ಕೊನೆಯ ಹಣಾಹಣಿಯಲ್ಲಿ ಮಧ್ಯಪ್ರದೇಶ ಎದುರು ಸೋತಿತ್ತು. ದೇವದತ್ತ ಸೇರಿದಂತೆ ಪ್ರಮುಖ ಬ್ಯಾಟರ್‌ಗಳು ದೀರ್ಘ ಇನಿಂಗ್ಸ್ ಆಡಿರಲಿಲ್ಲ. ಸೋಲಿಗೆ ಇದು ಪ್ರಮುಖ ಕಾರಣವಾಗಿತ್ತು.



ಕರ್ನಾಟಕ ತಂಡದ ಅಭಿನವ್ ಮನೋಹರ್, ಮಯಂಕ್ ಅಗರವಾಲ್ ಹಾಗೂ ದೇವದತ್ತ ಪಡಿಕ್ಕಲ್

ಕೆ.ಎಲ್. ರಾಹುಲ್, ವೇಗಿ ಪ್ರಸಿದ್ಧ ಕೃಷ್ಣ ಅವರು ಭಾರತ ತಂಡದಲ್ಲಿ ಆಡಲು ತೆರಳಿದ್ದಾರೆ. ಆದ್ದರಿಂದ ಶ್ರೀಜಿತ್ ಕೀಪಿಂಗ್ ಹೊಣೆ ನಿಭಾಯಿಸುವರು. ಬೌಲಿಂಗ್ ವಿಭಾಗವನ್ನು ವಿದ್ವತ್ ಕಾವೇರಪ್ಪ, ಅಭಿಲಾಷ್ ಶೆಟ್ಟಿ ಮತ್ತು ವಿದ್ಯಾಧರ್ ಪಾಟೀಲ ಅವರೇ ಮುನ್ನಡೆಸಬೇಕಿದೆ. ಹೊಸ ಪ್ರತಿಭೆ ಶ್ರೀಶಾ ಆಚಾರ್ ಮತ್ತು ಶ್ರೇಯಸ್ ಅವರು ಸ್ಪಿನ್ ವಿಭಾಗದ ಪ್ರಮುಖರಾಗಿದ್ದಾರೆ.



ಸರ್ಫರಾಜ್ ಖಾನ್

ಮುಂಬೈ ತಂಡಕ್ಕೆ ಶ್ರೇಯಸ್ ಅಯ್ಯರ್ ಮತ್ತು ಯಶಸ್ವಿ ಜೈಸ್ವಾಲ್ ಅವರ ಗೈರುಹಾಜರಿ ಕಾಡಬಹುದು. ಖಾನ್ ಸಹೋದರರ (ಸರ್ಫರಾಜ್ ಮತ್ತು ಮುಷೀರ್) ಮೇಲೆ ಬ್ಯಾಟಿಂಗ್ ವಿಭಾಗವು ಹೆಚ್ಚು ಅವಲಂಬಿತವಾಗಿದೆ. ಗುಂಪು ಹಂತದಲ್ಲಿ ಸರ್ಫರಾಜ್ ಒಂದು ಶತಕ ಮತ್ತು ಎರಡು ಅರ್ಧಶತಕಸಹಿತ 303 ರನ್ ಸೇರಿಸಿದ್ದಾರೆ. ಮುಷೀರ್ 3 ಅರ್ಧಶತಕ ಹೊಡೆದಿದ್ದಾರೆ ಮತ್ತು ಬೌಲಿಂಗ್‌ನಲ್ಲಿಯೂ ಮಿಂಚಿದ್ದರು. ಓಂಕಾರ್ ತರ್ಮಳೆ ಮತ್ತು ಶಿವಂ ದುಬೆ ಅವರು ಬೌಲಿಂಗ್ ವಿಭಾಗದ ಹೊಣೆ ನಿಭಾಯಿಸಬೇಕಿದೆ. ಶ್ರೇಯಸ್ ಗೈರಿನಲ್ಲಿ ಸಿದ್ಧೇಶ್ ಲಾಡ್ ಅವರು ತಂಡವನ್ನು ಮುನ್ನಡೆಸಲಿದ್ದಾರೆ. ಸಿ ಗುಂಪಿನಲ್ಲಿ 20 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದು ಎಂಟರ ಘಟ್ಟಕ್ಕೆ ಬಂದಿದೆ.

ಕೇಂದ್ರದ ಎರಡನೇ ಮೈದಾನದಲ್ಲಿ ನಡೆಯಲಿರುವ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಉತ್ತರಪ್ರದೇಶ ಮತ್ತು ಸೌರಾಷ್ಟ್ರ ಹಣಾಹಣಿ ನಡೆಸಲಿವೆ.

ಪಂದ್ಯ ಆರಂಭ: ಬೆಳಿಗ್ಗೆ 9 ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ವಿರಾಟ್ ಆರ್ಭಟ; ಭಾರತ ಶುಭಾರಂಭ

ಏಕದಿನ ಕ್ರಿಕೆಟ್: ಗಿಲ್ ಬಳಗಕ್ಕೆ 1–0 ಮುನ್ನಡೆ

• ಮಿಂಚಿದ ಶ್ರೇಯಸ್, ಹರ್ಷಿತ್, ರಾಹುಲ್



ಭಾರತ ತಂಡದ ಶುಭಮನ್ ಗಿಲ್ ಹಾಗೂ ವಿರಾಟ್ ಕೊಹ್ಲಿ ಜೊತೆಯಾಟ ಪಿಟಿಐ ಚಿತ್ರ

ವಡೋದರ (ಪಿಟಿಐ): ಚೇಸಿಂಗ್ ಮಾಸ್ಟರ್ ವಿರಾಟ್ ಕೊಹ್ಲಿ ಮತ್ತೊಮ್ಮೆ ಮಿಂಚಿದರು. ಕೇವಲ ಏಳು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರೂ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ಜಯ ಗಳಿಸಲು ಪ್ರಮುಖ ಕಾರಣರಾದರು.

301 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆತಿಥೇಯ ತಂಡವು ಇನಿಂಗ್ಸ್‌ನಲ್ಲಿ ಇನ್ನೂ ಒಂದು ಓವರ್ ಬಾಕಿ ಇರುವಂತೆಯೇ 4 ವಿಕೆಟ್‌ಗಳಿಂದ ಗೆದ್ದಿತು. ವಿರಾಟ್ ಕೊಹ್ಲಿ (93; 91ಎಸೆತ), ನಾಯಕ ಶುಭಮನ್ ಗಿಲ್ (56;71ಎ) ಹಾಗೂ ಶ್ರೇಯಸ್ ಅಯ್ಯರ್ (49; 47ಎ) ಅವರು ಉಪಯುಕ್ತ ಕಾಣಿಕೆ ನೀಡಿದರು.

ಕಿವೀಸ್ ಬಳಗದ ಕೈಲ್ ಜೆಮಿಸನ್ (41ಕ್ಕೆ4) ಅವರು ಇನಿಂಗ್ಸ್‌ನಲ್ಲಿ ಇನ್ನೂ ಹತ್ತು ಓವರ್‌ಗಳು ಬಾಕಿಯಿದ್ದಾಗ ಮೂರು ವಿಕೆಟ್ ಕಬಳಿಸಿ ಆತಂಕ ಮೂಡಿಸಿದ್ದರು. ಆದರೆ ಕನ್ನಡಿಗ ಕೆ.ಎಲ್. ರಾಹುಲ್ (ಔಟಾಗದೇ 29; 21ಎ, 4X2, 6X1) ವಿಜಯದ ಸಿಕ್ಸರ್ ಹೊಡೆದು ತಂಡವನ್ನು ದಡ ಮುಟ್ಟಿಸಿದರು. ಹರ್ಷಿತ್ ರಾಣಾ ಕೂಡ 23 ಎಸೆತಗಳಲ್ಲಿ 29 ರನ್ ಹೊಡೆದರು.

ವಿರಾಟ್ ಆರ್ಭಟ: ಕೊತಂಬಿ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ಟಾಸ್ ಗೆದ್ದ ಪ್ರವಾಸಿ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ಡೆವೊನ್ ಕಾನ್ವೆ (56; 67ಎ, 4X6, 6X1) ಮತ್ತು ಹೆನ್ರಿ ನಿಕೊಲ್ಸ್ (62; 69ಎ, 4X8) ಮೊದಲ ವಿಕೆಟ್ ಜೊತೆಯಾಟದಲ್ಲಿ 117 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ವಿಜೃಂಭಿಸಿದ ಡ್ಯಾರಿಲ್ ಮಿಚೆಲ್ (84; 71ಎ, 4X6, 6X3) ಅವರ ಆಟದ ಬಲದಿಂದ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 300 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಭಾರತ ತಂಡದ ಆರಂಭಿಕ ಜೋಡಿ ರೋಹಿತ್ ಶರ್ಮಾ (26; 29ಎ, 4X3, 6X2) ಮತ್ತು ಗಿಲ್ ಅವರು ಎಚ್ಚರಿಕೆಯಿಂದ ಆಟವಾಡಿದರು. ಇದರಿಂದಾಗಿ ರನ್ ಗಳಿಕೆಯ ವೇಗ ಹೆಚ್ಚಿರಲಿಲ್ಲ. 9ನೇ ಓವರ್‌ನಲ್ಲಿ ಜೆಮಿಸನ್ ಎಸೆತದಲ್ಲಿ ರೋಹಿತ್ ಔಟಾದರು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ವಿರಾಟ್ ಇನಿಂಗ್ಸ್‌ನ ಹೊಣೆಯನ್ನು ತಮ್ಮ ಮೇಲೆಳೆದುಕೊಂಡರು. ಗಿಲ್ ಎಚ್ಚರಿಕೆಯಿಂದ ರನ್ ಗಳಿಸಿದರು. ಆದರೆ ಕೊಹ್ಲಿ ಎದುರಾಳಿಗಳ ಎಸೆತಗಳನ್ನು ಲೀಲಾಜಾಲವಾಗಿ ಬಡಿದಟ್ಟಿದರು. 8 ಬೌಂಡರಿಗಳು ಅವರ ಬ್ಯಾಟ್‌ನಿಂದ ದಾಖಲಾದವು. ಒಂದು ಸಿಕ್ಸರ್ ಕೂಡ ಹೊಡೆದರು. ಅವರ ನೆಚ್ಚಿನ ಫ್ರಂಟ್‌ಫೂಟ್ ಹೊಡೆತಗಳು ಮತ್ತು ಸುಂದರವಾದ ಆನ್‌ಡ್ರೈವ್ ಗಮನ ಸೆಳೆದವು. ಪುಲ್ ಮೂಲಕ ಬೌಂಡರಿ ಕೂಡ ತಮ್ಮದಾಗಿಸಿಕೊಂಡರು. ಒಂದೆರಡು ಎಸೆತಗಳಲ್ಲಿ ಅದೃಷ್ಟವೂ ಅವರಿಗೆ ಜೊತೆ ನೀಡಿತು. ಅದರಿಂದಾಗಿ ಅಲ್ಪ ಅಂತರದಲ್ಲಿ ಔಟಾಗುವುದು ತಪ್ಪಿತು. ಅವರು ಗಿಲ್ ಜೊತೆಗೆ 102 ಎಸೆತಗಳಲ್ಲಿ 118 ರನ್ ಸೇರಿಸಿದರು.

ಗಿಲ್ ಔಟಾದ ನಂತರ ಕೊಹ್ಲಿ ಅವರು ಶ್ರೇಯಸ್ ಅಯ್ಯರ್ ಜೊತೆಗೆ 77 ರನ್ ಸೇರಿಸಿದರು. ಆದರೆ ಅವರಿಗೆ ಶತಕ ಪೂರ್ಣಗೊಳಿಸಲು ಜೆಮಿಸನ್ ಬಿಡಲಿಲ್ಲ. ಬ್ರೇಸ್‌ವೆಲ್ ಪಡೆದ ಕ್ಯಾಚ್‌ಗೆ ಕೊಹ್ಲಿ ನಿರ್ಗಮಿಸಿದರು. ಶ್ರೇಯಸ್ ಅವರಿಗೆ ಅರ್ಧಶತಕ ಮಾಡಲೂ ಜೆಮಿಸನ್ ಬಿಡಲಿಲ್ಲ. ಕ್ಲೀನ್‌ಬೌಲ್ಡ್ ಮಾಡಿದರು. ಜಡೇಜ ವಿಕೆಟ್ ಕೂಡ ಅವರಿಗೇ ಒಲಿಯಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 50 ಓವರ್‌ಗಳಲ್ಲಿ 8ಕ್ಕೆ300 (ಡೆವೊನ್ ಕಾನ್ವೆ 56, ಹೆನ್ರಿ ನಿಕೊಲ್ಸ್ 62, ಡ್ಯಾರಿಲ್ ಮಿಚೆಲ್ 84, ಮಿಚೆಲ್ ಹೇ 18, ಮೈಕೆಲ್ ಬ್ರೇಸ್‌ವೆಲ್ 16, ಕ್ರಿಸ್ಟನ್ ಕ್ಲಾರ್ಕ್ ಔಟಾಗದೇ 24, ಮೊಹಮ್ಮದ್ ಸಿರಾಜ್ 40ಕ್ಕೆ2, ಹರ್ಷಿತ್ ರಾಣಾ 65ಕ್ಕೆ2, ಪ್ರಸಿದ್ಧಕೃಷ್ಣ 60ಕ್ಕೆ2, ಕುಲದೀಪ್ ಯಾದವ್ 52ಕ್ಕೆ1) ಭಾರತ: 49 ಓವರ್‌ಗಳಲ್ಲಿ 6ಕ್ಕೆ306 (ರೋಹಿತ್ ಶರ್ಮಾ 26, ಶುಭಮನ್ ಗಿಲ್ 56, ವಿರಾಟ್ ಕೊಹ್ಲಿ 93, ಶ್ರೇಯಸ್ ಅಯ್ಯರ್ 49, ಕೆ.ಎಲ್. ರಾಹುಲ್ ಔಟಾಗದೇ 29, ಹರ್ಷಿತ್ ರಾಣಾ 29, ಕೈಲ್ ಜೆಮಿಸನ್ 41ಕ್ಕೆ4, ಆದಿತ್ಯ ಅಶೋಕ್ 55ಕ್ಕೆ1, ಕ್ರಿಸ್ಟನ್ ಕ್ಲಾರ್ಕ್ 73ಕ್ಕೆ1)

ಫಲಿತಾಂಶ: ಭಾರತಕ್ಕೆ 4 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ.

ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ.

ಮುಂದಿನ ಪಂದ್ಯ: ಜನವರಿ 14 (ರಾಜಕೋಟ್)

300+ ರನ್ ಗುರಿ ಯಶಸ್ವಿ ಚೇಸ್

ಗೆಲುವು	ತಂಡ
20	ಭಾರತ
15	ಇಂಗ್ಲೆಂಡ್
14	ಆಸ್ಟ್ರೇಲಿಯಾ
12	ಪಾಕಿಸ್ತಾನ

ಮೂಡುಬಿದಿರೆ: ಅಖಿಲ ಭಾರತ ಅಂತರ ವಿವಿ ಅಥ್ಲೆಟಿಕ್ಸ್ ಇಂದಿನಿಂದ

ಖೇಲೊ ಇಂಡಿಯಾ ಕೂಟದತ್ತ ಚಿತ್ತ

ಪ್ರಜಾವಾಣಿ ವಾರ್ತೆ



ಅಥ್ಲೀಟ್‌ಗಳು ಸ್ವರಾಜ್ಯ ಮೈದಾನದಲ್ಲಿ ಭಾನುವಾರ ದೈಹಿಕ ಕಸರತ್ತು ನಡೆಸಿದರು

ಮೂಡುಬಿದಿರೆ: ಕಂಬಳ ಮತ್ತು ಕರಾವಳಿ ಉತ್ಸವದ ಉತ್ಸಾಹದಲ್ಲಿ ಮಿಂದಿರುವ ದಕ್ಷಿಣ ಕನ್ನಡ ಸೋಮವಾರದಿಂದ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಕಾಲೇಜು ವಿದ್ಯಾರ್ಥಿಗಳ ಮಿಂಚಿಗೆ ಸಾಕ್ಷಿಯಾಗಲಿದೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಆಯೋಜಿಸಿರುವ ಅಖಿಲ ಭಾರತ ಅಂತರ ವಿವಿ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಮೂಡುಬಿದಿರೆಯ ಸ್ವರಾಜ್ಯ ಮೈದಾನದಲ್ಲಿ ನಡೆಯಲಿದೆ.

ಕಳೆದ ಬಾರಿಯ ಸಮಗ್ರ ಚಾಂಪಿಯನ್ ಮಂಗಳೂರು ವಿವಿ ಈ ಸಲವೂ ಮೇಲುಗೈ ಸಾಧಿಸುವ ಛಲದಲ್ಲಿದೆ. ಮದ್ರಾಸ್ ಮತ್ತು ಪಂಜಾಬ್ ವಿವಿ ಪೈಪೋಟಿಗೆ ಸಜ್ಜಾಗಿವೆ. ಒಡಿಶಾದ ಕೆಐಐಟಿ, ಕೇರಳದ ಕ್ಯಾಲಿಕಟ್, ಪಂಜಾಬ್‌ನ ಗುರುಕಾಶಿ ವಿವಿಗಳು ಕೂಡ ಉತ್ಸಾಹದಲ್ಲಿವೆ. ಈ ಬಾರಿ ಖೇಲೊ ಇಂಡಿಯಾ ಕೂಟದಲ್ಲಿ ಸಾಧನೆ ಮಾಡಿರುವ ಮೊಹಾಲಿಯ ಚಂಡೀಗಢ ವಿವಿಯೂ ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ.

ಖೇಲೊ ಇಂಡಿಯ ವಿವಿ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯೊಂದಿಗೆ ಮೂಡುಬಿದಿರೆಯಲ್ಲಿ ಪದಕಗಳಿಗೆ ಪೈಪೋಟಿ ಕಂಡುಬರಲಿದೆ. ಸ್ಯಾಫ್ ಗೇಮ್ಸ್‌ನ 110 ಮೀ ಹರ್ಡಲ್ಸ್‌ನಲ್ಲಿ ಪದಕ ಗೆದ್ದಿರುವ ಕೃಷಿಕ್ ಮಂಜುನಾಥ್, ಕಳೆದ ಬಾರಿ ಜಾಗತಿಕ ವಿವಿ ಚಾಂಪಿಯನ್‌ಷಿಪ್‌ನ ಸಾಧಕಿ 5000 ಮೀ ಓಟಗಾರ್ತಿ ಜ್ಯೋತಿ, 10 ಸಾವಿರ ಮೀ ಓಟಗಾರರಾದ ಮೋಹಿತ್ ಚೌಧರಿ, ಶುಭಂ ಬಲಿಯಾನ್, ಜೂನಿಯರ್ ಇಂಡಿಯಾ ಕೂಟದ ಸಿಕ್ಸಸ್ ಥ್ರೋ ಪ್ರತಿಭೆ ನಿಕಿತಾ ಕುಮಾರಿ, ಖೇಲೊ ಇಂಡಿಯಾದದಲ್ಲಿ ಚಿನ್ನ ಗೆದ್ದಿರುವ ಡೆಕಾಥ್ಲೀಟ್ ಚಮನ್‌ಜ್ಯೋತ್‌ಸಿಂಗ್, ಲಾಂಗ್‌ಜಂಪ್ ಪಟು ದೀಪಾಂಶಿ ಪದಕದ ರೇಸ್‌ನಲ್ಲಿರುವ ಪ್ರಮುಖರು.

ಮೊದಲ ದಿನ 2 ಫೈನಲ್: ಸೋಮವಾರ ಮುಂಜಾನೆ 6.30 ರಿಂದ ಪುರುಷರ ಹಾಗೂ ಮಹಿಳೆಯರ 10 ಸಾವಿರ ಮೀ ಓಟದೊಂದಿಗೆ ಸ್ಪರ್ಧೆಗಳಿಗೆ ಚಾಲನೆ ಸಿಗಲಿದೆ. ಇವೆರಡೇ ಮೊದಲ ದಿನದ ಫೈನಲ್. ಮಧ್ಯಾಹ್ನ 3.10ಕ್ಕೆ ಮಹಿಳೆಯರ 800 ಮೀ ಸೆಮಿಫೈನಲ್‌ನೊಂದಿಗೆ ದಿನದ ಸ್ಪರ್ಧೆಗಳು ಮುಕ್ತಾಯಗೊಳ್ಳಲಿವೆ.

₹20 ಲಕ್ಷ ನಗದು ಬಹುಮಾನ

ಆಳ್ವಾಸ್ ಶಿಕ್ಷಣ ಸಂಸ್ಥೆ 72, 75, 79, 80, 81ನೇ ಕೂಟಗಳನ್ನು ಆಯೋಜಿಸಿತ್ತು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ ಮೋಹನ ಆಳ್ವ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸೋಮವಾರದಿಂದ ನಡೆಯಲಿರುವುದು 85ನೇ ಕೂಟ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ ಈ ಬಾರಿ ಒಟ್ಟು ₹20 ಲಕ್ಷ ನಗದು ಬಹುಮಾನ ನೀಡಲಾಗುವುದು. ಪ್ರಶಸ್ತಿ ಗೆದ್ದ ತಂಡಕ್ಕೆ ₹50 ಸಾವಿರ, ರನ್ನರ್ ಅಪ್‌ಗೆ ₹30 ಸಾವಿರ ಮತ್ತು 3ನೇ ಸ್ಥಾನ ಪಡೆದ ತಂಡಕ್ಕೆ ₹20 ಸಾವಿರ ನೀಡಲಾಗುವುದು. ಕೂಟ ದಾಖಲೆ ನಿರ್ಮಿಸುವವರು ₹25 ಸಾವಿರ ಪಡೆದುಕೊಳ್ಳಲಿದ್ದಾರೆ’ ಎಂದರು. ರಾಜೀವ ಗಾಂಧಿ ಆರೋಗ್ಯ ವಿವಿ ಸಿಂಡಿಕೇಟ್ ಸದಸ್ಯರಾದ ಡಾ.ಇಫ್ತಿಕಾರ್ ಅಲಿ, ಡಾ.ಶಿವಶರಣ್, ಸೆನೆಟ್ ಸದಸ್ಯೆ ಡಾ.ವೈಶಾಲಿ, ಕುಲಸಚಿವ ಡಾ. ಬಿ.ವಸಂತ ಶೆಟ್ಟಿ ಭಾಗವಹಿಸಿದ್ದರು.

ಆತ್ಮವಿಶ್ವಾಸದ ‘ನದಿ’ಯಲ್ಲಿ ಆರ್‌ಸಿಬಿ

ಡಬ್ಲ್ಯುಪಿಎಲ್: ಮಂದಾನ ಪಡೆಗೆ ವಾರಿಯರ್ಸ್ ಸವಾಲು



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಶ್ರೇಯಾಂಕಾ ಪಾಟೀಲ ಮತ್ತು ಸ್ಮೃತಿ ಮಂದಾನ

ನವಿ ಮುಂಬೈ (ಪಿಟಿಐ): ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಎದುರು ರೋಚಕ ಜಯ ಸಾಧಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ವನಿತೆಯರು ಭರ್ಜರಿ ಆತ್ಮವಿಶ್ವಾಸದಲ್ಲಿದ್ದಾರೆ.

ಸೋಮವಾರ ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸ್ಮೃತಿ ಮಂದಾನ ನಾಯಕತ್ವದ ಆರ್‌ಸಿಬಿಯು ಯುಪಿ ವಾರಿಯರ್ಸ್ ಎದುರು ಕಣಕ್ಕಿಳಿಯಲಿದೆ. ಈ ಪಂದ್ಯದಲ್ಲಿಯೂ ಗೆಲುವಿನ ಓಟ ಮುಂದುವರಿಸುವ ಹುಮ್ಮಸ್ಸಿನಲ್ಲಿದೆ.

ಎರಡು ವರ್ಷಗಳ ಹಿಂದೆ ಚಾಂಪಿಯನ್ ಆಗಿದ್ದ ಆರ್‌ಸಿಬಿ ತಂಡವು ಈ ಸಲ ಶುಭಾರಂಭ ಮಾಡಿದೆ. ತಂಡದಲ್ಲಿರುವ ದಕ್ಷಿಣ ಆಫ್ರಿಕಾದ ನದೀನ್ ಡಿ ಕ್ಲರ್ಕ್ ಅವರ ಆಲ್‌ರೌಂಡ್ ಆಟದ ಫಲವಾಗಿ ಮುಂಬೈಗೆ ಸೋಲುಣಿಸುವಲ್ಲಿ ಮಂದಾನ ಪಡೆ ಯಶಸ್ವಿಯಾಗಿತ್ತು. ಎಲಿಸ್ ಪೆರಿ ಗೈರು ಹಾಜರಿಯ ಚಿಂತೆಯನ್ನು ಕ್ಲರ್ಕ್ ದೂರ ಮಾಡಿದ್ದಾರೆ. ಆ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿದ್ದ ಅವರು ಬ್ಯಾಟಿಂಗ್‌ನಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು. ಅಲ್ಲದೇ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಆರ್‌ಸಿಬಿಗೆ 18 ರನ್ ಅಗತ್ಯವಿದ್ದಾಗ 6,4,6 ಮತ್ತು 4 ಹೊಡೆದಿದ್ದರು.



ಮೆಗ್ ಲ್ಯಾನಿಂಗ್

ಆದರೆ ಆರಂಭಿಕ ಬ್ಯಾಟರ್‌ಗಳ ಸಹಿತ ಅಗ್ರ ಐವರು ದೀರ್ಘ ಇನಿಂಗ್ಸ್ ಆಡುವಲ್ಲಿ ಯಶಸ್ವಿಯಾಗಿರಲಿಲ್ಲ. ಕ್ಲರ್ಕ್ ಜೊತೆಗೆ ಅರುಂಧತಿ ರೆಡ್ಡಿ (20; 25ಎ) ಉತ್ತಮ ಜೊತೆಯಾಟವಾಡಿದ್ದರು. ಆದ್ದರಿಂದ ಮೇಲಿನ ಕ್ರಮಾಂಕದ ಬ್ಯಾಟರ್‌ಗಳು ಈ ಪಂದ್ಯದಲ್ಲಿ ಲಯಕ್ಕೆ ಮರಳುವ ಅನಿವಾರ್ಯತೆ ಇದೆ. ಯುಪಿ ತಂಡದಲ್ಲಿರುವ ಸ್ಪಿನ್ನರ್ ದೀಪ್ತಿ ಶರ್ಮಾ, ಮಧ್ಯಮವೇಗಿಗಳಾದ ಕ್ರಾಂತಿ ಗೌಡ್, ಶಿಖಾ ಪಾಂಡೆ, ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಅವರನ್ನು ಎದುರಿಸಿ ನಿಲ್ಲುವ ಸವಾಲು ಆರ್‌ಸಿಬಿ ಆಟಗಾರ್ತಿಯರಿಗೆ ಇದೆ.

ಗುಜರಾತ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಯುಪಿ ತಂಡವು ಸೋತಿತ್ತು. ಆದರೆ ತಂಡದ ಬ್ಯಾಟರ್ ಫೋಬಿ ಲಿಚ್‌ಫೀಲ್ಡ್ ಅವರ ಹೋರಾಟವು ಗಮನ ಸೆಳೆದಿತ್ತು. 40 ಎಸೆತಗಳಲ್ಲಿ 78 ರನ್ ಗಳಿಸಿದ್ದರು. ನಾಯಕಿ ಮೆಗ್ ಲ್ಯಾನಿಂಗ್ 30 ಮತ್ತು ಆಶಾ ಶೋಭನಾ ಅಜೇಯ27 ರನ್ ಗಳಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಹರ್ಲೀನ್ ಡಿಯೊಲ್, ದೀಪ್ತಿ, ದಿಯಾಂದ್ರ ಡಾಟಿನ್ ಅವರು ಲಯಕ್ಕೆ ಮರಳಿದರೆ ತಂಡದ ಬ್ಯಾಟಿಂಗ್ ಬಲ ಹೆಚ್ಚಲಿದೆ. ಆರ್‌ಸಿಬಿಯ ಬೌಲಿಂಗ್ ಪಡೆಯಲ್ಲಿ ಕ್ಲರ್ಕ್ ಬಿಟ್ಟರೆ ಲಾರೆನ್ ಬೆಲ್ ಹಾಗೂ ಕರ್ನಾಟಕದ ಶ್ರೇಯಾಂಕಾ ಪಾಟೀಲ ಅವರ ಮೇಲೆ ವಿಶ್ವಾಸ ಇಡಬಹುದು.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್ ಆ್ಯಪ್

ಸೋಫಿ ಮಿಂಚು; ಜೈಂಟ್ಸ್‌ಗೆ ರೋಚಕ ಜಯ

ನವಿ ಮುಂಬೈ (ಪಿಟಿಐ): ಸೋಫಿ ಡಿವೈನ್ 5 ರನ್‌ಗಳ ಅಂತರದಿಂದ ಶತಕ ವಂಚಿತರಾದರು. ಆದರೆ, ಬೌಲಿಂಗ್‌ನಲ್ಲಿಯೂ ಮಿಂಚಿದ ಅವರು ಗುಜರಾತ್ ಜೈಂಟ್ಸ್ ತಂಡಕ್ಕೆ ರೋಚಕ ಗೆಲುವು ತಂದಿತ್ತರು.

ಡಿ.ವೈ ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಪಂದ್ಯದಲ್ಲಿ ಸೋಫಿ (95; 42 ಎ, 4x7; 6x8) ಅವರು ಅಬ್ಬರಿಸಿದರು. ನಂದನಿ ಶರ್ಮಾ (33ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್ ನಡುವೆಯೂ ಜೈಂಟ್ಸ್ 20 ಓವರ್‌ಗಳಲ್ಲಿ 209 ರನ್ ಗಳಿಸಿತು.



ನಂದನಿ ಶರ್ಮಾ

ಕಠಿಣ ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ದಕ್ಷಿಣ ಆಫ್ರಿಕಾದ ಲಿಝೆಲ್ ಲೀ (86 ರನ್; 54 ಎ, 4x12, 6x3) ಉತ್ತಮ ಅಡಿಪಾಯ ಹಾಕಿಕೊಟ್ಟರು. ಬಳಿಕ, ದಕ್ಷಿಣ ಆಫ್ರಿಕಾದ ಮತ್ತೊಬ್ಬ ಆಟಗಾರ್ತಿ ಲಾರಾ ವೊಲ್ವಾರ್ಟ್ (77; 38 ಎ; 4x9; 6x3) ಲೀ ಅವರೊಂದಿಗೆ ಎರಡನೇ ವಿಕೆಟ್‌ಗೆ 90 ರನ್ ಸೇರಿಸಿದರು.

ವೊಲ್ವಾರ್ಟ್ ಅವರು ನಾಯಕಿ ಜೆಮಿಮಾ ರಾಡ್ರಿಗಸ್ ಜೊತೆಗೂಡಿ ನಾಲ್ಕನೇ ವಿಕೆಟ್‌ಗೆ ಕೇವಲ 21 ಎಸೆತಗಳಲ್ಲಿ 58 ರನ್ ಬಾರಿಸಿದರು. 18 ಮತ್ತು 19ನೇ ಓವರ್‌ಗಳಿಂದ 41 ರನ್ ಬಾರಿಸಿದ ಡೆಲ್ಲಿ ಗೆಲುವಿನ ವಿಶ್ವಾಸದಲ್ಲಿತ್ತು. ಆದರೆ, ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಸೋಫಿ ಇವರಿಬ್ಬರ ವಿಕೆಟ್ ಕಬಳಿಸಿದರು. ಕೇವಲ ಎರಡು ರನ್ ನೀಡಿ ಗೆಲುವು ಕಸಿದರು. ಡೆಲ್ಲಿ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 205 ರನ್ ಗಳಿಸಿ ಹೋರಾಟ ಮುಗಿಸಿತು.

ಇದಕ್ಕೆ ಮೊದಲು, ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಜೈಂಟ್ಸ್ ತಂಡಕ್ಕೆ ಸೋಫಿ ಹಾಗೂ ನಾಯಕಿ ಆ್ಯಷ್ಲೆ ಗಾರ್ಡನರ್ (49; 26ಎ) ಆಸರೆಯಾದರು. ಇನಿಂಗ್ಸ್ ಆರಂಭದಿಂದಲೇ ಸೋಫಿ ಬೀಸಾಟವಾಡಿದರು. 25 ಎಸೆತಗಳಲ್ಲಿ ಅರ್ಧಶತಕ ದಾಟಿದರು. ಸ್ನೇಹ ರಾಣಾ ಅವರ ಓವರ್‌ನಲ್ಲಿ ಎರಡು ಬೌಂಡರಿ ಮತ್ತು ಸತತ ನಾಲ್ಕು ಸಿಕ್ಸರ್ ಬಾರಿಸಿದರು. ಈ ಓವರ್‌ನಲ್ಲಿ ಒಟ್ಟು 32 ರನ್‌ಗಳು ಬಂದವು. ಆದರೆ 11ನೇ ಓವರ್‌ನಲ್ಲಿ ಮಧ್ಯಮವೇಗಿ ನಂದನಿ ಶರ್ಮಾ ಅವರ ಎಸೆತದಲ್ಲಿ ಶ್ರೀಚರಣಿಗೆ ಕ್ಯಾಚಿತ್ತ ಸೋಫಿ ನಿರ್ಗಮಿಸಿದರು.

ನಂದನಿ ಅವರು ಇನಿಂಗ್ಸ್‌ನ ಅಂತಿಮ ಓವರ್‌ನಲ್ಲಿ ಹ್ಯಾಟ್ರಿಕ್ ದಾಖಲಿಸಿದರು. ಕನಿಕಾ ಅಹುಜಾ (19.4), ರಾಜೇಶ್ವರಿ ಗಾಯಕವಾಡ (19.5) ಮತ್ತು ರೇಣುಕಾ ಸಿಂಗ್ (19.6) ಅವರ ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರ್‌ಗಳಲ್ಲಿ 209 (ಸೋಫಿ ಡಿವೈನ್ 95, ಆ್ಯಷ್ಲೆ ಗಾರ್ಡನರ್ 49, ಬೆತ್ ಮೂನಿ 19, ಕಶ್ವಿ ಗೌತಮ್ 14, ಅನುಷ್ಕಾ ಶರ್ಮಾ 13, ಚೈನೆಲಿ ಹೆನ್ರಿ 43ಕ್ಕೆ2, ನಂದನಿ ಶರ್ಮಾ 33ಕ್ಕೆ5, ಶ್ರೀಚರಣಿ 42ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 205 (ಲಿಝೆಲ್ ಲೀ 86, ಲಾರಾ ವೊಲ್ವಾರ್ಟ್ 77; ಸೋಫಿ ಡಿವೈನ್ 21ಕ್ಕೆ2, ರಾಜೇಶ್ವರಿ ಗಾಯಕವಾಡ 34ಕ್ಕೆ2).

ಪಂದ್ಯದ ಆಟಗಾರ್ತಿ: ಸೋಫಿ ಡಿವೈನ್



ಅರ್ಧಶತಕ ಗಳಿಸಿದ ಗುಜರಾತ್ ಜೈಂಟ್ಸ್ ತಂಡದ ಸೋಫಿ ಡಿವೈನ್

ಡ್ರ್ಯಾಗನ್ ಬೋಟ್: ಕರ್ನಾಟಕಕ್ಕೆ 11 ಪದಕ



ಪದಕಗಳೊಂದಿಗೆ ಕರ್ನಾಟಕ ಡ್ರ್ಯಾಗನ್ ಬೋಟ್ ತಂಡದ ಆಟಗಾರರು ಮತ್ತು ಕೋಚ್ ಸಿಬ್ಬಂದಿ

ಬೆಂಗಳೂರು: ಕರ್ನಾಟಕ ತಂಡವು ಭೋಪಾಲದಲ್ಲಿ ಶುಕ್ರವಾರ ಮುಕ್ತಾಯಗೊಂಡ 14ನೇ ರಾಷ್ಟ್ರೀಯ ಡ್ರ್ಯಾಗನ್ ಬೋಟ್ ಚಾಂಪಿಯನ್‌ಷಿಪ್‌ನಲ್ಲಿ 3 ಚಿನ್ನ ಸೇರಿ ಒಟ್ಟು 11 ಪದಕಗಳನ್ನು ಗೆದ್ದುಕೊಂಡಿತು.

ಕರ್ನಾಟಕ ತಂಡವು 2 ಸಾವಿರ ಮೀ. ರೇಸ್‌ನಲ್ಲಿ ಮೂರು ಬೆಳ್ಳಿ ಗೆದ್ದರೆ, 500 ಮೀ. ಸ್ಪರ್ಧೆಯಲ್ಲಿ 2 ಚಿನ್ನ, ತಲಾ ಒಂದು ಬೆಳ್ಳಿ ಹಾಗೂ ಕಂಚು ಜಯಿಸಿತು. 200 ಮೀ. ರೇಸ್‌ನಲ್ಲಿ ಒಂದು ಚಿನ್ನ ಹಾಗೂ ಮೂರು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿತು.

ಎಸ್‌ಜಿ ಪೈಪರ್ಸ್ ಮುಡಿಗೆ ಕಿರೀಟ

ರಾಂಚಿ (ಪಿಟಿಐ): ಎಸ್‌ಜಿ ಪೈಪರ್ಸ್ ತಂಡವು ಶೂಟೌಟ್‌ನಲ್ಲಿ 3–2ರಿಂದ ಶ್ರಾಚಿ ಬೆಂಗಾಲ್ ಟೈಗರ್ಸ್ ತಂಡವನ್ನು ಮಣಿಸಿ ಎರಡನೇ ಆವೃತ್ತಿಯ ಮಹಿಳಾ ಹಾಕಿ ಇಂಡಿಯಾ ಲೀಗ್ (ಎಚ್‌ಐಎಲ್) ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಮರಾಂಗ್ ಗೋಮಕೆ ಜಯಪಾಲ್ ಸಿಂಗ್ ಮುಂಢಾ ಹಾಕಿ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಫೈನಲ್ ಪಂದ್ಯವು ನಿಗದಿತ ಅವಧಿಯಲ್ಲಿ 1–1ರಲ್ಲಿ ಡ್ರಾ ಆಗಿತ್ತು. ಬೆಂಗಾಲ್ ತಂಡದ ಲಾಲ್‌ರೆಮ್ ಸಿಯಾಮಿ 16ನೇ ನಿಮಿಷದಲ್ಲಿ ಗೋಲು ಹೊಡೆದರೆ, ಪೈಪರ್ಸ್ ತಂಡದ ಪ್ರೀತಿ ದುಬೆ (53ನೇ ನಿ.) ಸಮಬಲಕ್ಕೆ ಕಾರಣರಾದರು.

ಶೂಟೌಟ್‌ನಲ್ಲಿ ಪೈಪರ್ಸ್ ತಂಡದ ನಾಯಕಿ ನವನೀತ್ ಕೌರ್, ಜುವಾನಾ ಕ್ಯಾಸ್ಟೆಲ್ಲಾರೊ ಹಾಗೂ ಲೋಲಾ ರಿಯೆರಾ ಚೆಂಡನ್ನು ಗುರಿ ಸೇರಿಸಿದರು. ಗೋಲ್‌ಕೀಪರ್ ಬನ್ಸಾರಿ ಸೋಲಂಕಿ ಅವರು ನಿರ್ಣಾಯಕ ಸೇವ್‌ಗಳೊಂದಿಗೆ ಪೈಪರ್ಸ್ ತಂಡದ ಗೆಲುವಿಗೆ ರೂವಾರಿಯಾದರು.

ವಿಜೇತ ತಂಡಕ್ಕೆ ₹1.5 ಕೋಟಿ ಹಾಗೂ ರನ್ನರ್ಸ್ ಅಪ್ ತಂಡಕ್ಕೆ ₹1 ಕೋಟಿ ಬಹುಮಾನ ನೀಡಲಾಯಿತು. ತೃತೀಯ ಸ್ಥಾನ ಪಡೆದ ರಾಂಚಿ ರಾಯಲ್ಸ್ ತಂಡಕ್ಕೆ ₹50 ಲಕ್ಷ ದೊರೆಯಿತು. ಬೆಂಗಾಲ್ ತಂಡದ ಅಗಸ್ಟಿನಾ ಗಾರ್ಝೆಲನಿ ಟೂರ್ನಿಯ ಗರಿಷ್ಠ ಗೋಲು ಸ್ಕೋರರ್ ಎನಿಸಿದರು. ನವನೀತ್ ಕೌರ್ ಟೂರ್ನಿಯ ಆಟಗಾರ್ತಿ ಗೌರವಕ್ಕೆ ಪಾತ್ರರಾದರು. ಬನ್ಸಾರಿ ಉತ್ತಮ ಗೋಲ್‌ಕೀಪರ್ ಎನಿಸಿದರು.



